"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 12ನೇ ಅಕ್ಟೋಬರ್ 2019
ಶನಿವಾರ

## ವಿಷಯಾನುಕ್ರಮಣಿಕೆ


1. ನೂತನ ಸಚಿವರ ಪರಿಚಯ
   - ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)
2. ಸಭೆಯ ಮುಂದಿಡಲಾದ ಕಾಗದ ಪತ್ರಗಳು
3. ವಿಶೇಷ ಪ್ರಸ್ತಾವಗಳು

ಅ) ರಾಜ್ಯದ 410 ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಕ್ರಮಾತಿ, ಗೌರವಧನ ಹೆಚ್ಚಳ, ಬಾಕಿ ಇರುವ ಗೌರವಧನ ಬಿಡುಗಡೆ ಸಂಬಂಧ ಬೆಂಗಳೂರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿರುವ ಬಗ್ಗೆ

- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

ಆ) ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರು ಬೆಳೆದ ಕಬ್ಬನ್ನು ಹೊರಗಿನ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಲು ಸಾಗಾಣಿಕೆ ವೆಚ್ಚ ಕುರಿತಂತೆ

- ಶ್ರೀ ಕೆ.ಟಿ. ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಆರ್.ಅಶೋಕ (ಕಂದಾಯ ಸಚಿವರು)
- ಶ್ರೀ ಮರಿತಿಬ್ಬೇಗೌಡ

ಇ) ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಅತಿಥಿ ಉಪನ್ಯಾಸಕರ ವೇತನ ಬಿಡುಗಡೆ ಮಾಡುವ ಬಗ್ಗೆ

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

ಈ) ಒಕ್ಕಲಿಗ ಸಮುದಾಯ ಸಂಘದಲ್ಲಿನ ಅಕ್ರಮದ ಬಗ್ಗೆ

- ಶ್ರೀ ಅ.ದೇವೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4.** ವಿಶೇಷ ಪ್ರಸ್ತಾವಗಳ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಚಿವರ ಹೇಳಿಕೆ

ವಿಷಯ: ಪಹಣಿಯಲ್ಲಿ ನಮೂದಿಸಿರುವ ಬೆಳೆಗಳನ್ನು ಖರೀದಿಸಲು ಸರ್ಕಾರದ ನಿಯಮಗಳ ಬಗ್ಗೆ ಮಾಹಿತಿ ನೀಡಬೇಕೆನ್ನುವ ಬಗ್ಗೆ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**5.** ಅಭಿನಂದನೆ

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಗೋವಿಂದರಾಜ್‌ರವರು **2019-2023** ರ ಸಾಲಿನವರೆಗೆ ಭಾರತೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟದ ಅಧ್ಯಕ್ಷರಾಗಿ ಮರು ಆಯ್ಕೆಯಾಗಿರುವ ಬಗ್ಗೆ

– ಡಾ॥ ವೈ.ಎ.ನಾರಾಯಣಸ್ವಾಮಿ
– ಶ್ರೀ ಕೆ.ಟಿ. ಶ್ರೀಕಂಠೇಗೌಡ
– ಡಾ॥ ತೇಜಸ್ವಿನಿಗೌಡ
– ಶ್ರೀ ಪ್ರಕಾಶ್ ಕೆ.ರಾಥೋಡ್
– ಶ್ರೀ ಐವನ್ ಡಿ'ಸೋಜಾ
– ಶ್ರೀ ಅಲ್ಲಂ ವೀರಭದ್ರಪ್ಪ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಆರ್.ಅಶೋಕ (ಕಂದಾಯ ಸಚಿವರು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
– ಶ್ರೀ ಕೆ.ಎಸ್.ಈಶ್ವರಪ್ಪ (ಯುವಜನ ಮತ್ತು ಕ್ರೀಡಾ ಸಚಿವರು)
– ಶ್ರೀ ರಿಜ್ವಾನ್ ಅರ್ಷದ್

**6.** ಅಭಿನಂದನಾ ನಿರ್ಣಯ

**7.** <u>ನಿಯಮ **68** ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ</u>

ವಿಷಯ: ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ

– ಡಾ:ತೇಜಸ್ವಿನಿ ಗೌಡ
– ಶ್ರೀ ಕೆ.ಗೋವಿಂದರಾಜ್
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಬಸವರಾಜ ಪಾಟೀಲ್ ಇಟಗಿ
– ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)
– ಶ್ರೀ ಆರ್.ಅಶೋಕ(ಕಂದಾಯ ಸಚಿವರು)
– ಶ್ರೀ ಲೆಹರ್ ಸಿಂಗ್ ಸಿರೋಯಾ

"ತಿದ್ದುಪಡಿಯಾಗದ ಪ್ರತಿ,ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಎಂ. ನಾರಾಯಣಸ್ವಾಮಿ
- ಶ್ರೀ ಸಿ.ಎಂ. ಲಿಂಗಪ್ಪ
- ಶ್ರೀ ಐವನ್ ಡಿ'ಸೋಜಾ
- ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು)

**8.** ಪ್ರಕಟಣೆ

**9.** <u>ನಿಯಮ 68 ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ</u>

ವಿಷಯ: ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ

- ಶ್ರೀ ಆರ್.ಅಶೋಕ(ಕಂದಾಯ ಸಚಿವರು)
- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಟಿ.ಎ.ಶರವಣ
- ಶ್ರೀ ಹೆಚ್.ಎಂ.ರಮೇಶ್ ಗೌಡ
- ಎಂ.ನಾರಾಯಣಸ್ವಾಮಿ
- ಶ್ರೀ ಎಸ್.ರವಿ
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಪಿ.ಆರ್.ರಮೇಶ್
- ಶ್ರೀಮತಿ ಜಯಮ್ಮ
- ಡಾ:ಜಯಮಾಲ
- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)
- ಶ್ರೀ ಎಸ್.ರವಿಕುಮಾರ್
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಡಾ:ತೇಜಸ್ವಿನಿ ಗೌಡ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೆ.ಎ.ತಿಪ್ಪೇಸ್ವಾಮಿ

**10.** ಸಭೆಯ ಮುಂದಿಡಲಾದ ಕಾಗದ ಪತ್ರಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**11. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**(ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2019**

**– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)**

**– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಆ) ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕ, 2019**

**– ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಇ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2019**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**12. ವಿಶೇಷ ಪ್ರಸ್ತಾವಗಳ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಚಿವರ ಹೇಳಿಕೆ**

ಅ) ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಾಗಿ ನಡೆದ ನೇಮಕಾತಿ ಪರೀಕ್ಷೆಗಾಗಿ ಸಿದ್ದಪಡಿಸಿದ ಕೀ ಉತ್ತರಗಳಲ್ಲಿ ತಪ್ಪುಗಳು ಬಂದಿರುವ ಬಗ್ಗೆ.

**– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ 2006 ನಂತರ ನೇಮಕಗೊಂಡ ಶಾಲಾ ಶಿಕ್ಷಕರಿಗೆ ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಗೆ ಎನ್.ಪಿ.ಎಸ್. ಪಿಂಚಣಿ ಯೋಜನೆ ಜಾರಿಗೊಳಿಸುವ ಬಗ್ಗೆ.

**– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**

ಇ) ಪಹಣಿಯಲ್ಲಿ ನಮೂದಿಸಿದ ಬೆಳೆಯನ್ನು ಖರೀದಿಸುವ ಸರ್ಕಾರದ ನಿಯಮಗಳ ಕುರಿತು.

**– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**

ಈ) ಬೀದಿಯಲ್ಲಿ ವಾಸಿಸುತ್ತಿರುವ ಜನರಿಗೆ ತಂಗುದಾಣ ನಿರ್ಮಿಸಿಕೊಡುವುದರ ಬಗ್ಗೆ.

**– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**

**13. ನಿಯಮ 72ರ ಗಮನ ಸೆಳೆಯುವ ಸೂಚನೆಯಡಿಯಲ್ಲಿ ಪ್ರಸ್ತಾಪಿಸಲಾದ ವಿಷಯಗಳಿಗೆ ಲಿಖಿತ ಉತ್ತರಗಳ ಮಂಡನೆ**

**14. ಸಾರಾಂಶ**

------

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(188)12.10.2019,11.30,ಟಿಸಿಹೆಚ್-ಬಿಎನ್ಎಸ್

**ಕರ್ನಾಟಕ ವಿಧಾನ ಪರಿಷತ್ತು**

**ಶನಿವಾರ, 12ನೇ ಅಕ್ಟೋಬರ್ 2019**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 37 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ರವರು ಪೀಠವನ್ನು ಅಲಂಕರಿಸಿದರು.**

**1. ನೂತನ ಸಚಿವರ ಪರಿಚಯ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಸದನಕ್ಕೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಬಂದಿದ್ದಾರೆ, ಅವರನ್ನು ಈ ಸದನಕ್ಕೆ ಪರಿಚಯಿಸುತ್ತಿದ್ದೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಹಾಗೂ ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಮತಿ ಶಶಿಕಲ ಜೊಲ್ಲೆಯವರು ಸದನಕ್ಕೆ ಬಂದಿದ್ದಾರೆ, ಅವರನ್ನು ಕೂಡ ಈ ಸಭೆಗೆ ಪರಿಚಯಿಸುತ್ತಿದ್ದೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಹಾಗೂ ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಅ) 1978ರ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮದ ಪ್ರಕರಣ 8(3) ಮೇರೆಗೆ**

1963ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳ ನಿಯಮ 15(3)ನ್ನು ತಿದ್ದುಪಡಿಗೊಳಿಸಿ ದಿನಾಂಕ 28.08.2019ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಸಿಆಸುಇ 8 ಎಸ್‌ಎಂಆರ್ 2018 ಅನ್ನು ಮಂಡಿಸುತ್ತಿದ್ದೇನೆ.

ಆ) **ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಡಾ|| ಅಶ್ವತ್ಥ್‌ನಾರಾಯಣ.ಸಿ.ಎನ್. ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ):-**

**ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 50(2)ರನ್ವಯ** ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 2018-19ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಇ) **ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ, ಉಪ ಮುಖ್ಯಮಂತ್ರಿಗಳ ಪರವಾಗಿ):-**

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ 2009 ರ ಕಲಂ 40(3) ಮತ್ತು 57 ರಂತೆ**

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 2018-19ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**ಈ) ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಪರವಾಗಿ):-**

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 300ರ ಉಪ ಪ್ರಕರಣ(5)ರನ್ವಯ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2017-18 ಮತ್ತು 2018-19ನೇ ಸಾಲಿನ ವಾರ್ಷಿಕ ಆಡಳಿತ ವರದಿ.

**ಉ) ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮಾನ್ಯ ಒಳಾಡಳಿತ ಹಾಗೂ ಸಹಕಾರ ಸಚಿವರ ಪರವಾಗಿ):-**

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12(7)ರನ್ವಯ**

ಶ್ರೀ ವಿ.ಕೃಷ್ಣಮೂರ್ತಿ, ಜೈಲರ್ ಮತ್ತು ಶ್ರೀ ಎಂ.ಸುಂದರ್, ಸಹಾಯಕ ಅಧೀಕ್ಷಕರು ಇವರುಗಳ ವಿರುದ್ಧದ ಶಿಸ್ತು ಕ್ರಮವನ್ನು ಮುಕ್ತಾಯಗೊಳಿಸುವ ಕುರಿತು ಉಭಯ ಸದನಗಳಿಗೆ ಸಲ್ಲಿಸುವ ವಿವರಣಾತ್ಮಕ ಟಿಪ್ಪಣಿಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

## 3. ವಿಶೇಷ ಪ್ರಸ್ತಾವಗಳು

**ಅ)** ರಾಜ್ಯದ 410 ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಕ್ರಮಾತಿ, ಗೌರವಧನ ಹೆಚ್ಚಳ, ಬಾಕಿ ಇರುವ ಗೌರವಧನ ಬಿಡುಗಡೆ ಸಂಬಂಧ ಬೆಂಗಳೂರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿರುವ ಬಗ್ಗೆ.

-----

**ಶ್ರೀ ಮರಿತಿಬ್ಬೇಗೌಡ (ಜನತಾದಳ (ಜಾ) ಶಾಸಕಾಂಗ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ರಾಜ್ಯದ 410 ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಕ್ರಮಾತಿ, ಗೌರವಧನ ಹೆಚ್ಚಳ, ಬಾಕಿ ಇರುವ ಗೌರವಧನ ಬಿಡುಗಡೆ ಸಂಬಂಧ ಬೆಂಗಳೂರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿದ್ದಾರೆ.

ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಬೋಧನೆ, ಪರೀಕ್ಷಾ ಕಾರ್ಯ, ಮೌಲ್ಯಮಾಪನ ಕಾರ್ಯಗಳಲ್ಲಿ ತೊಡಗಿಸಿಕೊಂಡು ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಾ ಬಂದಿದ್ದಾರೆ.

ಹಿಂದಿನ ಸಮ್ಮಿಶ್ರ ಸರ್ಕಾರದಲ್ಲಿ ತಲಾ 5 ಸಾವಿರ ರೂಪಾಯಿಗಳು ಗೌರವಧನ ಹೆಚ್ಚು ಮಾಡಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ. ಆದರೆ, ಇದುವರೆವಿಗೂ ಅನುಮೋದನೆ ದೊರೆತಿರುವುದಿಲ್ಲ. ಈ ಪ್ರಸ್ತಾವನೆಯ ಅನುಮೋದನೆಗೆ ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಲಿ ನೀಡುತ್ತಿರುವ 13,000 ಮತ್ತು 11,000 ಗೌರವಧನ ಕಳೆದ 3 ತಿಂಗಳುಗಳಿಂದ ಬಾಕಿ ಇದ್ದು, ಕೂಡಲೇ ಅದನ್ನು ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸುತ್ತೇನೆ. ಅಲ್ಲದೆ, ಅರ್ಹ ವಿದ್ಯಾರ್ಹತೆಯುಳ್ಳ ಅತಿಥಿ ಉಪನ್ಯಾಸಕರನ್ನು ಸಕ್ರಮಾತಿಗೊಳಿಸಲು ವಿಶೇಷ ನಿಯಮಾವಳಿಯನ್ನು ರೂಪಿಸಬೇಕೆಂದು ಈ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ನಾನು ಮನವಿ ಮಾಡುತ್ತಿದ್ದೇನೆ.

**(ಮುಂದು...)**

**(189)12.10.2019/11.40/ಎಂ.ಎಂ-ಕೆ.ಎಸ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಮರಿತಿಬ್ಬೇಗೌಡರು ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ, ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಅವರಿಗೆ ರವಾನಿಸುತ್ತೇವೆ.

ಆ) ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರು ಬೆಳೆದ ಕಬ್ಬನ್ನು ಹೊರಗಿನ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಲು ಸಾಗಾಣಿಕೆ ವೆಚ್ಚ ಕುರಿತಂತೆ.

- - -

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆ ಮತ್ತು ಪಾಂಡವಪುರದ ಪಿ.ಎಸ್.ಎಸ್.ಕೆ. ಕಾರ್ಖಾನೆಗಳು ಆರಂಭವಾಗದ ಹಿನ್ನೆಲೆಯಲ್ಲಿ ಈ ವ್ಯಾಪ್ತಿಯಲ್ಲಿ ರೈತರು ಬೆಳೆದಂತಹ ಕಬ್ಬನ್ನು ಹೊರಗಿನ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಬೇಕಾದಂತಹ ಅನಿವಾರ್ಯತೆ ಸೃಷ್ಟಿಯಾಗಿದೆ. ಹೊರಗಿನ ಕಾರ್ಖಾನೆಗಳು ಈ ಭಾಗದ ರೈತರ ಕಬ್ಬನ್ನು ಕಟಾವು ಮಾಡಲು ವಿಳಂಬ ಮಾಡುತ್ತಿದ್ದು, ಇದು ರೈತರಲ್ಲಿ ಆತಂಕದ ವಾತಾವರಣವನ್ನು ಉಂಟು ಮಾಡಿದೆ.

ಅಲ್ಲದೆ ಈ ಭಾಗದ ಕಬ್ಬನ್ನು ಹೊರಗಿನ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಲು ಟನ್ 1ಕ್ಕೆ 400/- ರೂಗಳ ಸಾಗಾಣಿಕೆ ವೆಚ್ಚವನ್ನು ರೈತರು ಭರಿಸಬೇಕಾಗಿದೆ. ಅಲ್ಲದೆ ಕಟಾವು ಮಾಡಲು ಆಳುಗಳು ಸಹ ಸಿಗದ ಕಾರಣ ರೈತರು ಪ್ರತಿ ಟನ್ ಕಬ್ಬಿಗೆ 400 ರಿಂದ 500 ರೂಗಳನ್ನು ನೀಡುವ ಪರಿಸ್ಥಿತಿ ಉಂಟಾಗಿದ್ದು, ಇದರಿಂದ ರೈತರಿಗೆ ಆಗುತ್ತಿರುವ ಖರ್ಚಿನ ಲೆಕ್ಕ ಹಾಕಿದರೆ ರೈತರಿಗೆ ಅಪಾರವಾದ ನಷ್ಟ ಉಂಟಾಗುತ್ತದೆ, ಅಲ್ಲದೆ ರೈತರು ಬೆಳೆದ ಕಬ್ಬು ಈಗಾಗಲೇ 15 ರಿಂದ 17 ತಿಂಗಳುಗಳಾಗಿದ್ದು ಇದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಳುವರಿ ಸಹ ಕಡಿಮೆಯಾಗಿ ನಷ್ಟ ಉಂಟಾಗುವಂತಹ ಸಂಭವ ಹೆಚ್ಚಾಗಿದೆ, ಈ ಎಲ್ಲಾ ಸಮಸ್ಯೆಗಳಿಂದಾಗಿ ಈ ಭಾಗದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಈ ಹಿಂದೆ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಇಂತಹದೇ ಸಂದರ್ಭ ಸೃಷ್ಟಿಯಾದಾಗ ರೈತರಿಗೆ ಸಾಗಾಣಿಕೆ ವೆಚ್ಚವನ್ನು ಭರಿಸುವ ಮೂಲಕ ಅನುಕೂಲ ಮಾಡಿಕೊಟ್ಟಿದ್ದರು ಹಾಗೂ ಹೊರ ಜಿಲ್ಲೆಗಳ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಲು ಅವಕಾಶ ಮಾಡಿಕೊಟ್ಟಿದ್ದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತಾ ಇಂದಿನ ಸರ್ಕಾರ ವಿಳಂಬ ಮಾಡದೆ ರೈತರ ಕಬ್ಬನ್ನು ಕಟಾವು ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು, ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಬೇಕು ಹಾಗೂ ಕಟಾವು ಮತ್ತು ಸಾಗಾಣಿಕೆ ವೆಚ್ಚದಲ್ಲಿ ರೈತರಿಗೆ ಅನುಕೂಲವಾಗುವಂತೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಆಗ್ರಹಿಸುತ್ತೇನೆ. ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಮತ್ತು ಪಾಂಡವಪುರದ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಲು ಎಲ್ಲಾ ರೀತಿಯ ಕ್ರಮಕ್ಕೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮಾತನ್ನು ಕೊಟ್ಟಿರುವ ಹಾಗೆ ಮುಂದಾಗಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಕೆ.ಟಿ. ಶ್ರೀಕಂಠೇಗೌಡರು ನಿಯಮ 330ಎ ಅಡಿಯಲ್ಲಿ ಮಾಡಿರುವ ವಿಶೇಷ ಪ್ರಸ್ತಾವನೆಗೆ ಮಾನ್ಯ ಸಕ್ಕರೆ ಸಚಿವರಿಂದ ಉತ್ತರವನ್ನು ರವಾನಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ವಿಷಯವಾಗಿದ್ದು ಎರಡು ಕಾರ್ಖಾನೆಗಳು ಆರಂಭವಾಗದೆ ರೈತರು ಆತಂಕದಲ್ಲಿದ್ದಾರೆ. ಸಾಗಾಣಿಕೆ ವೆಚ್ಚವನ್ನು ಭರಿಸುವವರು ಯಾರು? ಸಾಗಾಣಿಕೆ ವೆಚ್ಚ ಒಂದು ಟನ್‌ಗೆ 400 ರೂ.ಕ್ಕಿಂತ ಇನ್ನೂ ಹೆಚ್ಚಾಗುತ್ತದೆ. ಸುಮಾರು 600 ರೂ.ಗಳು ನೀಡುವ ಪರಿಸ್ಥಿತಿ ಉಂಟಾಗಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇವತ್ತು ಏನಾದರೂ ಮಾಡಿ ಉತ್ತರ ಕೊಡಿಸಿ. ಇದರಿಂದ ನಮ್ಮ ಜಿಲ್ಲೆಯಲ್ಲಿ ದೊಡ್ಡ ಪ್ರತಿಭಟನೆಯೇ ಆಗುತ್ತಿದೆ, ಜನರು ಕಷ್ಟಕ್ಕೆ ಸಿಲುಕಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಉತ್ತರಕ್ಕಿಂತ ಪರಿಹಾರ ಬೇಕಾಗಿದೆ. ನಿಮ್ಮ ಉತ್ತರದಿಂದ ನಮಗೆ ತೃಪ್ತಿಯಾಗುವುದಿಲ್ಲ, ನಮಗೆ ಪರಿಹಾರ ಕೊಡಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್. ಅಶೋಕ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಎಲ್ಲಾ ರೈತರನ್ನು ಮತ್ತು ಕಾರ್ಖಾನೆಗಳ ಮಾಲೀಕರನ್ನು ಕರೆದು ಮಂಡ್ಯದಲ್ಲಿ ಒಂದು ಸಭೆಯನ್ನು ಮಾಡಿದ್ದೇನೆ. ಅಂದು ಸುಮಾರು ಎರಡು ಗಂಟೆಗಳ ಕಾಲ ಸಭೆ ನಡೆದಿದೆ. Ultimately, ಪಾಂಡವಪುರ ಮತ್ತು ಮಂಡ್ಯದ ಸಕ್ಕರೆ ಕಾರ್ಖಾನೆಗಳು ಮುಚ್ಚಿವೆ. ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕೆಂದು ಹಿಂದಿನ ಸರ್ಕಾರ ಕೂಡ ಅದನ್ನು ಲೀಸ್ ಕೊಟ್ಟು ಮಾಡಬೇಕೆಂದಿದೆ. ಅದನ್ನು ಮಾಡಿದರೆ ಈ ಕೆಲಸ ಆಗುವುದಿಲ್ಲ, ಇನ್ನೂ ಒಂದು ವರ್ಷ ಮುಂದಕ್ಕೆ ಹೋಗಬೇಕಾಗುತ್ತದೆ. ಎರಡೂ ಕಾರ್ಖಾನೆಗಳು ಕಬ್ಬನ್ನು ಅರೆಯಬೇಕಾದುದು ಬಹಳ ಮುಖ್ಯವಾಗಿದೆ. ಅದಕ್ಕೋಸ್ಕರ ಸಭೆಯನ್ನು ಕರೆಯಲಾಗಿತ್ತು. ಯಾರ್ಯಾರ ಕಾರ್ಖಾನೆಗಳಿವೆ, ಅವರು ಹೆಚ್ಚು ಕಬ್ಬನ್ನು ಅರೆಯಬೇಕೆಂದು ಕೇಳಿದ್ದರು, ಈಗ ಅರೆಯುತ್ತಿರುವ ಕಬ್ಬಿಗಿಂತ ಶೇ.30 ರಷ್ಟು ಹೆಚ್ಚುವರಿಯಾಗಿ ಕಬ್ಬನ್ನು ಅರೆಯಬೇಕು. ಉಳಿದಂತಹ ಕಬ್ಬನ್ನು ಬೇರೆ ರಾಜ್ಯಕ್ಕೆ/ಹೊರಜಿಲ್ಲೆಗೆ ಕಳುಹಿಸಿಕೊಡಬೇಕು. ಇದರಿಂದ ತೊಂದರೆಯಾಗುವುದೇನೆಂದರೆ, ಸಾಗಾಣಿಕೆ ಮಾಡುವುದು. ಇಲ್ಲಿ ಆದರೆ 30-40 ಕಿ.ಮೀ ಹೊರಗಡೆ ಸಾಗಾಣಿಕೆ ಮಾಡಬಹುದು. ಸಾಗಾಣಿಕೆ ವೆಚ್ಚವು ರೈತರ ಮೇಲೆ ಬೀಳುತ್ತಿದೆ. ಸುಮಾರು 800 ರಿಂದ 900 ರೂಪಾಯಿಗಳು ರೈತರ ಮೇಲೆ ಹೊರೆ ಬೀಳುತ್ತಿದೆ. ಅದಕ್ಕೆ ರೈತರು ಎಲ್ಲಾ ಹಣವೂ ಸಾಗಾಣಿಕೆ ವೆಚ್ಚಕ್ಕೇ ಹೋದರೆ ನಮಗೆ ಏನೂ ಹಣ ಸಿಗುವುದಿಲ್ಲ ಎಂದು ಹೇಳುತ್ತಾರೆ. ಸರ್ಕಾರ ಅವರ ನೆರವಿಗೆ ಬರಬೇಕೆಂದು; ಸಾಗಾಣಿಕೆ ವೆಚ್ಚದಲ್ಲಿ ಸರ್ಕಾರ ಕೂಡ ಭಾಗಿಯಾಗಿ ರೈತರು, ಕಾರ್ಖಾನೆ ಮಾಲೀಕರು ಮತ್ತು ಸರ್ಕಾರ ಕೂಡ ಅದಕ್ಕೆ contribute ಮಾಡಿದರೆ ಕಬ್ಬನ್ನು ಅಲ್ಲಿಗೆ ಸಾಗಿಸಿ ಅರೆಯುವಂತಾಗುತ್ತದೆ, ಅದರಿಂದ ರೈತರಿಗೆ ತಕ್ಕ ಬೆಲೆ ಸಿಗುತ್ತದೆ ಎಂದು ಮುಖ್ಯಮಂತ್ರಿಗಳ ಬಳಿ ಮಾತನಾಡಿದ್ದೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ಅಲ್ಲಿ ಮತ್ತೊಂದು ಸಮಸ್ಯೆ ಏನಿದೆ ಎಂದರೆ, ಮಧ್ಯವರ್ತಿಗಳು ಕಬ್ಬನ್ನು ತಾವು ಸರಬರಾಜು ಮಾಡುತ್ತೇವೆಂದು ಒಂದು ಟನ್‌ಗೆ 1000 ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ರೈತರಿಗೆ ಮಧ್ಯವರ್ತಿಗಳ ಹಾವಳಿ ಬಹಳ ಜೋರಾಗಿದೆ. ಕಾರ್ಖಾನೆಗಳು ಇಂತಹ ಏಜೆಂಟರ ಮೂಲಕವೇ ಸಂಪಾದನೆ ಮಾಡಿಕೊಳ್ಳುವುದಕ್ಕೆ ಮುಂದಾಗಿದ್ದಾರೆ. ಹಿಂದೆ ಸರ್ಕಾರವೇ ಸಾಗಾಣಿಕೆ ವೆಚ್ಚ ಕೊಟ್ಟಂತಹ ನಿದರ್ಶನ ನಮ್ಮ ಎದುರಿಗಿದೆ. ಮೈಷುಗರ್ ಸಕ್ಕರೆ ಕಾರ್ಖಾನೆ ಸರ್ಕಾರಿ ಕಾರ್ಖಾನೆಯಾಗಿದ್ದು ಅದು ಕಬ್ಬನ್ನು ಅರೆಯಬೇಕಾಗಿತ್ತು, ಅದನ್ನು ಪ್ರಾರಂಭ ಮಾಡಲು ಆಗಲಿಲ್ಲ, ಅದಕ್ಕೆ ಸರ್ಕಾರ ಜವಾಬ್ದಾರಿ ಹೊರಬೇಕಲ್ಲವೇ? ದಯಮಾಡಿ ಸಾಗಾಣಿಕೆ ವೆಚ್ಚ ಕೊಡಿಸುವುದು ಮತ್ತು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಬೇಕಾಗಿದೆ. 12 ತಿಂಗಳಿಗೆ ಕಬ್ಬನ್ನು ಕಟಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕಾಗಿದ್ದು, ಈಗಾಗಲೇ 16-17 ತಿಂಗಳುಗಳಾಗಿವೆ. ಕೂಡಲೇ ತಾವು ಬೇರೆ ಕಾರ್ಖಾನೆಗಳನ್ನು ಒಪ್ಪಿಸಿ ಸರಬರಾಜು ಮಾಡಿಕೊಳ್ಳುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಇದು ನನ್ನ ಗಮನಕ್ಕೂ ಬಂದಿದೆ. ಯಾರು ಮಧ್ಯವರ್ತಿಗಳಿದ್ದಾರೆ ಅವರು ಇಂತಹ ಹೊಲವನ್ನೇ ಮಾತ್ರ ಕಡಿಯಬೇಕೆಂದು ತಿಳಿಸಿದ್ದೇವೆ. ಅಲ್ಲಿ 14 ತಿಂಗಳಿಗೆ ಕೆಲವು ಬೆಳೆ ಬಂದಿರುವುದು ಇದೆ. 12, 13 ಮತ್ತು 14 ತಿಂಗಳಿಗೆ ಬೆಳೆ ಬಂದಿರುವುದು ಇದೆ. ನಮ್ಮ ಆದ್ಯತೆ ಇರುವುದು 14 ತಿಂಗಳಿಗೆ ಬಂದಿರುವ ಬೆಳೆಯನ್ನು ಕಟಾವು ಮಾಡಬೇಕೆಂದು ಹೇಳಿದ್ದೇವೆ. ಅದನ್ನು ಬಿಟ್ಟು ಮಧ್ಯವರ್ತಿಗಳು ಅವರಿಗೆ ಯಾರ ಹೊಲ ಬೇಕೋ ಆ ಹೊಲವನ್ನು ಮಾತ್ರ ಕಟಾವು ಮಾಡಿಕೊಂಡು ಹೋಗಿದ್ದಾರೆ. ಇಲ್ಲಿ influence ಮತ್ತು ಮಧ್ಯವರ್ತಿಗಳ ಕೈವಾಡ ನಡೆಯುತ್ತಿದೆ. ಇದರ ಬಗ್ಗೆ ಕೂಡ ನಾನು ಹೇಳಿದ್ದೇನೆ. ಆ ರೀತಿ ಮಾಡುವ ಹಾಗಿಲ್ಲ ಎಂದು ಹೇಳಿದ್ದೇನೆ. ನಾನು ಪ್ರಾಮಾಣಿಕವಾಗಿ ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡಿದ್ದೇನೆ. ಅವರು ಭರವಸೆ ಕೊಟ್ಟಿದ್ದಾರೆ, ಸುಮಾರು 5 ಕೋಟಿ ಅಥವಾ 6 ಕೋಟಿ ಸಾಗಾಣಿಕೆ ವೆಚ್ಚ ಬರಬಹುದು, ನನಗೆ ಸರಿಯಾಗಿ ಗೊತ್ತಿಲ್ಲ, ಅಷ್ಟು ಹಣವನ್ನು ಸರ್ಕಾರದಿಂದ ಕೊಟ್ಟು ರೈತರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಮುಖ್ಯಮಂತ್ರಿಯವರ ಜೊತೆ ಮಾತನಾಡಿದ್ದೇನೆ, ಪತ್ರವನ್ನು ಕೂಡ ಕಳುಹಿಸಿದ್ದೇನೆ, ಅದಕ್ಕೆ ಮುಖ್ಯಮಂತ್ರಿಗಳು ಅನುಮೋದನೆ ಕೊಡುತ್ತಾರೆ ಎನ್ನುವ ವಿಶ್ವಾಸ ಇದೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಏನು ತೊಂದರೆ? ಏತಕ್ಕೆ ಪ್ರಾರಂಭ ಮಾಡುತ್ತಿಲ್ಲ? What is the problem to start the factory?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಮಾಡುವುದಕ್ಕೆ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಮಾಡಬೇಕಲ್ಲವೇ. ಅದು ಕೂಡ ಸರ್ಕಾರಿ ಕಾರ್ಖಾನೆಯಾಗಿದ್ದು, ಏಷ್ಯಾದಲ್ಲೇ ಇದೊಂದೇ ಸರ್ಕಾರಿ ಸಕ್ಕರೆ ಕಾರ್ಖಾನೆ ಇರುವಂಥದ್ದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮೈಷುಗರ್ ಸಕ್ಕರೆ ಕಾರ್ಖಾನೆಯು ಒಂದು ಸರ್ಕಾರಿ ಕಾರ್ಖಾನೆಯಾಗಿದೆ. ನಾನು ಈ ಸದನಕ್ಕೆ ಬಂದಾಗಿನಿಂದ ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಅದರಿಂದ ಒಂದು ದಿವಸವಾದರೂ ರೈತರಿಗೆ ಉಪಯೋಗ, ಲಾಭವಾಗಿದೆಯೇ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನೇಕೆ ಇಟ್ಟುಕೊಂಡಿದ್ದೀರಿ? ಅದನ್ನು ಪ್ರಾರಂಭ ಮಾಡುವುದಕ್ಕಿಂತ 20 ಪಟ್ಟು ಹೆಚ್ಚು ಸರ್ಕಾರದ ಹಣ ಖರ್ಚಾಗಿದೆ. ಈ ಕಾರ್ಖಾನೆ ಏಕೆ ಬೇಕು ಅದನ್ನು ತಿಳಿಸಿ.

**ಶ್ರೀ ಆರ್. ಅಶೋಕ:-** ಮಾನ್ಯ ಬಸವರಾಜ ಹೊರಟ್ಟಿಯವರೇ, ತಾವು ಹಿರಿಯ ಸದಸ್ಯರು ಅದನ್ನು ಏನು ಮಾಡಬೇಕೆಂದು ಒಂದು ಸಲಹೆ ಕೊಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಅದನ್ನು ನಿಲ್ಲಿಸಿಬಿಡಿ. ಬೇರೆ ಕಡೆ ಅದಕ್ಕೆ ಜಾಗ ಕೊಡಿ. ಬೇರೆಯವರಿಗೆ ಮಾಡುವುದಕ್ಕೆ ಕೊಡಿ.

(ಗೊಂದಲ)

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಹೇಳುತ್ತಿರುವುದು ಕೂಡ ಬಹಳ ಗಂಭೀರವಾದ ವಿಚಾರವಾಗಿದೆ, ಅದರ ಬಗ್ಗೆ ಯೋಚನೆ ಮಾಡಬೇಕು. ಆ ಕಾರ್ಖಾನೆಗೆ ಕೊಟ್ಟಿರುವ ಹಣ ಏನಿದೆ ಅದು ಬಿ.ಜೆ.ಪಿ, ಜೆ.ಡಿ.ಎಸ್ ಮತ್ತು ಕಾಂಗ್ರೆಸ್ ಈ ಮೂರು ಪಕ್ಷದ ಸರ್ಕಾರದವರು ಕೊಟ್ಟಿರುವ ಹಣವನ್ನೆಲ್ಲಾ ಸೇರಿಸಿ ಲೆಕ್ಕ ಮಾಡಿದರೆ ಅಂತಹ 3 ಕಾರ್ಖಾನೆಗಳನ್ನು ಪ್ರಾರಂಭ ಮಾಡಬಹುದು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ಇದು ಸ್ವಾತಂತ್ರ್ಯಪೂರ್ವದಲ್ಲಿಯೇ ಬ್ರಿಟಿಷರ ಕಾಲದಲ್ಲಿ ಪ್ರಾರಂಭವಾದ ಕಾರ್ಖಾನೆ. ಈಗ ಹೊಸ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕಾಗಿದೆ. ಅದು ನೂರಾರು ವರ್ಷಗಳ ಹಳೆಯ ಕಾರ್ಖಾನೆಯಾಗಿದೆ. ಕಳೆದ ಬಜೆಟ್‌ನಲ್ಲಿ ಮುಖ್ಯಮಂತ್ರಿಯವರು ಹೊಸ ಕಾರ್ಖಾನೆಯನ್ನು ಮಾಡುತ್ತೇವೆಂದು ಮಾತು ಕೊಟ್ಟಿದ್ದಾರೆ, ಅದಕ್ಕಾಗಿ 100 ಕೋಟಿ ರೂಪಾಯಿಗಳನ್ನು ಎತ್ತಿಟ್ಟಿದ್ದಾರೆ. ಹೊಸ ಮಿಲ್ಲನ್ನು ಹಾಕಬೇಕು.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಪ್ರತಿ ಸರ್ಕಾರಕ್ಕೂ ಯಾವ ಸೆಂಟಿಮೆಂಟನ್ನು ತರುತ್ತಾರೆಂದರೆ, ಲಾಬಿ ಎಂದರೆ, ಅದನ್ನು ವಿಶ್ವೇಶ್ವರಯ್ಯನವರು ಪ್ರಾರಂಭ ಮಾಡಿದ್ದು, ಅದರ ವಿಚಾರ ಬಂದ ತಕ್ಷಣ ಇರಲಿ, ಅವರು ಪ್ರಾರಂಭ ಮಾಡಿದ್ದು ಎನ್ನುವ ಹೆಸರಿನ ಮೇಲೆ ನಾವು ಮಾಡುತ್ತಿದ್ದೇವೆ. ಅದಕ್ಕೋಸ್ಕರ ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವ ಬಗ್ಗೆ ಹಿಂದೆ ಇದ್ದ ಸರ್ಕಾರ ರೈತರ ಜೊತೆ ಮಾತನಾಡಿದೆ, ನಾನು ಕೂಡ ಪ್ರಭಾವಿ ರೈತ ಸಂಘದವರ ಜೊತೆ ಮಾತನಾಡಿದ್ದೇನೆ. ನೀವು ಏನಾದರೂ ಮಾಡಿ ಕಬ್ಬನ್ನು ಅರೆಯಿರಿ ಎಂದು ಹೇಳಲಾಗಿದೆ. ಅದಕ್ಕೆ ನನಗನಿಸುವುದೇನೆಂದರೆ, ಈಗ ಅದಕ್ಕೆ ಚಾಲನೆ ಕೊಟ್ಟರೆ 3-4 ತಿಂಗಳಿನಲ್ಲಿ ಕಾರ್ಖಾನೆಯನ್ನು ರಿಪೇರಿ ಮಾಡಿ ನಡೆಸುವುದಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವಕಾಶವಾಗುತ್ತದೆ. ಮೊದಲು ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ಮಾಡುತ್ತೇವೆ. ಇದರಲ್ಲಿ ಬಹಳಷ್ಟು ಅವ್ಯವಹಾರಗಳಾಗಿವೆ, ಅದನ್ನು ತನಿಖೆ ಮಾಡಬೇಕೆಂದು ಪ್ರಶ್ನೆ ಬಂದಿದೆ. ಅದಕ್ಕಿಂತ ಮುಂಚೆ ಅಲ್ಲಿನ ರೈತ ಸಂಘದವರನ್ನು, ಅಲ್ಲಿನ ಚುನಾಯಿತ ಪ್ರತಿನಿಧಿಗಳ ಸಭೆ ಕರೆದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವ ಬಗ್ಗೆ ಯೋಚನೆ ಮಾಡೋಣ, ಏಕೆಂದರೆ, ಎರಡು ಕಡೆ ವಾದ ಮಂಡನೆ ಮಾಡುವವರು ಇದ್ದಾರೆ.

(ಮುಂದು)

(190)12-10-2019 /11-50 /ಕೆಹೆಚ್-ಕೆಎಸ್ 13

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್. ಅಶೋಕ್ (ಮುಂದು):-** ಈಗ ಅದೇ ಒಂದು ಲಾಬಿಯಾಗಿ ಬಿಟ್ಟಿದೆ. ಪ್ರತಿ ಸರ್ಕಾರ ಬಂದಾಗಲೂ ಯಾರಾದರೊಬ್ಬರೂ ಗಟ್ಟಿಯಾಗಿ ನಿಂತುಕೊಂಡು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಹೋಗಿ ದುಡ್ಡು ತೆಗೆದುಕೊಂಡು ಹೋಗುತ್ತಾರೆ. ನಂತರ ಇವರ ಬಗ್ಗೆ ನಾವು ಕೇಳುವುದಿಲ್ಲ. ಅವರ ಮನಸ್ಸಿಗೆ ಬಂದ ಹಾಗೆ ಮಾಡಿರುತ್ತಾರೆ.

ಇನ್ನು ಎರಡನೆಯ ವಿಷಯಕ್ಕೆ ಸ್ವಲ್ಪ ಕಾಲಾವಕಾಶವನ್ನು ಕೊಡಬೇಕು. ಮುಂದಿನ ದಿನಗಳಲ್ಲಿ ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವಂತಹ ಕೆಲಸಕ್ಕೆ ಅವಕಾಶ ಮಾಡಿಕೊಡುತ್ತೇವೆ. ರೈತರಿಗೆ ಬೀಳುತ್ತಿರುವ transportation charges ಹೊರೆಯನ್ನು ತಪ್ಪಿಸುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರದವರು ರೈತರಿಗೆ ಬೀಳುತ್ತಿರುವ transportation charges ಹೊರೆಯನ್ನು ಭರಿಸಿದರೆ ಮುಗಿಯುತ್ತದೆ.

**ಶ್ರೀ ಆರ್. ಅಶೋಕ್(ಕಂದಾಯ ಇಲಾಖೆ):-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಿಸಿದಂತೆ, ನಾವು ಮೂರು ಜನ ಸಚಿವರು ಸೇರಿ ಮಾತನಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕಾದರೆ ಇನ್ನು 4 ರಿಂದ 5 ತಿಂಗಳಾಗುತ್ತದೆ. ಅಲ್ಲಿಯವರೆಗೆ ಕಬ್ಬನ್ನು ಅರೆಯುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಂದರೆಯಾಗುತ್ತದೆ. 14-15 ತಿಂಗಳುಗಳ ಕಬ್ಬನ್ನು ಅರೆಯುವುದಕ್ಕೆ ನಿಧಾನವಾದರೆ, ಅದರ ತೂಕ ಕಡಿಮೆಯಾಗಿ ಬೆಲೆ ಕಡಿಮೆಯಾಗುತ್ತದೆ ಮತ್ತು ಕಾರ್ಖಾನೆಯಲ್ಲಿ ಇಳುವರಿ ಕಡಿಮೆಯಾಗುವುದರಿಂದ ಅವರು ಸಹ ಈ ಕಬ್ಬನ್ನು ತೆಗೆದುಕೊಂಡು ಹೋಗುವುದಿಲ್ಲ. ಈ ಕಬ್ಬುಗಳನ್ನು ಸುಡುವಂತಹ ಪರಿಸ್ಥಿತಿ ಉದ್ಭವವಾಗುತ್ತದೆ. ಆದ್ದರಿಂದ ತ್ವರಿತವಾಗಿ ಸರ್ಕಾರವು transportation charges ಅನ್ನು bear ಮಾಡಬೇಕು. ರೈತರ ಮೇಲೆ ಹೊರೆ ಬೀಳಬಾರದು.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರವರೇ, ಹೊಳೆ ನರಸೀಪುರ ತಾಲ್ಲೂಕಿನಲ್ಲಿಯೂ ಸಹ ಒಂದು ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೌದು, ಹೊಳೆ ನರಸೀಪುರ ತಾಲ್ಲೂಕಿನಲ್ಲಿ ಹೇಮಾವತಿ ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗಿದೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಆ ಹೇಮಾವತಿ ಸಕ್ಕರೆ ಕಾರ್ಖಾನೆಯನ್ನು privatization ಮಾಡಿದ್ದು, ಇನ್ನು ಒಂದು ತಿಂಗಳೊಳಗೆ ಪ್ರಾರಂಭ ಮಾಡುತ್ತಾರೆ. ಈ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವುದಕ್ಕೆ ಪ್ರಾರಂಭ ಮಾಡಿದರೆ ಶೇಕಡ 10 ರಷ್ಟು ಕಬ್ಬು ಅಲ್ಲಿಗೂ ಹೋಗುತ್ತದೆ. ಆ ಕಾರ್ಖಾನೆಯವರು ಈ ತಿಂಗಳಿನಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ಹಿಂದೆ The Mysore Sugar Co. Ltd. factory ಬಗ್ಗೆ ಒಂದು ನಿರ್ಣಯವಾಗಿದೆ. ಇದನ್ನು ಆಯವ್ಯಯದಲ್ಲಿಯೂ ಸಹ ಸೇರ್ಪಡೆ ಮಾಡಿದ್ದಾರೆ. ಇದು ಹಳೇ ಮಿಲ್ ಆಗಿರುವುದರಿಂದ, ಅಲ್ಲಿ ಒಂದು ಹೊಸ ಮಿಲ್ ಹಾಕೋಣವೆಂದು ನಿರ್ಣಯವಾಗಿದೆ. 100 ಕೋಟಿ ರೂಪಾಯಿಗಳನ್ನು provide ಮಾಡಿದ್ದಾರೆ. ಹೊಸ ಮಿಲ್‌ನ್ನು ಹಾಕುವುದರ ಬಗ್ಗೆ ಸರ್ಕಾರದ ಕಡೆಯಿಂದ ಸಮೀಕ್ಷೆ ನಡೆಯುತ್ತದೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಿಲ್‌ಗೆ ಕೊಟ್ಟಿರುವ ಹಣವೆಲ್ಲಾ ಕಾಣೆ ಆಗಿಬಿಟ್ಟಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅದೆಲ್ಲಾ ರಿಪೇರಿ ಕಾರಣಕ್ಕಾಗಿ ಹೋಗಿದೆಯಷ್ಟೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಬ್ಬು ಸಾಗಾಣಿಕೆಯ ಬಗ್ಗೆ ಮಾನ್ಯ ಸಚಿವರು ಮಾಡಿರುವಂತಹ ಪ್ರಯತ್ನಕ್ಕೆ ನಾನು ಅವರಿಗೆ ಅಭಿನಂದಿಸುತ್ತೇನೆ. ಆದರೆ, ಸಾರಿಗೆ ವೆಚ್ಚವನ್ನು ಭರಿಸುವಂತಹ ವಿಚಾರದಲ್ಲಿ ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಸಮಾಲೋಚನೆ ನಡೆಸಿ, ಸಾರಿಗೆ ವೆಚ್ಚವನ್ನು ಕೊಡಿಸುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಈಗ 13-14 ತಿಂಗಳುಗಳು ಆಗಿರುವಂತಹ ಕಬ್ಬನ್ನು ದಯವಿಟ್ಟು ಯಾವ ಯಾವ ಪಕ್ಕದ ಕಾರ್ಖಾನೆಗಳಿವೆ, ಪಾಂಡವಪುರ ಕಾರ್ಖಾನೆ ವ್ಯಾಪ್ತಿಗೆ ಬರುವಂತಹ ಕಬ್ಬನ್ನು ಯಾವ ಕಾರ್ಖಾನೆಗೆ ಸಾಗಿಸುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ ಹಾಗೂ MySugar ಕಾರ್ಖಾನೆ ವ್ಯಾಪ್ತಿಯಲ್ಲಿ ಬೆಳೆದಿರುವಂತಹ ಕಬ್ಬನ್ನು ಯಾವ ಯಾವ ಕಾರ್ಖಾನೆಗಳಿಗೆ ಸರಬರಾಜು ಮಾಡುವುದಕ್ಕೆ ಸರ್ಕಾರವು ನಿರ್ದೇಶನ ಕೊಡಲಾಗಿದೆ, ಇದರ ಬಗ್ಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಯಲ್ಲಿ ಪಕ್ಕದ ಕಾರ್ಖಾನೆಗೆ ಅರೆಯುವುದಕ್ಕೆ ವ್ಯವಸ್ಥೆಯನ್ನು ಮಾಡಲಾಗಿದೆ, ಇದರ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ತಿಳಿಸಬೇಕು ಮತ್ತು ಈಗ ಸಾರಿಗೆ ವೆಚ್ಚವನ್ನು ಭರಿಸುವಂತಹ ಬಗ್ಗೆ ಮಾನ್ಯ ಸಚಿವರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಆದರೆ ಮೊದಲು ಕಬ್ಬು ಸರಬರಾಜು ಆಗಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಈಗ ಕಬ್ಬು ಬಹಳ ಕೆಟ್ಟು ಹೋಗುತ್ತಿದೆ. ಆದ್ದರಿಂದ, MySugar factory ವ್ಯಾಪ್ತಿಯಲ್ಲಿ ಇರುವಂತಹ ಕಬ್ಬನ್ನು ಯಾವ ಯಾವ ಪಕ್ಕದ ಕಾರ್ಖಾನೆಗಳಿಗೆ ಎಂದರೆ, ಕೊಪ್ಪ, ಭಾರತಿನಗರದಲ್ಲಿರುವ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಗೆ, ಕೆ.ಆರ್.ಪೇಟೆ ತಾಲ್ಲೂಕಿನ ಐ.ಸಿ.ಎಲ್. ಸಕ್ಕರೆ ಕಾರ್ಖಾನೆಗೆ, ಪಾಂಡವರಪುರ ಸಕ್ಕರೆ ಕಾರ್ಖಾನೆಗೆ ಮತ್ತು Bannari Amman Sugars Ltd. ಕಾರ್ಖಾನೆಗೆ ಕಬ್ಬನ್ನು ಸರಬರಾಜು ಮಾಡುವುದಕ್ಕೆ ಏನು ಆದೇಶ ಮತ್ತು ನಿರ್ದೇಶನ ಕೊಡಲಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಇದರ ಬಗ್ಗೆ ಕೂಡಲೇ ಜಿಲ್ಲಾಧಿಕಾರಿಗಳಿಗೆ ಈ ದಿನವೇ ಆದೇಶವನ್ನು ಕೊಟ್ಟು, ಈ ಎರಡು ಕಾರ್ಖಾನೆ ವ್ಯಾಪ್ತಿಯ ಕಬ್ಬನ್ನು ಪಕ್ಕದ ಕಾರ್ಖಾನೆಗಳಿಗೆ ಕೂಡಲೇ ಸರಬರಾಜು ಮಾಡುವುದಕ್ಕೆ ತಾವು ಅನುಮತಿ ಮತ್ತು ನಿರ್ದೇಶನವನ್ನು ಕೊಡಬೇಕು. ಆ ಕಂಪನಿ ಮಾಲೀಕರುಗಳ ಜೊತೆಯಲ್ಲಿ ಮಾತನಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಒತ್ತಾಯಿಸುತ್ತೇನೆ. ದಯವಿಟ್ಟು ಈ ಕೆಲಸ ಮೊದಲು ಆಗಬೇಕು.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರೇ, ಈಗಾಗಲೇ ಇದರ ಬಗ್ಗೆ ಮಾಲೀಕರುಗಳ ಜೊತೆಯಲ್ಲಿ ಮಾತನಾಡಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಇದರ ನೇತೃತ್ವವನ್ನು

ಕೊಟ್ಟಿದ್ದು, ಯಾವ ಯಾವ ಏರಿಯಾದ ಕಬ್ಬನ್ನು ಯಾವ ಯಾವ ಕಾರ್ಖಾನೆಗಳಿಗೆ ಕಳುಹಿಸಬೇಕು ಮತ್ತು ಹೆಚ್ಚುವರಿ ಶೇಕಡ 30 ರಷ್ಟು ಕಬ್ಬು ಅರೆಯುವುದಕ್ಕೆ allot ಮಾಡಿದ್ದೇವೆ. ಈಗ ಜಿಲ್ಲಾಧಿಕಾರಿಗಳ ಸಭೆಯಲ್ಲೂ ಕೂಡ ಚರ್ಚೆ ಮಾಡಲಾಗಿದೆ. ಉಳಿಯುವಂತಹ ಕಬ್ಬು ಅಂದರೆ 12–13 ತಿಂಗಳುಗಳ ಕಬ್ಬನ್ನು ನಾವು ಬೇರೆ ರಾಜ್ಯಗಳಿಗೆ ಕಳುಹಿಸಬೇಕು. ಅದರ ಸಾರಿಗೆ ವೆಚ್ಚವನ್ನು ಭರಿಸಬೇಕೆಂದು ಇದೆ. ನಮಗೆ ತಮಿಳುನಾಡು ಹತ್ತಿರ ಇದ್ದು, ಕಬ್ಬನ್ನು ಬೇರೆ ರಾಜ್ಯಕ್ಕೆ ಕಳುಹಿಸುವಂತಹ ವ್ಯವಸ್ಥೆ ಮಾಡಬೇಕು. ಇಲ್ಲಿಯು ಅವರ ಸಕ್ಕರೆ ಕಾರ್ಖಾನೆ ಇದೆ. ಚಾಮರಾಜನಗರದಲ್ಲಿಯೂ ಸಕ್ಕರೆ ಕಾರ್ಖಾನೆ ಇದೆ. ತಮಿಳುನಾಡಿನ ಬಾಡರ್‌ನಲ್ಲಿಯೂ ಅವರ ಕಾರ್ಖಾನೆ ಇದೆ. ಅದಕ್ಕೋಸ್ಕರ ಸಾರಿಗೆ ವೆಚ್ಚ ಜಾಸ್ತಿಯಾಗುತ್ತಿದೆ ಎಂದು ಹೇಳುತ್ತಿದ್ದೇವೆ. ಇಲ್ಲಿರುವ ಕಾರ್ಖಾನೆಗಳಿಗೆ ಕಳುಹಿಸುವುದಾಗಿದ್ದರೆ, ಇಲ್ಲಿಯೇ ಅಡ್ಜಸ್ಟ್ ಮಾಡುತ್ತಿದ್ದೆವು. ಯಾವ ಯಾವ ಏರಿಯಾದ ಕಬ್ಬು ಯಾವ ಯಾವ ಕಾರ್ಖಾನೆಗಳಿಗೆ ಹೋಗಬೇಕೆಂಬುವ ಬಗ್ಗೆ allocation ಮಾಡಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾಡಿರುವ ಪ್ರಯತ್ನಕ್ಕೆ ಕಳಕಳಿಯನ್ನು ವ್ಯಕ್ತಪಡಿಸುತ್ತೇನೆ. ಆದರೆ ಮಾನ್ಯ ಶ್ರೀಕಂಠೇಗೌಡರವರು ಆಗಲೇ ಹೇಳಿರುವಂತೆ, ರೈತರು ಮಧ್ಯವರ್ತಿಗಳಾಗಿರುವುದರಿಂದ, ಪಾಂಡವಪುರ ಸಕ್ಕರೆ ಕಾಖಾನೆಯ ಕಬ್ಬನ್ನು ಯಾವ ಕಾರ್ಖಾನೆಗೆ ಕೊಡಬೇಕು? ಮೈಸೂರು ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯ ಕಬ್ಬನ್ನು ಯಾವ ಕಾರ್ಖಾನೆಗಳಿಗೆ ಕೊಡಬೇಕೆನ್ನುವ ಬಗ್ಗೆ ತಾವು ನಿಗದಿ ಮಾಡದೇ ಗೊಂದಲವನ್ನು ಸೃಷ್ಟಿ ಮಾಡಿದರೆ, ಈ ಕಬ್ಬು ಸರಬರಾಜು ಆಗುವುದಿಲ್ಲ. ಆದ್ದರಿಂದ, ದಯಮಾಡಿ, ಈಗಲಾದರೂ ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ಕೊಟ್ಟು, ಕೂಡಲೇ ಯಾವ ಯಾವ ಕಾರ್ಖಾನೆಯ ಕಬ್ಬು ಯಾವ ಯಾವ ಕಾರ್ಖಾನೆಗಳಿಗೆ ಹೋಗಬೇಕೆಂಬುದನ್ನು ತಿಳಿಸಬೇಕು. ಹಾಗೆಯೇ, ರೈತರಿಗೆ ಪ್ರಚುರಪಡಿಸಿ ತಕ್ಷಣ ಕಬ್ಬು ಸಾಗಾಣಿಕೆಯಾಗುವಂತಹ ವ್ಯವಸ್ಥೆ ತಾವು ಮಾಡಬೇಕು.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರೇ, ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇ) ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಅತಿಥಿ ಉಪನ್ಯಾಸಕರ ವೇತನ ಬಿಡುಗಡೆ ಮಾಡುವ ಬಗ್ಗೆ.

***

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ರಾಜ್ಯದಲ್ಲಿರುವ 82 ಸರಕಾರಿ ಪಾಲಿಟೆಕ್ನಿಕ್ ಹಾಗೂ 10 ತಾಂತ್ರಿಕ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಾವಿರಾರು ಅತಿಥಿ ಉಪನ್ಯಾಸಕರಿಗೆ ಕಳೆದ ಸುಮಾರು 2 ವರ್ಷಗಳಿಂದ ವೇತನ ಬಿಡುಗಡೆಯಾಗದಿರುವುದು ಅತ್ಯಂತ ಖೇದದ ಹಾಗೂ ದುರದುಷ್ಟಕರ ಸಂಗತಿಯಾಗಿದೆ. ಈ ಕಾರಣಗಳಿಂದಾಗಿ ಸರಕಾರಿ ಪಾಲಿಟೆಕ್ನಿಕ್ ಹಾಗೂ ತಾಂತ್ರಿಕ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಾವಿರಾರು ಅತಿಥಿ ಉಪನ್ಯಾಸಕರಿಗೆ ಆರ್ಥಿಕವಾಗಿ ತೊಂದರೆಯಾಗಿರುವುದರಿಂದ ಕುಟುಂಬ ನಿರ್ವಹಣೆ ಮಾಡುವುದು ಕಷ್ಟವಾಗಿದೆ. ಇದರಿಂದ ವಿದ್ಯಾರ್ಥಿಗಳ ಭೋದನೆಯ ಮೇಲೆ ಕೆಟ್ಟ ಪರಿಣಾಮವಾಗುತ್ತಿದೆ.

ಆದ್ದರಿಂದ, ರಾಜ್ಯದಲ್ಲಿರುವ ಎಲ್ಲಾ ಸರಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಅತಿಥಿ ಉಪನ್ಯಾಸಕರ ವೇತನ ಬಿಡುಗಡೆ ಮಾಡಲು ತಕ್ಷಣ ಕ್ರಮ ಜರುಗಿಸಲು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ನಿಯಮ 330 ಎ ರಡಿಯಲ್ಲಿ ವಿಶೇಷ ಪ್ರಸ್ತಾವನೆಯನ್ನು ಮಾಡಿದ್ದಾರೆ. ಈ ವಿಷಯದ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇವತ್ತು ಕೊನೆ ದಿವಸ ಅಧಿವೇಶನ ನಡೆಯುವುದು. ಅಧಿವೇಶನ ಮುಂದಕ್ಕೆ ಹೋಗುವುದಿಲ್ಲ. ಆದ್ದರಿಂದ ಸರ್ಕಾರವು ಮಾನ್ಯ ಸದಸ್ಯರಿಗೆ ಯಾವಾಗ ಉತ್ತರವನ್ನು ಒದಗಿಸುತ್ತದೆ? ಅತಿಥಿ ಉಪನ್ಯಾಸಕರುಗಳಿಗೆ ಸುಮಾರು 2 ವರ್ಷಗಳಿಂದ ವೇತನ ಬಿಡುಗಡೆಯಾಗಿಲ್ಲವೆಂದು ಹೇಳುತ್ತಿದ್ದಾರೆ. ನಾವಾಗಲಿ, ನೀವಾಗಲಿ ಆಡಳಿತವನ್ನು ನಡೆಸಿದರೂ ಸಹ ಈ ಪದ್ಧತಿ ಒಂದೇ. ಇದನ್ನು ಬದಲಾವಣೆ ಮಾಡುವುದಕ್ಕೆ ಆಗುತ್ತದೆಯೇ, ಸುಮಾರು 2 ವರ್ಷಗಳಿಂದ ವೇತನವಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ಉತ್ತರವನ್ನು ತರಿಸಿಕೊಡಿ. ತಾವು ಹೊಸ ಪದ್ಧತಿಯನ್ನು ಮಾಡಿ, ಯಾವುದೇ ರೀತಿಯ ತಪ್ಪಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮೊದಲನೆ ದಿನದ ನಿಯಮ 330 ಎ ಅಡಿಯ ಪ್ರಸ್ತಾವನೆಗೆ ಉತ್ತರವನ್ನು ನೆನ್ನೆಯ ದಿವಸ ಸದನದಲ್ಲಿ ಒದಗಿಸಿದ್ದೇನೆ. ನೆನ್ನೆಯ ದಿನದ ನಿಯಮ 330 ಎ ಅಡಿಯ ಪ್ರಸ್ತಾವನೆಯಲ್ಲಿ ಒಂದಕ್ಕೆ ಉತ್ತರ ಒದಗಿಸಿದ್ದು, ಇನ್ನುಳಿದ 3 ಪ್ರಸ್ತಾವನೆಗೆ ಸಂಜೆಯಷ್ಟರಲ್ಲಿ ಉತ್ತರವನ್ನು ಒದಗಿಸುತ್ತೇನೆ. ಇವತ್ತಿನ ನಿಯಮ 330 ಎ ಅಡಿಯ ಪ್ರಸ್ತಾವನೆಗೆ ಮಧ್ಯಾಹ್ನ ಅಷ್ಟರಲ್ಲಿ ಉತ್ತರವನ್ನು ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಇದಕ್ಕೆ ಬೇಕಾದಂತಹ ಉತ್ತರವನ್ನು ಸಿದ್ಧವಾಗಬೇಕು. ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಸಲಹೆಯನ್ನು ಸ್ವೀಕಾರ ಮಾಡುತ್ತೇನೆ.

ಈ) ಒಕ್ಕಲಿಗ ಸಮುದಾಯ ಸಂಘದಲ್ಲಿನ ಅಕ್ರಮದ ಬಗ್ಗೆ

***

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ರಾಜ್ಯ ಒಕ್ಕಲಿಗರ ಸಂಘಕ್ಕೆ ಸಂಬಂಧಿಸಿದಂತೆ, ಒಕ್ಕಲಿಗ ಸಮುದಾಯದ, ಸೇವಾ ಮನೋಭಾವದ, ಹಿರಿಯ ಚಿಂತಕರು ತಮ್ಮ ತನು, ಮನ, ಧನಗಳನ್ನು ಧಾರೆಯೆರೆದು 1906ರಲ್ಲಿ ಕಟ್ಟಿ ಬೆಳೆಸಿದಂತಹ ಒಕ್ಕಲಿಗರ ಸಂಘದಲ್ಲಿ 2010 ರಿಂದ ದಿನಾಂಕ:20-08-2018ರ ಅವಧಿದಲ್ಲಿ ಈ ಕೆಳಕಂಡ ವಿಷಯಗಳಲ್ಲಿ ಅಕ್ರಮವಾಗಿರುವುದನ್ನು ಅರಿತ ಸಂಘದ ಕಾರ್ಯಕಾರಿ ಸಮಿತಿ ತೀರ್ಮಾನದಂತೆ ನಿವೃತ್ತ ಹಿರಿಯ ಅಧಿಕಾರಿಗಳನ್ನೊಳಗೊಂಡ ತನಿಖಾ ಸಮಿತಿಯನ್ನು ರಚಿಸಿರುತ್ತದೆ. ತನಿಖೆ ವಿರೋಧಿಸಿದ ಮತ್ತೊಂದು ಗುಂಪು ನ್ಯಾಯಾಲಯದ ತಡೆಯಾಜ್ಞೆ ತಂದು ತನಿಖೆ ದಾರಿ ತಪ್ಪುವ ಹಂತದಲ್ಲಿದೆ.

1. ದಂತ ವೈದ್ಯಕೀಯ ಕಾಲೇಜಿಗೆ ಎನ್.ಆರ್.ಐ. ಕೋಟಾದ ಪ್ರವೇಶದಲ್ಲಿ ನಡೆದಿರುವ ಅವ್ಯವಹಾರ.
2. ವೈದ್ಯಕೀಯ, ಇಂಜಿನಿಯರಿಂಗ್, ಸ್ನಾತಕೋತ್ತರ ಪದವಿ ಪ್ರವೇಶಗಳಲ್ಲಿ ಮಧ್ಯವರ್ತಿಗಳ ಮುಖೇನ ನಡೆದಿರುವ ಅವ್ಯವಹಾರಗಳು.
3. ಉಪಕರಣಗಳ ಖರೀದಿಯಲ್ಲಿ ನಡೆದಿರುವ ಅವ್ಯವಹಾರಗಳು.
4. ಕಾಮಗಾರಿಗಳಿಗಾಗಿ ಟೆಂಡರ್ ನೀಡುವಲ್ಲಿ ನಿಯಮಗಳನ್ನು ಪಾಲಿಸದೆ, ನಡೆಸಿರುವ ಅವ್ಯವಹಾರಗಳು
5. ನೌಕರರ ನಿಯಮಬಾಹಿರ ಬಡ್ತಿ ಮತ್ತು ವೇತನ ಹೆಚ್ಚಳ.
6. ಬೇರೆ ಬೇರೆ ಜಿಲ್ಲೆಗಳಲ್ಲಿ ಜಮೀನು ಖರೀದಿ ಮತ್ತು ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಜ್ಯ ಒಕ್ಕಲಿಗರ ಸಂಘದ ಉಳಿವಿಗಾಗಿ ಇಲ್ಲಿ ನಡೆದಿರುವ ಅಕ್ರಮಗಳ ವಿರುದ್ಧ ಪೂರ್ಣ ಪ್ರಮಾಣದ ತನಿಖೆ ನಡೆಸಿ, ಒಂದು ತಾರ್ಕಿಕ ಅಂತ್ಯ ಕಾಣಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಚರ್ಚೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಿಯಮ 330 ಎ ಅಡಿಯಲ್ಲಿ . . .

**ಸಭಾಪತಿಯವರು:-** ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು ಬೇರೆ ವಿಚಾರವಾಗಿ ಉತ್ತರವನ್ನು ಕೊಡುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿಯಮ 330 ಎ ರಡಿ ವಿಶೇಷ ಪ್ರಸ್ತಾವವನ್ನು ಸಲ್ಲಿಸಿ, ಈ ರೀತಿಯ ವಿಶೇಷ ಪ್ರಸ್ತಾಪಗಳಿಗೆ ವಿಷಯಗಳನ್ನು ಮಂಡಿಸಬಹುದೇ, ಹೊರತು ಬೇರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮಾನ್ಯ ಸಚಿವರಿಂದ ಯಾವಾಗ ಉತ್ತರವನ್ನು ಒದಗಿಸುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಅ.ದೇವೇಗೌಡರವರು ನಿಯಮ 330 ಎ ರಡಿ ವಿಶೇಷ ಪ್ರಸ್ತಾವನೆವನ್ನು ಮಂಡಿಸಿದ್ದಾರೆ. ಮಾನ್ಯ ಸಹಕಾರ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(191) 12/10/2019/12:00/ಎಸ್‌ಪಿಆರ್/ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

## 4. ವಿಶೇಷ ಪ್ರಸ್ತಾವಗಳ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಚಿವರ ಹೇಳಿಕೆ

**ವಿಷಯ: "ಪಹಣಿಯಲ್ಲಿ ನಮೂದಿಸಿರುವ ಬೆಳೆಗಳನ್ನು ಖರೀದಿಸಲು ಸರ್ಕಾರದ ನಿಯಮಗಳ ಬಗ್ಗೆ ಮಾಹಿತಿ ನೀಡಬೇಕೆನ್ನುವ ಬಗ್ಗೆ."**

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 11/10/2019 ರಂದು ಮಾನ್ಯ ಸದಸ್ಯರಾದ ಶ್ರೀ ವಿಜಯ್ ಸಿಂಗ್‌ರವರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಗೃಹ ಮತ್ತು ಸಹಕಾರ ಸಚಿವರ ಪರವಾಗಿ ಸದನದಲ್ಲಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

## 5. ಅಭಿನಂದನೆ

**"ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಗೋವಿಂದರಾಜ್‌ರವರು 2019-2023 ರ ಸಾಲಿನವರೆಗೆ ಭಾರತೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟದ ಅಧ್ಯಕ್ಷರಾಗಿ ಮರು ಆಯ್ಕೆಯಾಗಿರುವ ಬಗ್ಗೆ."**

\- - - -

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಗೋವಿಂದರಾಜ್‌ರವರು ದೇಶದಿಂದ ಅದರಲ್ಲೂ ಕನ್ನಡಿಗರೊಬ್ಬರು 2014ರಲ್ಲಿ ಅಧಿಕೃತವಾಗಿ ಪ್ರಪ್ರಥಮ ಭಾರತೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟದ ಅಧ್ಯಕ್ಷರಾಗಿ ಚುನಾಯಿತರಾಗಿ ನಾಲ್ಕು ವರ್ಷಗಳನ್ನು ಪೂರೈಸಿದ ನಂತರ, 2019ರಲ್ಲಿ ನಡೆದ ಚುನಾವಣೆಯಲ್ಲೂ ಮತ್ತೆ 2019-2023ರ ಸಾಲಿನವರೆಗೆ ಭಾರತೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟದ ಅಧ್ಯಕ್ಷರಾಗಿ ಮರು ಆಯ್ಕೆಯಾಗಿರುವುದಕ್ಕೆ ನಾವುಗಳೆಲ್ಲರೂ ಅಭಿನಂದಿಸಬೇಕೆಂಬ ಪ್ರಸ್ತಾವವನ್ನು ನಾನು ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಂಡಿಸಲಾಯಿತು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಶ್ರೀಯುತರು ಕೇವಲ ಎರಡು ವರ್ಷಗಳಲ್ಲಿ ಸತತವಾಗಿ ನಾಲ್ಕು ಪ್ರಮುಖ ಅಂತರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಕ್ರೀಡೆಗಳನ್ನು ಬೆಂಗಳೂರು ನಗರದಲ್ಲಿ ಆಯೋಜಿಸಿ ಐತಿಹಾಸಿಕ ವಿಶಿಷ್ಟತೆಯನ್ನು ದಾಖಲಿಸಿದ್ದಾರೆ. ಕ್ರೀಡಾಲೋಕದಲ್ಲಿ ಅದರಲ್ಲೂ ವಿಶೇಷವಾಗಿ ಬ್ಯಾಸ್ಕೆಟ್‌ಬಾಲ್ ಕ್ರೀಡೆಯಲ್ಲಿನ ಅವರ ಅದ್ಭುತ ಪ್ರಯತ್ನಗಳನ್ನು ಶ್ಲಾಘಿಸಿ, ಅಂತರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟವು Federation of International Basketball Association (FIBA) ಶ್ರೀಯುತರನ್ನು ಫಿಬಾ ಸ್ಪರ್ಧಾ ಆಯೋಗದ ಸದಸ್ಯರನ್ನಾಗಿ 2019 ರಿಂದ 2023ರ ಸಾಲಿನವರೆಗೆ ಆಯ್ಕೆ ಮಾಡಿದ್ದಾರೆ. ಹೀಗೆ ಗೌರವಿಸಲ್ಪಟ್ಟ ಭಾರತದ ಹಾಗೂ ರಾಜ್ಯದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಶ್ರೀಯುತರು ಪಾತ್ರರಾಗಿದ್ದಾರೆ ಎಂಬ ಸಂಗತಿಯನ್ನು ನಾನು ನಿವೇದಿಸುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಶ್ರೀಯುತರು ದಕ್ಷಿಣ ಏಷ್ಯಾದಿಂದ ಬೆಂಗಳೂರಿನಲ್ಲಿ ನಡೆದ ಅಂತರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟ ಏಷ್ಯಾ ಸಾಮಾನ್ಯ ಸಭೆ 2019 ರಲ್ಲಿ ಪ್ರತಿನಿಧಿಸಲು ಆಯ್ಕೆಯಾಗುವ ಮೂಲಕ ಭಾರತದ ಹಾಗೂ ರಾಜ್ಯದ ಮೊದಲ ವ್ಯಕ್ತಿಯಾಗಿದ್ದಾರೆ. ಈ ಎಲ್ಲಾ ಕಾರಣಗಳಿಂದ ಶ್ರೀಯುತರಿಗೆ ಅಭಿನಂದನೆ ಸಲ್ಲಿಸುವ ಸಲುವಾಗಿ ಅಭಿನಂದನಾ ಪ್ರಸ್ತಾವವನ್ನು ನಾನು ಈ ಸದನದಲ್ಲಿ ಮಂಡಿಸುತ್ತಾ, ಅವರನ್ನು ಅಭಿನಂದಿಸಬೇಕೆಂದು ಕೋರುತ್ತಿದ್ದೇನೆ.

**(ಈ ಹಂತದಲ್ಲಿ ಸದಸ್ಯರುಗಳು ಮತ್ತೊಮ್ಮೆ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಸಹೋದ್ಯೋಗಿ ಹಾಗೂ ಸನ್ಮಿತ್ರರೂ ಆದ ಶ್ರೀ ಗೋವಿಂದರಾಜುರವರು ಮಾಡಿರುವ ಸಾಧನೆಯು ದೊಡ್ಡದಾಗಿದೆ. ಶ್ರೀಯುತರು ರಾಜ್ಯದಲ್ಲಿ ಎಲ್ಲಾ ರೀತಿಯ ಕ್ರೀಡೆಗಳಿಗೆ ಉತ್ತೇಜನ ನೀಡುತ್ತಿದ್ದಾರೆ. ಬ್ಯಾಸ್ಕೆಟ್‌ಬಾಲ್ ಕ್ರೀಡೆಯಲ್ಲಿ ಅವರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟಗಳಲ್ಲಿ ಅತ್ಯಂತ ಗೌರವಯುತವಾದ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಬಹುಶಃ ಈ ರೀತಿಯ ಹಿರಿಮೆಗೆ ಪಾತ್ರರಾದವರು ಭಾರತ ದೇಶದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವರೇ ಮೊದಲಿಗರು. ಇತ್ತೀಚೆಗೆ ಚೈನಾ ದೇಶದ ಬೀಜಿಂಗ್‌ನಲ್ಲಿ ನಡೆದ World body meetingನಲ್ಲಿ ಇವರಿಗೆ ಗೌರವ ಹಾಗೂ ಸನ್ಮಾನಗಳನ್ನು ನೀಡಲಾಗಿದೆ. ಇದು ಶ್ರೀಯುತರ ಹೆಗ್ಗಳಿಕೆಗೆ ದೊಡ್ಡ ಸಾಧನೆಯಾಗಿದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. 2019 ನೇ ಸಾಲಿನಲ್ಲಿ FIBA ಸಂಸ್ಥೆಯ ಅಧ್ಯಕ್ಷ ಪ್ರಶಸ್ತಿಯೂ ಸಹ ದೊರೆತಿದೆ. ಇದರ ಜೊತೆಗೆ ಅಂತರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಫೆಡರೇಷನ್‌ನವರು ಸಹ ಇವರನ್ನು ಗೌರವಿಸಿದ್ದಾರೆ. ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲಿ Asian Games Day ನಡೆಯಿತು. ಮಾನ್ಯ ಗೋವಿಂದರಾಜುರವರು ವರ್ಷಕ್ಕೊಮ್ಮೆ ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲಿ Asian Games Day ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಪ್ರಾಯಶಃ 'ಕ್ರೀಡೆ ಎಂದರೆ ಗೋವಿಂದರಾಜು; ಗೋವಿಂದರಾಜು ಎಂದರೆ ಕ್ರೀಡೆ' ಎಂದರೆ ಅತಿಶಯೋಕ್ತಿಯಾಗಲಾರದು. ಕೇವಲ ಬ್ಯಾಸ್ಕೆಟ್‌ಬಾಲ್ ಕ್ರೀಡೆ ಮಾತ್ರವಲ್ಲದೇ ಎಲ್ಲಾ ರೀತಿಯ ಕ್ರೀಡೆಗಳಲ್ಲಿ ಇವರು ಎಲ್ಲಾ ರೀತಿಯ ಸಹಕಾರ ಹಾಗೂ ಸಹಾಯ ಹಸ್ತವನ್ನು ನೀಡುತ್ತಿದ್ದಾರೆ. ಹಲವಾರು ಕ್ರೀಡಾ ವಿದ್ಯಾರ್ಥಿಗಳು ನಮ್ಮನ್ನು ಸಂಪರ್ಕಿಸಿ, ಮಾನ್ಯ ಸದಸ್ಯರಿಗೆ ಅವರ ಹೆಸರುಗಳನ್ನು ಶಿಫಾರಸ್ಸು ಮಾಡಿ, ಕ್ರೀಡೆಗೆ ಅವಕಾಶ ಮಾಡಿಕೊಡುವಂತೆ ಕೋರುತ್ತಾರೆ. ಇಂತಹ ಕ್ರೀಡಾ ಪ್ರೋತ್ಸಾಹಕರು ನಮ್ಮ ಸದನದ ಸದಸ್ಯರಾಗಿರುವುದು ನಮ್ಮೆಲ್ಲರ ಹಿರಿಮೆಯಾಗಿದೆ. ಫಿಬಾ ಸ್ಪರ್ಧಾ ಆಯೋಗದ ಚುನಾವಣೆಯಲ್ಲಿ ಶ್ರೀಯುತರು ಆಯ್ಕೆಯಾಗಿರುವುದು ನಮ್ಮ ರಾಜ್ಯಕ್ಕೆ ತಂದ ದೊಡ್ಡ ಗೌರವವಾಗಿದೆ. ಆದ್ದರಿಂದ ನಮ್ಮ ಸದನದ ಎಲ್ಲಾ ಸದಸ್ಯರುಗಳ ಪರವಾಗಿ ಸಂತೋಷದಿಂದ ಅವರನ್ನು ಅಭಿನಂದಿಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಶ್ರೀ ಕೆ.ಗೋವಿಂದರಾಜುರವರು Federation of International Basketball Association (FIBA)ದ ಸ್ಪರ್ಧಾ ಆಯೋಗದ ಸದಸ್ಯರಾಗಿ ಆಯ್ಕೆಯಾಗಿರುವುದು ದೊಡ್ಡ ಸಾಧನೆಯಾಗಿದೆ. ಅವರು ನಮ್ಮ ಸದನದ ಸದಸ್ಯರಾಗಿರುವುದು ನಾವೆಲ್ಲರೂ ಹೆಮ್ಮೆಪಡುವ ಸಂಗತಿಯಾಗಿದೆ. ನನ್ನ ಸನ್ಮಿತ್ರರು ಹೇಳಿದಂತೆ, ಶ್ರೀಯುತರು ಹಲವಾರು ದಶಕಗಳ ಕಾಲ ಕ್ರೀಡಾ ಕ್ಷೇತ್ರದಲ್ಲಿ, ಯುವ ಪ್ರತಿಭೆಗಳನ್ನು ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗದ ಪ್ರತಿಭೆಗಳನ್ನು ಗುರುತಿಸುವಲ್ಲಿ ಹೆಚ್ಚು ಗಮನ ನೀಡುತ್ತಿದ್ದಾರೆ. ಅನೇಕ ಬಾರಿ 'take it sportively' ಎಂಬುದಾಗಿ ಹೇಳುತ್ತೇವೆ. ಕ್ರೀಡಾ ಸ್ಫೂರ್ತಿ ಎನ್ನುವುದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

positive attitude. ರಾಜಕಾರಣಿಗಳು ಎಂದರೆ ಮೂಗು ಮುರಿಯುವ ಈ ಸಂದರ್ಭದಲ್ಲಿ ಶ್ರೀಯುತರ ಸಾಧನೆಯು ಬಹುದೊಡ್ಡದಾಗಿದೆ. ಅವರ ಸಾಧನೆಯನ್ನು ಈ ಸದನವು ಬಹಳ ಹೆಮ್ಮೆಯಿಂದ ನೆನೆಯುತ್ತದೆ. ನಮ್ಮ ಕ್ರೀಡಾ ಇಲಾಖೆಯಿಂದ ಎಲ್ಲಾ ರೀತಿಯ ಕ್ರೀಡೆಗಳಿಗೆ ಅದರಲ್ಲೂ ವಿಶೇಷವಾಗಿ ದೇಶೀಯ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿ, ಹೆಚ್ಚು ಅವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಶ್ರೀಯುತರಿಂದ ಹೊಸ ಪ್ರತಿಭೆಗಳನ್ನು ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರತಿಭೆಗಳನ್ನು ಗುರ್ತಿಸುವಲ್ಲಿ ಇನ್ನೂ ಹೆಚ್ಚಿನ ಸೇವೆ ನಮ್ಮ ನಾಡಿಗೆ ಲಭಿಸಲಿ ಎಂದು ಬಯಸಿ, ಅವರಿಗೆ ಶುಭವನ್ನು ಕೋರುತ್ತಾ, ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನ ಸ್ನೇಹಿತರಾದ ಶ್ರೀ ಕೆ.ಗೋವಿಂದರಾಜು ರವರನ್ನು ನಾನು ಅಭಿನಂದಿಸುತ್ತೇನೆ. ಬ್ಯಾಸ್ಕೆಟ್‌ಬಾಲ್ ಕ್ರೀಡಾ ಕ್ಷೇತ್ರದ ಅತೀ ಉನ್ನತ ಸ್ಥಾನಕ್ಕೆ ಅವರು ಏರಿದ್ದಾರೆ. ನಾನೊಬ್ಬ ಕ್ರಿಕೆಟ್ ಆಟಗಾರ. ನಮ್ಮ ದೇಶದಲ್ಲಿ ಕ್ರಿಕೆಟ್ ಕ್ರೀಡೆಗೆ ಬಹಳಷ್ಟು ಉತ್ತೇಜನವನ್ನು ನೀಡಲಾಗುತ್ತಿದೆ. ಕ್ರಿಕೆಟ್ ಕ್ರೀಡೆಗೆ ಬಹಳಷ್ಟು ಜನರು ಆಕರ್ಷಿತರಾಗಿದ್ದಾರೆ. ಕ್ರಿಕೆಟ್‌ನ್ನು ಹೊರತುಪಡಿಸಿ, ಬೇರೆ ಕ್ರೀಡೆಯಲ್ಲಿ ಈ ರೀತಿಯ ವಾತಾವರಣವನ್ನು ಸೃಷ್ಠಿ ಮಾಡಬೇಕಾದರೆ, ಅದು ಬಹಳ ಕಷ್ಟ. ನಾನು ಈ ಸದನದ ಗಮನಕ್ಕೆ ತರುವುದೇನೆಂದರೆ, ಎನ್.ಬಿ.ಎ., ಯಂತಹ ಅಂತರಾಷ್ಟ್ರೀಯ ಕ್ರೀಡಾಕೂಟವನ್ನು ಭಾರತ ದೇಶದಲ್ಲಿ ಆಯೋಜಿಸುವುದು ಬಹಳ ದೊಡ್ಡ ಸಾಧನೆಯಾಗಿದೆ. ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಅಮೇರಿಕಾ ಅಧ್ಯಕ್ಷರಾದ ಶ್ರೀ ಡೊನಾಲ್ಡ್ ಟ್ರಂಪ್‌ರವರೊಂದಿಗೆ ಮಾತನಾಡಿದಾಗ, ಎನ್.ಬಿ.ಎ.,ಯನ್ನು ದೇಶದ ಮುಂಬೈ ನಗರದಲ್ಲಿ ಆಯೋಜಿಸಲು ಮಾನ್ಯ ಮೋದಿಯವರು ಅವಕಾಶ ಮಾಡಿಕೊಡಬೇಕೆಂದು ಟ್ರಂಪ್‌ರವರು ಕೇಳಿದ್ದಾರೆ. ಇಂತಹ ಸಂಗತಿಯನ್ನು ಇವತ್ತಿನ ದಿವಸ ನೆನಪಿಸಿಕೊಂಡು, ಈ ಕಾರಣಗಳಿಗಾಗಿ ನಾನು ಶ್ರೀಯುತರ ಸಾಧನೆಯನ್ನು ಶ್ಲಾಘಿಸುತ್ತೇನೆ. ನಮ್ಮ ದೇಶದಲ್ಲಿ ಕ್ರಿಕೆಟ್‌ನ್ನು ಹೊರತುಪಡಿಸಿ, ಬ್ಯಾಸ್ಕೆಟ್‌ಬಾಲ್, ಕಬ್ಬಡ್ಡಿಗಳಂತಹ ಕ್ರೀಡೆಗಳಿಗೆ ಸಾಕಷ್ಟು ಪ್ರೋತ್ಸಾಹದ ಅವಶ್ಯಕತೆ ಇದೆ. ಇದರ ಜೊತೆಗೆ ಮಾಧ್ಯಮದವರೂ ಸಹ ಕ್ರಿಕೆಟ್ ಜೊತೆಗೆ ಬೇರೆ ರೀತಿಯ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ನಾನು ಈ ಸದನದ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಬೇರೆ ರೀತಿಯ ಕೀಡೆಗಳ ಬಗ್ಗೆ ಸದನದಲ್ಲಿ ನಾವು ಚರ್ಚೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಅಂತರಾಷ್ಟ್ರೀಯ ಮಟ್ಟದ ಎನ್.ಬಿ.ಎ., ಕ್ರೀಡಾಕೂಟದ ಬಗ್ಗೆ ಮಾನ್ಯ ಸದಸ್ಯರು ತಿಳಿಸಬೇಕು. ಎನ್.ಬಿ.ಎ., ಕ್ರೀಡಾಕೂಟದಲ್ಲಿ ಬ್ಯಾಸ್ಕೆಟ್‌ಬಾಲ್ ಕ್ರೀಡಾಪಟುಗಳ ಭವಿಷ್ಯ ಅಡಗಿದೆ. ನಮ್ಮ ದೇಶದಲ್ಲಿ ಕ್ರಿಕೆಟ್ ಆಟವನ್ನು ಯಾವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಟ್ಟದಲ್ಲಿ ಆಡಲಾಗುತ್ತದೆಯೋ ಅದಕ್ಕಿಂತಲೂ ಹತ್ತು ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ಅಮೇರಿಕಾ ದೇಶದಲ್ಲಿ ಎನ್.ಬಿ.ಎ.,ನ ಬ್ಯಾಸ್ಕೆಟ್‌ಬಾಲ್ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತದೆ. ಬ್ಯಾಸ್ಕೆಟ್‌ಬಾಲ್ ಕ್ರೀಡಾ ಕ್ಷೇತ್ರದಲ್ಲಿ ಮಾನ್ಯ ಸದಸ್ಯರು ಬಹಳ ಗಮನಾರ್ಹವಾದ ಕೆಲಸಗಳನ್ನು ಮಾಡುತ್ತಿದ್ದಾರೆ ಹಾಗೂ ಇದೇ ರೀತಿಯಾಗಿ ತಮ್ಮ ಕೆಲಸಗಳನ್ನು ಮುಂದುವರೆಸಲಿ ಎಂದು ನಾನು ಆಶಿಸುತ್ತೇನೆ. ಒಂದು ವೇಳೆ ಬೆಂಗಳೂರು ನಗರದಲ್ಲಿ ಎನ್.ಬಿ.ಎ., ಕ್ರೀಡಾಕೂಟವನ್ನು ಆಯೋಜಿಸಿದರೆ, ನಮ್ಮ ಸದನದ ಎಲ್ಲಾ ಸದಸ್ಯರು ವೀಕ್ಷಿಸಲು ಅವಕಾಶ ನೀಡಬೇಕೆಂದು ನಾನು ಕೋರುತ್ತೇನೆ. ಶ್ರೀ ಕೆ.ಗೋವಿಂದರಾಜು ರವರಿಗೆ ಎಲ್ಲಾ ರೀತಿಯಲ್ಲಿ ಒಳ್ಳೆಯದಾಗಲಿ ಎಂದು ನಾನು ಹಾರೈಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜುರವರನ್ನು ನಾನು ಅಭಿನಂದಿಸುತ್ತೇನೆ. ಶ್ರೀ ಪ್ರಕಾಶ್ ಕೆ.ರಾಥೋಡ್‌ರವರೂ ಸಹ ಒಬ್ಬ ಕ್ರೀಡಾಪಟು ಆಗಿದ್ದು, ರಣಜಿ ಕ್ರಿಕೆಟ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ಅವರು ಸ್ಪಿನ್ ಬೌಲರ್ ಆಗಿದ್ದರು. ಪ್ರಸ್ತುತ ಕ್ರೀಡಾ ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ. ನಮ್ಮ ದೇಶದಲ್ಲಿ ಕ್ರೀಡೆ ಎಂದರೆ ಕ್ರಿಕೆಟ್ ಮಾತ್ರವೇ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಅದರಲ್ಲೂ ನಮ್ಮ ರಾಜ್ಯದವರಿಗೆ ಕ್ರಿಕೆಟ್ ಹೊರತುಪಡಿಸಿ, ಅನ್ಯ ಕ್ರೀಡೆಯ ಬಗ್ಗೆ ಮಾತನಾಡಿದರೆ, ಅದು ಅವರಿಗೆ ಅರ್ಥವಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದವರಾದ ಶ್ರೀ ಕೆ.ಗೋವಿಂದರಾಜುರವರು ಒಬ್ಬ ಬ್ಯಾಸ್ಕೆಟ್‌ಬಾಲ್ ಕ್ರೀಡಾ ಪಟುವಾಗಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಬ್ಯಾಸ್ಕೆಟ್‌ಬಾಲ್ ಕ್ರೀಡೆಯನ್ನು ಪ್ರತಿನಿಧಿಸಿ, ಫಿಬಾ ಸ್ಪರ್ಧಾ ಆಯೋಗದ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ ಎಂದರೆ, ಇವರ ಸಾಧನೆ ಹಾಗೂ ಕೀರ್ತಿ ಶ್ಲಾಘನೀಯ. ಶ್ರೀಯುತರು ಭಾರತೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟದ ಅಧ್ಯಕ್ಷರಾಗಿದ್ದಾರೆ. ಇವುಗಳೆಲ್ಲವೂ ನಮ್ಮ ಸದನಕ್ಕೆ ದೊಡ್ಡ ಹೆಮ್ಮೆಯ ವಿಚಾರವಾಗಿದೆ. ನಮ್ಮ ದೇಶದದಲ್ಲಿ ಬ್ಯಾಸ್ಕೆಟ್‌ಬಾಲ್ ಕ್ರೀಡೆಗೆ ಅಭಿಮಾನಿಗಳು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಅಮೇರಿಕಾ ಮತ್ತು ಇಂಗ್ಲೆಂಡ್‌ಗಳಂತಹ ದೇಶದಲ್ಲಿ ಬ್ಯಾಸ್ಕೆಟ್‌ಬಾಲ್ ಕ್ರೀಡೆಗೆ ಹೆಚ್ಚಿನ ಪ್ರಾಧಾನ್ಯತೆ ಇದ್ದು, ಹೆಚ್ಚು ಪ್ರೋತ್ಸಾಹವನ್ನು ನೀಡುತ್ತಾರೆ. ಬ್ಯಾಸ್ಕೆಟ್‌ಬಾಲ್ ಕ್ರೀಡೆಯಲ್ಲಿ ಯಾವ ಕ್ಷಣದಲ್ಲಾದರೂ ಆಟದ ಹಾಗೂ ಗೆಲುವಿನ ದಿಕ್ಕು ಬದಲಾಗುತ್ತದೆ. ಆದರೆ ಕ್ರಿಕೆಟ್ ಆಟದಲ್ಲಿ ಬ್ಯಾಟ್ಸ್‌ಮನ್ ಒಂದು ಸಣ್ಣ ತಪ್ಪು ಮಾಡಿದರೆ, ಅವನು out ಆಗಿ ಪೆವಿಲಿಯನ್‌ಗೆ ವಾಪಸ್ ಹೋಗಬೇಕಾಗುತ್ತದೆ. ಹೀಗಾಗಿ ಕ್ರಿಕೆಟ್ ಆಟದಲ್ಲಿ ಬ್ಯಾಟ್ಸ್‌ಮನ್‌ಗೆ ಮತ್ತೊಂದು ಅವಕಾಶವಿರುವುದಿಲ್ಲ. ಆದರೆ, ಬ್ಯಾಸ್ಕೆಟ್‌ಬಾಲ್ ಹಾಗೂ ವಾಲಿಬಾಲ್‌ಗಳಂತಹ ಕ್ರೀಡೆಗಳಲ್ಲಿ ನಿಗದಿತ ಸಮಯದಲ್ಲಿ ಯಾವ ತಂಡವಾದರೂ ಆಟವನ್ನು ಗೆಲ್ಲುವ ಅವಕಾಶಗಳಿರುತ್ತವೆ. ಆದ್ದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬ್ಯಾಸ್ಕೆಟ್‌ಬಾಲ್‌ಗಳಂತಹ ಕ್ರೀಡೆಗೆ ರಾಜ್ಯ ಸರ್ಕಾರವು ಹೆಚ್ಚಿನ ಅನುದಾನ ನೀಡುವುದರ ಮೂಲಕ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕೆಂದು ಕೋರುತ್ತೇನೆ. ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಿರದೇ, ಗ್ರಾಮೀಣ ಪ್ರದೇಶಗಳಿಗೂ ಸಹ ಇಂತಹ ಕ್ರೀಡೆಗಳು ಲಭ್ಯವಾಗುವಂತೆ ವಿಸ್ತರಿಸಬೇಕು. ಮಾನ್ಯ ಕೆ.ಗೋವಿಂದರಾಜುರವರನ್ನು ನಾನು ಅಭಿನಂದಿಸುತ್ತಾ, ಶುಭ ಕೋರುತ್ತೇನೆ.

(ಮುಂದು)

(192)/12-10-2019/12-10/ಎಲ್‌ಎಂ/ಜಿಆರ್

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳನ್ನು ಹೇಳುತ್ತೇನೆ. ನಮ್ಮವರೇ ಆಗಿರುವ ಮಾನ್ಯ ಕೆ. ಗೋವಿಂದ್‌ರಾಜ್‌ರವರು ಬಹಳಷ್ಟು ವರ್ಷಗಳಿಂದ Karnataka Olympic Association ನ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ. ಅದರ ಜೊತೆಗೆ Federation of International Basketball Association ನ ಅಧ್ಯಕ್ಷರಾಗಿರುವುದು ನಮಗೆಲ್ಲ ಹೆಮ್ಮೆಯ ವಿಚಾರ. ಅಮೇರಿಕಾದಲ್ಲಿ ಪ್ರತಿಷ್ಠೆಯ ಕ್ರೀಡೆ ಎಂದರೆ ಬ್ಯಾಸ್ಕೆಟ್ ಬಾಲ್. ಅಮೇರಿಕಾ ಅಧ್ಯಕ್ಷರಾದ ಮಾನ್ಯ ಟ್ರಂಪ್‌ರವರು ಬ್ಯಾಸ್ಕೆಟ್ ಬಾಲ್ ಆಟವನ್ನು ನೋಡಲು ಅವಕಾಶ ಕೊಡಿ ಎಂದು ಕೇಳಿದ್ದಾರೆ. ಅಮೇರಿಕಾದ ಮಾಜಿ ಅಧ್ಯಕ್ಷರಾಗಿದ್ದ ಮಾನ್ಯ ಓಬಾಮರವರು he was the best basketball player, for your kind information. ಅವರು ಅಧ್ಯಕ್ಷರಾಗಿದ್ದಾಗ ಯಾವಾಗಲಾದರೂ ಹಾಲಿಡೇಗೆ ಹೋದಾಗ ನಾನು ಬಾಸ್ಕೆಟ್ ಬಾಲ್ ಆಡಿದರೆ ರಿಲ್ಯಾಕ್ಸ್ ಆಗುತ್ತೇನೆ ಎಂದು ಹೇಳುತ್ತಿದ್ದರು. The most prestigious and powerful game in America is Basketball. ಅಂತಹ ಕ್ರೀಡೆಯನ್ನು ಕರ್ನಾಟಕ ರಾಜ್ಯಕ್ಕೆ ತಂದು, ಇಲ್ಲಿಯ ಕ್ರೀಡಾಪಟುಗಳಿಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಗೋವಿಂದ ರಾಜ್‌ರವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇಂದು ನಮ್ಮ ಕರ್ನಾಟಕ ರಾಜ್ಯ ಕೇವಲ ಕ್ರಿಕೆಟ್, ಫುಟ್‌ಬಾಲ್‌ನಲ್ಲಿ ಮಾತ್ರವಲ್ಲ, ಬ್ಯಾಸ್ಕೆಟ್ ಬಾಲ್, ಟೆನ್ನಿಸ್ ಮತ್ತು ಶೂಟಿಂಗ್ ಕ್ರೀಡೆಗಳಲ್ಲಿಯೂ ಮುಂದೆ ಇದೆ. ಈ ಕ್ರೀಡೆಗಳಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಇದರಿಂದ ಕರ್ನಾಟಕದ ಹೆಸರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು ಎಂದು ಹಾರೈಸಿ, ಮತ್ತೊಮ್ಮೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಬಹಳ ಜನ ಶಾಸಕರು ಮಾನ್ಯ ಗೋವಿಂದರಾಜ್‌ರವರ ಬಗ್ಗೆ ಮಾತನಾಡಿದ್ದಾರೆ. ಅವರು ಇಷ್ಟೊಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿನಂದನೆಗಳನ್ನು ಪಡೆದುಕೊಂಡಿರುವುದಕ್ಕೆ ನನಗೆ ಬಹಳ ಹೆಮ್ಮೆ ಅನ್ನಿಸುತ್ತದೆ. ಅವರು Karnataka Olympic Association ನ ಅಧ್ಯಕ್ಷರಾಗಿದ್ದಾರೆ. ನಮ್ಮ ಎರಡು ಸದನಗಳಲ್ಲಿ ಅನೇಕ ಜನ ಸದಸ್ಯರು ಕ್ರೀಡಾಪಟುಗಳಿದ್ದಾರೆ. ಅವರಿಗೆ ವಯಸ್ಸಾದ ಮೇಲೆ ಅವರನ್ನು ಗುರುತಿಸುವುದೇ ಇಲ್ಲ. ಅವರ ಸಾಧನೆ ನಮಗೆಲ್ಲ ಅಭಿಮಾನವನ್ನು ತರುವಂತಹದು. ನಾನು ಕಳೆದ 25 ವರ್ಷಗಳಿಂದ ಅವರನ್ನು ನೋಡಿಕೊಂಡು ಬಂದಿದ್ದೇನೆ. ಒಬ್ಬರಿಗೆ ಅಧಿಕಾರ ಬಂದಾಗ ಅದನ್ನು ಯಾವ ರೀತಿ ಸದುಪಯೋಗ ಮಾಡಿಕೊಂಡು ನಾಡಿನ ಜನರಿಗೆ ಒಳ್ಳೆಯದನ್ನು ಮಾಡಬೇಕು ಎನ್ನುವುದಕ್ಕೆ ಮಾನ್ಯ ಗೋವಿಂದರಾಜ್‌ರವರು ಒಳ್ಳೆಯ ಉದಾಹರಣೆಯಾಗಿದ್ದಾರೆ. ನಮ್ಮಲ್ಲಿ ಅನೇಕ ಭಿನ್ನಾಭಿಪ್ರಾಯಗಳು ಇರುತ್ತವೆ, ಅದು ಬೇರೆ ವಿಚಾರ. ಆದರೆ ಕ್ರೀಡೆಯ ವಿಚಾರದಲ್ಲಿ ಎಲ್ಲಾ ಕ್ರೀಡೆಗಳಿಗೆ ನಾವೆಲ್ಲರೂ ಸಹಕಾರವನ್ನು ಕೊಡಬೇಕಾಗಿರುವುದು ನಮ್ಮ ಕರ್ತವ್ಯ. ಆ ಹಿನ್ನೆಲೆಯಲ್ಲಿ ಮಾನ್ಯ ಗೋವಿಂದ ರಾಜ್‌ರವರಿಗೆ ಅನೇಕ ವರ್ಷಗಳಿಂದ ಎಲ್ಲ ರೀತಿಯ ಸಹಕಾರವನ್ನು ನಾವು ಕೊಟ್ಟಿದ್ದೇವೆ. ಅವರು ಅಧಿಕಾರವನ್ನು ಸ್ವೀಕಾರ ಮಾಡಿ ರಾಜ್ಯಕ್ಕೆ ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ. ಅವರು ಅನೇಕ ಕ್ರೀಟಾಪಟುಗಳನ್ನು ಬೆಳೆಸಿದ್ದಾರೆ. ಬೆಂಗಳೂರಿನಲ್ಲಿರುವ ಕಂಠೀರವ ಸ್ಟೇಡಿಯಂ ಮೊದಲು ಎಲ್ಲ ರೀತಿಯ ಸುವ್ಯವಸ್ಥೆಯಲ್ಲಿದ್ದರೂ ಅಲ್ಲಿ ಕ್ರೀಡೆಗಳು ಸರಿಯಾಗಿ ನಡೆಯುತ್ತಿರಲಿಲ್ಲ. ಆದರೆ ಇವರು ಅಧಿಕಾರ ಸ್ವೀಕರಿಸದ ಮೇಲೆ ಅಲ್ಲಿ ಸರಿಯಾಗಿ ಕ್ರೀಡೆಗಳು ನಡೆಯಲು ಪ್ರಾರಂಭವಾದವು. ಇಂದು ಕ್ರೀಡೆಗಳಿಗೆ ಕಂಠೀರವ ಸ್ಟೇಡಿಯಂ ಇಷ್ಟು ಪ್ರಸಿದ್ಧಿಯಾಗಲು ಇವರು ಕೂಡಾ ಕಾರಣೀಭೂತರಾಗಿದ್ದಾರೆ. ನಾನು ಮೊದಲು ಮೈಸೂರು ಮತ್ತು ಕರ್ನಾಟಕ ಎರಡೂ ವಿಶ್ವವಿದ್ಯಾನಿಲಯಗಳನ್ನು ಪ್ರತಿನಿಧಿಸಿ ಕ್ರೀಡೆಯಲ್ಲಿ ಭಾಗವಹಿಸುತ್ತಿದ್ದೆ. ನಾನು ಕ್ರೀಟಾಪಟ್ಟು ಆದಾಗ ಅಲ್ಲಿ ಕ್ರೀಡೆಗಳನ್ನು ಆಡಿದ್ದೇನೆ. ಆಗಿನ ವ್ಯವಸ್ಥೆಗೂ ಈಗಿನ ವ್ಯವಸ್ಥೆಗೂ ತುಂಬಾ ವ್ಯತ್ಯಾಸವಾಗಿದೆ. ಈಗ ತುಂಬಾ ವ್ಯವಸ್ಥಿತವಾಗಿದೆ.

ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಶಾಸಕರ ದಿನಾಚರಣೆಯನ್ನು ಆಚರಿಸಲಾಗುತ್ತಿತ್ತು. ಆಗಲೇ ನಾವು ಶಾಸಕರಲ್ಲಿರುವ ಅನೇಕ ಕ್ರೀಡಾಪಟುಗಳನ್ನು, ಕಲಾಕಾರರನ್ನು ನೋಡಿದ್ದು. ಮಾನ್ಯ ಮೊಯ್ಲಿಯವರು ತುಂಬಾ ಚೆನ್ನಾಗಿ ಯಕ್ಷಗಾನ ಮಾಡುತ್ತಾರೆ ಎನ್ನುವುದು ಆಗಲೇ ಗೊತ್ತಾಗಿದ್ದು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು, ಈಗ ಮತ್ತೆ ಶಾಸಕರ ದಿನಾಚರಣೆಯನ್ನು ಆಚರಿಸಲು ಪ್ರಾರಂಭ ಮಾಡಿ. ಈಗಿನ ರಾಜಕಾರಣ ಎಂದರೆ ಬರೀ ಜಗಳ ಮಾಡುವುದು ಎನ್ನುವ ಹಾಗೆ ಆಗಿದೆ. ಮಾನ್ಯ ಈಶ್ವರಪ್ಪನವರೇ ಹೇಳಬೇಕು, ನಿನ್ನೆ ಅವರು ಮತ್ತು ಮಾನ್ಯ ಸಿದ್ದರಾಮಯ್ಯನವರು ಜಗಳ ಮಾಡಿದ್ದಾರೆ. ಇದೆಲ್ಲವನ್ನು ಬಿಟ್ಟು ಎಲ್ಲರೂ ಒಂದಾಗಿ ಭಾಗವಹಿಸುವಂತಹ ಶಾಸಕರ ದಿನಾಚರಣೆಯನ್ನು ಮಾನ್ಯ ಸಭಾಪತಿಯವರ ಕಾಲದಲ್ಲಿಯಾದರೂ ಪ್ರಾರಂಭ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಗಳೇ ಈಗ ಅದನ್ನು ತಾವು ಪ್ರಾರಂಭ ಮಾಡಿ. ಹಿಂದೆ ಶಾಸಕರ ದಿನಾಚರಣೆ ಮಾಡಿದ್ದಾಗ, ನಮ್ಮ ಶಾಸಕರಲ್ಲಿರುವ ಕಲೆಯನ್ನು, ಸಾಹಿತ್ಯವನ್ನು, ಕಲಾಕಾರರನ್ನು ಹೊರಗೆ ತಂದ ಹಾಗೆ ಆಗಿತ್ತು. ಮಾನ್ಯ ಎಂ.ಪಿ.ಪ್ರಕಾಶ್‌ರವರು ದೊಡ್ಡ ನಾಟಕವನ್ನೇ ಮಾಡಿಸಿದ್ದರು. ಅದರಲ್ಲಿ ಬಹಳಷ್ಟು ಶಾಸಕರು ಕಲಾಕಾರರಾಗಿ ನಾಟಕ ಮಾಡಿದ್ದರು. ನಾನು ಮತ್ತು ಸಭಾಪತಿಗಳು ಆಗ ಕಬ್ಬಡಿ ಆಟವನ್ನು ಆಡಿ ಮೈಯೆಲ್ಲಾ ರಕ್ತ ಬರುವ ಹಾಗೆ ಎಳೆದಾಡಲಾಗಿತ್ತು. ಆದ್ದರಿಂದ ಬರುವಂತಹ ದಿನಗಳಲ್ಲಿ ಮತ್ತೆ ಶಾಕಸರ ದಿನಾಚರಣೆಯನ್ನು ಆಚರಣೆಗೆ ತಂದು ಎಲ್ಲರೂ ಭಾಗವಹಿಸುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಗಳೆ, ಅವರು ಕಬಡ್ಡಿ ಆಡಿ ಈಗಾಗಲೇ 17 ಜನ ಶಾಸಕರನ್ನು ಎಳೆದುಕೊಂಡಿದ್ದಾರೆ. ಮತ್ತೆ ಕಬಡ್ಡಿ ಆಡಿ ಮುಂದೆಯೂ ಹಾಗೆ ಆಗುವುದು ಬೇಡ.

**ಶ್ರೀ ಆರ್.ಅಶೋಕ( ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಹೊರಟ್ಟಿಯವರು ಆಗ ಕಬಡ್ಡಿ ಆಡಲಿಲ್ಲ, ಈಗ ಕಬಡ್ಡಿ ಆಡುತ್ತಿದ್ದಾರೆ. ಈಗ ಹಳೆಯ ಕಬಡ್ಡಿ ಹೊರಟು ಹೋಯಿತು. ಐಪಿಎಲ್ ಕಬಡ್ಡಿ ಬಂದಿದೆ. 'Pro Kabaddi' ಈಗ ಬಹಳ ಜನಪ್ರಿಯವಾಗಿದೆ. ಬಹಳ ಫಾಸ್ಟ್ ಕಬಡ್ಡಿ ಆಟ ಈಗ.

**ಶ್ರೀ ಐವನ ಡಿ'ಸೋಜಾ:-** ಕಬಡ್ಡಿ ರಾಜಕಾರಣಿಗಳ ಪ್ರಿಯವಾದ ಆಟ. ಕಾಲೆಳೆಯುತ್ತಾರೆ ಹುಷಾರಾಗಿ ಇರಬೇಕು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಗೋವಿಂದರಾಜ್‌ರವರ ಬಗ್ಗೆ ಎರಡೂ ಕಡೆಯ ಸದಸ್ಯರು ಬಹಳಷ್ಟು ಗುಣಗಾನವನ್ನು ಮಾಡಿದ್ದಾರೆ. ನಾನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. 'Opportunity knocks once at our doors' ಎನ್ನುವ ಮಾತಿದೆ. ಅವಕಾಶಗಳು ಖಚಿತವಾಗಿ ಸಿಗುತ್ತವೆ, ಅವಕಾಶ ಸಿಕ್ಕಾಗ ಅದನ್ನು ಸದ್ಬಳಕೆ ಮಾಡಿಕೊಳ್ಳುವಂತಹ ಚಾಕಚಕ್ಯತೆ ಕೌಶಲ್ಯತೆ ಇರಬೇಕು. ಆ ಗುಣಗಳು ಮಾನ್ಯ ಗೋವಿಂದ ರಾಜ್‌ರಲ್ಲಿ ಇವೆ ಎಂದು ನಾನು ಭಾವಿಸುತ್ತೇನೆ. ಕುರ್ಚಿ ಸಿಗುತ್ತದೆ, ಆದರೆ ನಮ್ಮ ವ್ಯಕ್ತಿತ್ವದಿಂದ ಆ ಕುರ್ಚಿಗೆ ಗೌರವ ಬರಬೇಕು. ಆ ಕುರ್ಚಿಯ ಸ್ಥಾನದಿಂದ ನಮಗೆ ಗೌರವ ಬರಬಾರದು. ನಾವು ಕುರ್ಚಿಯಲ್ಲಿ ಕುಬ್ಜರಾಗಿ, ಉತ್ಸವಮೂರ್ತಿಯಾಗಿ ಕೂಡಬಾರದು. ಕುರ್ಚಿಯಲ್ಲಿ ಕುಳಿತಾಗ ಆ ಕುರ್ಚಿಗಿಂತ ನಾವೇ ಎತ್ತರವಾಗಿರಬೇಕು. ಅಂತಹ ಎತ್ತರದ ಕೆಲಸವನ್ನು ಮಾನ್ಯ ಗೋವಿಂದರಾಜ್‌ರವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದಾರೆಂದು ಹೇಳಿ ಈ ಸದನದ ಪರವಾಗಿ, ನನ್ನ ಪರವಾಗಿ ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಸದಸ್ಯರಾದ ಐವನ ಡಿ'ಸೋಜಾರವರು ಈ ಕಬಡ್ಡಿ ಆಟ ಪಟ್ಟಣಕ್ಕೆ ಮಾತ್ರ ಸೀಮಿತವಾಗಿದೆ ಎಂದು ಹೇಳಿದರು. ಆದರೆ ನನ್ನ ಜನ್ಮಸ್ಥಳ ಬಾಡಗಂಡಿ ಎನ್ನುವ ಸಣ್ಣ ಗ್ರಾಮ. ಇಲ್ಲಿ ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಡಿಸುವಂತಹ ಸಿಥೆಂಟಿಕ್ ಮೈದಾನವನ್ನು ನಮ್ಮ ಶಾಲೆಯಲ್ಲಿ ನಾವು ನಿರ್ಮಾಣ ಮಾಡಿದ್ದೇವೆ. ನಮ್ಮ ಶಾಲಾ ಮಕ್ಕಳು ಬ್ಯಾಸ್ಕೆಟ್‌ಬಾಲ್ ಆಟಗಾರರಾಗಿ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಹೊರಹೊಮ್ಮಲು ನಾವು ಅನುವು ಮಾಡಿಕೊಟ್ಟಿದ್ದೇವೆ. ಇವತ್ತು ಬ್ಯಾಸ್ಕೆಟ್‌ಬಾಲ್ ಕ್ರೀಡೆ ಗ್ರಾಮೀಣ ಭಾಗದಲ್ಲಿಯೂ ಪ್ರಸಿದ್ಧಿ ಪಡೆಯುತ್ತಿದೆ ಎನ್ನುವುದನ್ನು ನಮ್ಮ ಗ್ರಾಮದ ಬಾಪೂಜಿ ಅಂತರರಾಷ್ಟ್ರೀಯ ಶಾಲೆಗೆ ಬಂದು ನೋಡಬೇಕು. ಮಾನ್ಯ ಗೋವಿಂದರಾಜ್‌ರವರದ್ದು ತುಂಬಾ ಅದ್ಭುತವಾದ ಸಾಧನೆ. ಅವರಿಗೆ ತುಂಬ ಹೃದಯದಿಂದ ಕೃತಜ್ಞತೆಗಳನ್ನು ಸಲ್ಲಿಸುವ ಜೊತೆಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮುಂದಿನ ದಿನಮಾನಗಳಲ್ಲಿ ಇನ್ನು ಹೆಚ್ಚು-ಹೆಚ್ಚು ಕೆಲಸಗಳನ್ನು ಮಾಡಿ, ರಾಷ್ಟ್ರಕ್ಕೆ ಮಾತ್ರವಲ್ಲ ನಮ್ಮ ನಾಡಿಗೂ ಗೌರವ ತರುವಂತೆ ಆಗಲಿ ಎಂದು ಶುಭ ಹಾರೈಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನಮ್ಮ ಸದನದ ಸದಸ್ಯರಾದ ಗೋವಿಂದರಾಜ್‌ರವರು ಬ್ಯಾಸ್ಕೆಟ್‌ಬಾಲ್‌ನಲ್ಲಿ ಇಷ್ಟೊಂದು ಸಾಧನೆ ಮಾಡಿರುವುದು ನಿಜವಾಗಿಯು ಸಂತೋಷವಾಗಿದೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದೇ ರೀತಿ ರಾಷ್ಟ್ರೀಯ ಕ್ರೀಡೆಗಳನ್ನು ಇಂದು ಎಲ್ಲರೂ ಪ್ರೋತ್ಸಾಯಿಸಬೇಕಾಗಿದೆ. ನಮ್ಮ ಬೀಳಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವಂತಹ ತುಳಸೀಗೆರೆ ಎನ್ನುವ ಒಂದು ಸಣ್ಣ ಗ್ರಾಮವಿದೆ. ಆ ಗ್ರಾಮದ ಯುವ ಪ್ರತಿಭೆಯೊಬ್ಬ ಸೈಕ್ಲಿಂಗ್ ಕ್ಷೇತ್ರದಲ್ಲಿ ಸಾಧನೆ ಮಾಡಿ, ದೆಹಲಿಯಲ್ಲಿ ಆಟ ಆಡಿ ಬಂಗಾರದ ಪದಕವನ್ನು ಪಡೆದುಕೊಂಡಿದ್ದಾನೆ. ಈಗ ಅವನಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಟವಾಡುವ ಅವಕಾಶ ಬಂದಿದೆ. ಇಂತಹ ಬಡ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ ಸರ್ಕಾರ ಇವರಿಗೆ ಧನ ಸಹಾಯ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಈ ಬಡ ವಿದ್ಯಾರ್ಥಿ ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಗಿ ಸೈಕ್ಲಿಂಗ್ ಮಾಡಲು ಸಾಧ್ಯವಿಲ್ಲದ ಕಾರಣ ಸೈಕ್ಲಿಂಗ್ ಕ್ರೀಡಾಪಟುಗಳಿಗೂ ಸರ್ಕಾರ ಧನ ಸಹಾಯ ಮಾಡಬೇಕೆಂದು ಸದನದ ಮುಖಾಂತರ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಗೋವಿಂದರಾಜ್‌ರವರು ಕ್ರೀಡಾಲೋಕದಲ್ಲಿ ಮಾಡಿರುವ ಸಾಧನೆ ಮತ್ತು ವಿಶಿಷ್ಟತೆಯನ್ನು ಈ ಸದನವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ( ಯುವಜನ ಮತ್ತು ಕ್ರೀಡಾ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಗೋವಿಂದರಾಜ್‌ರವರು ಕರ್ನಾಟಕ ರಾಜ್ಯಕ್ಕೆ ಗೌರವವನ್ನು ತಂದಿದ್ದಾರೆ. ಕರ್ನಾಟಕ ರಾಜ್ಯದ ಬ್ಯಾಸ್ಕೆಟ್‌ಬಾಲ್ ಕ್ರೀಡಾಪಟು ಇವತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಸ್ಥಾನ ಪಡೆದಿರುವುದು ನಿಜವಾಗಿಯೂ ನಮ್ಮ ರಾಜ್ಯಕ್ಕೆ ಗೌರವ ತರುವಂತಹ ವಿಷಯ.

ಮುಂದು)

(193) 12-10-2019 (12-20) ಬಿಎಸ್‌ಡಿ-ಎಂಡಿ

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು)**

ಅವರ ಸಲಹೆಗಳನ್ನು ಕರ್ನಾಟಕ ರಾಜ್ಯ ಸರ್ಕಾರವು ಪಡೆದುಕೊಂಡು, ರಾಜ್ಯದಲ್ಲಿ ಕ್ರೀಡೆಗೆ ಇನ್ನೂ ಹೆಚ್ಚಿನ ಬೆಂಬಲವನ್ನು ಯಾವರೀತಿ ಕೊಡಬೇಕು ಎಂಬುದರ ಬಗ್ಗೆ ಗಮನ ನೀಡುತ್ತೇವೆ. ಮಾನ್ಯ ಎಸ್.ಆರ್. ಪಾಟೀಲರಿಗೆ ನೆನಪಿರಬಹುದು, ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಕ್ಯಾಬಿನೆಟ್ ರಚನೆ ಮಾಡುವ ಸಂದರ್ಭದಲ್ಲಿ ನಾನು ವಿರೋಧ ಪಕ್ಷದ ನಾಯಕನಾಗಿದ್ದು, ಮಾನ್ಯ ಗೋವಿಂದರಾಜ್ ರವರನ್ನು ಕ್ರೀಡಾ ಮಂತ್ರಿ ಮಾಡುವ ಬಗ್ಗೆ ಮನವಿ ಮಾಡಿದ್ದೆನು. ಅವರು ಏಕೆ ಮಾಡಲಿಲ್ಲವೋ ಗೊತ್ತಿಲ್ಲ? ಆದರೆ ಈಗ ಎಲ್ಲರೂ ಅಭಿನಂದನೆ ಸಲ್ಲಿಸುತ್ತಿದ್ದೇವೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಶ್ರೀ ಗೋವಿಂದರಾಜ್ ರವರನ್ನು ಮುಖ್ಯಮಂತ್ರಿಯವರ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದರು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯನ್ನಾಗಿ 10 ಜನರನ್ನು ನೇಮಿಸುತ್ತಾರೆ, ಯಾರ‍್ಯಾರಿಗೆ ಉದ್ಯೋಗ ಇರುವುದಿಲ್ಲವೋ, ಅಂತಹವರನ್ನು ನೇಮಿಸುತ್ತಾರೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ, ನಾನು ಹೇಳುತ್ತಿಲ್ಲ. ಮಾನ್ಯ ಬೋಸರಾಜುರವರು ಒಂದು ಸಾರಿ ಕಾರ್ಯದರ್ಶಿಯಾಗಿದ್ದರು. ಅದಕ್ಕೆ ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಬ್ರಾಹಿಂರವರು ಹೇಳಿದಂತೆ 18 ಜನರನ್ನು ತೆಗೆದುಕೊಂಡು ಅವರನ್ನು ಕ್ರೀಡಾ ಸಚಿವರನ್ನಾಗಿ ಮಾಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಬ್ರಾಹಿಂ ರವರು ಅವಕಾಶ ಸಿಕ್ಕಿದರೆ ಕಬ್ಬಡ್ಡಿ ಆಡದೇ ಬರುವುದಕ್ಕೆ ತಯಾರಿದ್ದಾರೆ. ಅವರು ಮುಸುಲ್ಮಾನ ಕೋಟಾದಲ್ಲಿ ಬಂದರೂ ಬರಬಹುದು. ನನ್ನ ಅವರ ಸ್ನೇಹ ಬೇರೆ ಇದೆ.

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಯಲ್ಲಿ ಪಕ್ಷದಲ್ಲಿ ಮುಸುಲ್ಮಾನರ ಕೋಟ ಎಂದು ಇದೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷವು ಮುಸುಲ್ಮಾನರಿಗೋಸ್ಕರವೇ ಇರುವ ಪಕ್ಷವಾಗಿದೆ. ಅಲ್ಲಿ ಬೇರೆಯವರಿಗೆ ಇಲ್ಲವೇ ಇಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜ್ ರವರನ್ನು ಬಿ.ಜೆ.ಪಿ. ಸೇರಿಸಿಕೊಂಡು ಅವರೇ ಕ್ರೀಡಾ ಸಚಿವರನ್ನಾಗಿ ಮಾಡಲಿ.

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿಜಯಸಿಂಗ್, ಮಾನ್ಯ ಶರಣಪ್ಪ ಮಟ್ಟೂರ, ಶ್ರೀಮತಿ ಜಯಮ್ಮ, ಶ್ರೀಮತಿ ವೀಣಾ ಅಚ್ಚಯ್ಯ, ಮಾನ್ಯ ಬೋಸರಾಜು, ಮಾನ್ಯ ಅಲ್ಲಂ ವೀರಭದ್ರಪ್ಪ, ಮಾನ್ಯ ಕೆ.ಸಿ. ಕೊಂಡಯ್ಯ, ಮಾನ್ಯ ಪ್ರಕಾಶ್ ಕೆ. ರಾಥೋಡ್ ಹಾಗೂ ಮಾನ್ಯ ಎಸ್.ಆರ್. ಪಾಟೀಲರು ಯಾವ ಸಮುದಾಯ ಎಂದು ಅವರೇ ಹೇಳಬೇಕು. ರಾಜಕೀಯಕ್ಕೋಸ್ಕರ ಅವರು ಮುಸುಲ್ಮಾನ ಮತ್ತು ಹಿಂದೂಗಳ ಪಕ್ಷ ಎಂದು ಕಟ್ಟಿದ್ದಾರೆ. ಆದರೆ ಭಾರತ ದೇಶಕ್ಕೋಸ್ಕರ ನಮ್ಮ ಪಕ್ಷವಾಗಿದೆ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಭಾರತ ವಿಭಜನೆಯಾದಾಗ ಅಖಂಡ ಭಾರತದಲ್ಲಿ ಮುಸುಲ್ಮಾನರು ಇರುವುದಕ್ಕೆ ಆಗುವುದಿಲ್ಲ ಎಂದು ಶ್ರೀಯುತ ಮಹಮದ್ ಆಲಿ ಜಿನ್ನಾರವರು ಥಿಯರಿ ಮಂಡಿಸಿದಾಗ ಅದನ್ನು ಖಂಡಿಸುವ ಕರ್ತವ್ಯವನ್ನು ಕಾಂಗ್ರೆಸ್ ಪಕ್ಷ ಮಾಡಲಿಲ್ಲ. ಎರಡು ರಾಷ್ಟ್ರಗಳ ವಿಭಜನೆ ಆಧಾರದಲ್ಲಿ ಜನಸಂಖ್ಯೆ ನಿರ್ಧರಿತವಾಗಿರುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಇವತ್ತು ಕೊನೆಯ ದಿನವಾಗಿದ್ದು, ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಇದ್ದು, ಅದರ ಬಗ್ಗೆ ಮಾತನಾಡೋಣ. ದಯವಿಟ್ಟು ಎಲ್ಲರಿಗೂ ಕೈಮುಗಿದು ಹೇಳುತ್ತೇನೆ.

**(ಗೊಂದಲ)**

**6. ಅಭಿನಂದನಾ ನಿರ್ಣಯ**

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರಕೃತಿ ವಿಕೋಪದ ಪರಿಣಾಮವಾಗಿ ಭೀಕರ ಜಲಪ್ರಳಯದ ಅಪಾಯದಲ್ಲಿ ಸಿಲುಕಿದ್ದ ರಾಜ್ಯದ ಸಾವಿರಾರು ಜನರನ್ನು ಹಾಗೂ ಜಾನುವಾರುಗಳನ್ನು ಸುರಕ್ಷಿತವಾಗಿ ರಕ್ಷಿಸಲು ಹಗಲಿರುಳು ಅವಿರತವಾಗಿ ಶ್ರಮಿಸಿದ ಎನ್.ಡಿ.ಆರ್.ಎಫ್ ತಂಡ. ಎಸ್.ಡಿ.ಆರ್.ಎಫ್ ತಂಡ, ತುರ್ತು ಅಗ್ನಿ ಶಾಮಕದಳ, ವಾಯುಸೇನಾ ಸಿಬ್ಬಂದಿ, ಸೇನಾ ಸಿಬ್ಬಂದಿ, ರಾಜ್ಯದ ವಿವಿಧ ಸಂಘ ಸಂಸ್ಥೆಗಳು, ರಾಜ್ಯದ ಅಧಿಕಾರಿ ಸಿಬ್ಬಂದಿ ವರ್ಗ ಹಾಗೂ ಈ ಒಂದು ಮಹತ್ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕೈಜೋಡಿಸಿದ ಇತರ ಎಲ್ಲರ ಶ್ರಮವು ಅತ್ಯಂತ ಶ್ಲಾಘನೀಯ ಹಾಗೂ ಅಭಿನಂದನೀಯ ಕಾರ್ಯವಾಗಿರುತ್ತದೆ.

ಆದುದರಿಂದ, ಈ ಸದನವು ಎಲ್ಲರಿಗೂ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತದೆ.

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ನಿನ್ನೆ ಸದನವು ಮುಕ್ತಾಯವಾಗುವಾಗ ಕನಿಷ್ಠ ಪಕ್ಷ ನಾವು 15 ದಿವಸಗಳಿಂದ ತಯಾರಾಗಿರುವುದರಿಂದ, ಗಮನ ಸೆಳೆಯುವ ಸೂಚನೆ ಮತ್ತು ನಿಯಮ 330 ಆದ ನಂತರ ಮುಂದುವರೆಸುವ ಬಗ್ಗೆ ವಿನಂತಿಸಿದ್ದೆವು. ದಯಮಾಡಿ ತಾವು 5 ನಿಮಿಷಗಳ ಅವಕಾಶ ಕೊಡಬೇಕು. ಈಗಾಗಲೇ ಶೇಕಡ 95 ರಷ್ಟು ಅದರ ಮೇಲೆ ಮಾತನಾಡಿರುವುದರಿಂದ ಈ ವಿಚಾರಗಳನ್ನು ತೆಗೆದುಕೊಳ್ಳಬೇಕು. ನಾವು 11 ಗಂಟೆಗೆ ಸದನಕ್ಕೆ ಬಂದೆವು.

**ಸಭಾಪತಿಯವರು:-** ಆದ್ಯತೆ ಬೇಕಲ್ಲವೇ?

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೊಂಡಯ್ಯನವರು ನಿಯಮ 72 ಮತ್ತು ನಿಯಮ 330ರಡಿಯಲ್ಲಿ ಅವರ ಕ್ಷೇತ್ರಗಳಿಗೆ ಸಂಬಂಧಪಟ್ಟ ಜ್ವಲಂತ ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದು, ಸದನವು 3 ದಿವಸದಲ್ಲಿ ಮುಕ್ತಾಯವಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ಅದಕ್ಕೆ ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ದಯಮಾಡಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಸಮಾಧಾನಕಾರವಾದ ಉತ್ತರ ಬಂದರೆ ಅಭಿನಂದಿಸುತ್ತೇವೆ. ಎಲ್ಲಾ ಬೇಡಿಕೆಗಳನ್ನು ಈಡೇರಿಸಿದರೆ ಈ ರಾಜ್ಯದ ಜನರಲ್ಲಿ ಶಾಶ್ವತವಾಗಿ ಮತ್ತು ಅಜರಾಮರವಾಗಿ ಉಳಿದು ಇತಿಹಾಸ ಸೃಷ್ಟಿ ಮಾಡುತ್ತಾರೆ.

**7. <u>ನಿಯಮ 68 ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ</u>**

**ವಿಷಯ: ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ**

**ಡಾ: ತೇಜಸ್ವಿನಿಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ 5 ನಿಮಿಷಗಳ ಕಾಲಾವಕಾಶ ಕೊಟ್ಟಿದ್ದು, ಅದನ್ನು ಗೌರವಿಸಿ, 5 ನಿಮಿಷದಲ್ಲಿ ಮುಗಿಸುವ ಪ್ರಯತ್ನ ಮಾಡುತ್ತೇನೆ. ಇದು ಆಶುಭಾಷಣ ಸ್ಪರ್ಧೆಯಂತಾಗುತ್ತದೆ. ಸದನದಲ್ಲಿ ಮಹಿಳೆಯರು 4 ಜನರಿದ್ದು, ಮುಂದಾದರೂ ಎಲ್ಲರಿಗೂ ಕಡ್ಡಾಯವಾಗಿ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ನಾಡು ಹಿಂದೆಂದೂ ಕಾಣದಂತಹ ಭೀಕರ ಪ್ರವಾಹವನ್ನು ಆಗಸ್ಟ್ 2019 ರಲ್ಲಿ ಕಂಡಿತು. ಬಹುಶಃ ಮನುಷ್ಯ ಕಾಡು ಕಡಿಯುವುದು, ಅವೈಜ್ಞಾನಿಕವಾಗಿ ಗಣಿಗಾರಿಕೆ ಮಾಡುವುದು, ನದಿಗಳಿಂದ ಮರಳು ತೆಗೆಯುವ ನಮ್ಮ ದುರಾಸೆಗೆ ಪ್ರಕೃತಿ ನಡೆಸಿದ ಪ್ರಹಾರ ಎಂದು ನಾನು ಭಾವಿಸುತ್ತೇನೆ. ಸುಮಾರು 224 ಮಿ.ಮೀ ಮಳೆಯಾಗಿದ್ದು, 118 ವರ್ಷಗಳ ಇತಿಹಾಸದಲ್ಲಿ ಕಂಡರಿಯದ ಮಳೆಯಾಗಿದ್ದು, ಸುಮಾರು 279 ಪರ್ಸೆಂಟ್‌ಗಿಂತಲೂ ಹೆಚ್ಚು ಮಳೆಯಾಗಿದೆ. ಇದರಿಂದ ನಾಡಿನ 22 ಜಿಲ್ಲೆ, 103 ತಾಲ್ಲೂಕು ಮತ್ತು 2,798 ಹಳ್ಳಿಗಳಲ್ಲಿ ಪ್ರವಾಹದಿಂದ ಸಂತ್ರಸ್ತರು ಕಷ್ಟಪಟ್ಟಿದ್ದಾರೆ. ಡಾ: ರಾಜ್‌ಕುಮಾರ್ ರವರ ' ಎರಡು ಕನಸು' ಸಿನಿಮಾದ ಹಾಡಿನಲ್ಲಿ

**" ನೀರಿನಲ್ಲಿ ದೋಣಿ ಮುಳುಗೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈಜಿ ದಡವ ಸೇರುವೆ,**
**ಸುಳಿಗೆ ದೋಣಿ ಸಿಲುಕಿದಾಗ**
**ಬದುಕಿ ಬರಲು ಸಾಧ್ಯವೇ?"**

ಎಂದು ಇದೆ.

ಮುಂದುವರೆದು......,

**" ಹಣತೆಯಲ್ಲಿ ದೀಪ ಉರಿಯೇ**
**ಬೆಳಕಿನಲ್ಲಿ ಬಾಳುವೆ,**
**ಧರೆಯೇ ಹತ್ತಿ ಉರಿಯುವಾಗ**
**ಬದುಕಲೆಲ್ಲಿ ಓಡುವೇ,"**

ಎಂದು ಇದೆ. ಇದು ಮನುಷ್ಯನ ಕಲ್ಪನೆಗೆ ಮೀರಿದಂತಹದ್ದಾಗಿದೆ. ಮಾನ್ಯ ಎಸ್.ಆರ್. ಪಾಟೀಲರು ಅದ್ಭುತ, ಸಮತೋಲವಾದ ಮತ್ತು ಎಲ್ಲಾ ಆಯಾಮಗಳಿಂದ ಒಳಗೊಂಡ ಮಾತುಗಳನ್ನು ಹೇಳಿದ್ದಾರೆ. ಸರ್ಕಾರಕ್ಕೆ ಎಷ್ಟೇ ತಿಳಿದಿದ್ದರೂ, ಕಾಣದಂತಹ ಆಯಾಮಗಳನ್ನು ತಿಳಿಸಿಕೊಡುವ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದರು. ನಾನು ಇದನ್ನು ' ಬೆಳಕು ಚೆಲ್ಲಿದರು' ಎಂದು ಕರೆಯುತ್ತೇನೆ. ಹಾಗೆ ನನ್ನ ಅನೇಕ ಸನ್ಮಿತ್ರರು ಬೆಂಕಿಯನ್ನು ಚೆಲ್ಲಿದರು. ಅವರು ಬೆಂಕಿ ಚೆಲ್ಲಿದಾಗ ನಮ್ಮ ಕಡೆಯವರು ಬಿರುಗಾಳಿಯನ್ನು ಒಡ್ಡಿದರು. ಇದು ಪ್ರಜಾಪ್ರಭುತ್ವದಲ್ಲಿ ಸಹಜವೇ ಆಗಿದೆ. ಆದರೆ ಸರ್ಕಾರ ಏನೂ ಮಾಡಲಿಲ್ಲ, ಸರ್ಕಾರ ನಿರೀಕ್ಷಿತ ಮಟ್ಟದಲ್ಲಿ ಪರಿಹಾರ ಕಾರ್ಯ ಕೈಗೊಳ್ಳಲಿಲ್ಲ ಎನ್ನುವ ನಿಟ್ಟಿಯಲ್ಲಿ ವೈಯಕ್ತಿಕ ಟೀಕೆಗಳನ್ನು ಮಾಡಿದ ಬಗ್ಗೆ ನಾನು ಇಷ್ಟನ್ನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಪ್ರವಾಹ ಸಂದರ್ಭದಲ್ಲಿ ಮಾಡಿದ ಪ್ರವಾಸದ ಸಂಪೂರ್ಣ ಮಾಹಿತಿ ನನ್ನ ಬಳಿ ಇದ್ದು, ಮಾನ್ಯ ಸದಸ್ಯರಿಗೆ ಅನುಮಾನವಿದ್ದಲ್ಲಿ ಅದನ್ನು ನಾನು ತೆಗೆದುಕೊಳ್ಳಬಹುದು. ಸಮಯದ ಅಭಾವದ ಕಾರಣ ಎಲ್ಲವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ರಾಜ್ಯ ಸರ್ಕಾರವು ಕೇಂದ್ರಕ್ಕೆ ಮನವಿ ಮಾಡಿದ ನಂತರ ಕೇಂದ್ರದ ತಂಡ ಅಧ್ಯಯನಕ್ಕೆ ಬರುತ್ತಿತ್ತು. ಆದರೆ ರಾಜ್ಯ ಸರ್ಕಾರವು ತಕ್ಷಣ ಮನವಿ ಮಾಡಿದ್ದರಿಂದ ಕೇಂದ್ರದ ಗೃಹ ಮಂತ್ರಾಲಯದ ಜಂಟಿ ಕಾರ್ಯದರ್ಶಿಯವರಾದ ಶ್ರೀ ಪ್ರಕಾಶ್ ರವರ ನೇತೃತ್ವದಲ್ಲಿ 7 ಹಿರಿಯ ಅಧಿಕಾರಿಗಳ ತಂಡ ಪ್ರವಾಹ ಪೀಡಿತ ಪ್ರದೇಶಗಳಾದ ಬೆಳಗಾವಿ, ಬಾಗಲಕೋಟೆ, ಗದಗ, ಧಾರವಾಡ ಮತ್ತು ಕೊಡಗು ಜಿಲ್ಲೆಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಿತು. ಈ ಪ್ರಕ್ರಿಯೆ ಮೊದಲು ನಡೆಯುತ್ತಿರಲಿಲ್ಲ, ಆದರೆ ಕೇಂದ್ರದ ತಂಡವು ಅತೀ ಶೀಘ್ರವಾಗಿ ಕರ್ನಾಟಕಕ್ಕೆ ಬಂತು ಎಂದು ಗುರುತು ಮಾಡುವುದಕ್ಕೆ ಇಷ್ಟಪಡುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(194) 12.10.2019 12.30 ಪಿಕೆ:ಎಂಡಿ

**ಡಾ|| ತೇಜಸ್ವಿನಿ ಗೌಡ(ಮುಂದುವರೆದಿದೆ)**

ನಾಡಿನ ಜೀವನದಿಗಳಾಗಿ ಜೀವರಾಶಿಯನ್ನು ಪೊರೆಯುತ್ತಿದ್ದ ದೂದ್ ಗಂಗಾ, ವೇದಗಂಗಾ, ಮಲ್ಲಪ್ರಭೆ, ಘಟಪ್ರಭೆ, ಹಿರಣ್ಯಕೇಶಿ, ಮಾರ್ಕಂಡೇಯ ಮತ್ತು ಇದರ ಜೊತೆ ಕೃಷ್ಣೆ ನದಿಗಳಿಗೆ ಒಂದೇ ಸಲ 6 ಲಕ್ಷ ಕ್ಯೂಸೆಕ್ಸ್ ನೀರು ಬಂತು. ಮಾನ್ಯ ಸಭಾಪತಿಯವರೇ, "ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಮಾಡಿದಂತೆ" ಎನ್ನುವ ಮಾತಿದೆ. ಅತಿ ದೊಡ್ಡ ಜಲಾಶಯಗಳಲ್ಲಿ ಹೂಳು ಎತ್ತುವುದು, ನದಿ ಪಾತ್ರಗಳಲ್ಲಿ ಹೂಳು ಎತ್ತುವುದು, ನೀರಾವರಿಗೆ ಆದ್ಯತೆ ಕೊಡುವುದು ಇಂತಹವುಗಳು ಮೊದಲು ಆಗಬೇಕು. ನಮ್ಮ ಹಿರಿಯ ನಾಯಕರು, ಮಾಜಿ ಮುಖ್ಯಮಂತ್ರಿಗಳು ಆದ ಮಾನ್ಯ ಜಗದೀಶ್ ಶೆಟ್ಟರ್‌ರವರು ಇಲ್ಲಿ ಕುಳಿತುಕೊಂಡಿದ್ದಾರೆ. ನೀರಾವರಿ ಯೋಜನೆಗಳಿಗೆ ನಾವು ಹೆಚ್ಚಿನ ಆದ್ಯತೆ ಕೊಡಲೇಬೇಕಾದ ಸಂದರ್ಭ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ ಎನ್ನುವುದನ್ನು ಕಂಡುಕೊಳ್ಳಬೇಕು. ಈ ಸರ್ಕಾರ ಸಂತ್ರಸ್ತರ ಪ್ರಾಣ ರಕ್ಷಣೆಗೆ ಮೊದಲ ಆದ್ಯತೆ ಕೊಟ್ಟಿತು. ಅದನ್ನೇ ಮಾಡಬೇಕಾದುದು ಕೂಡ. ಮಾನ್ಯ ತಿಪ್ಪೇಸ್ವಾಮಿಯವರೂ ಸೇರಿದಂತೆ ನಮ್ಮ ಅನೇಕ ಜನ ಸ್ನೇಹಿತರು, ರೂ. 38 ಸಾವಿರ ಕೋಟಿಯಷ್ಟು ಹಾನಿಯಾಗಿದೆ ಎಂದು ಅಂದಾಜು ಮಾಡಿದಿರಿ, ನಂತರ ಪರಿಷ್ಕರಿಸಿ ರೂ.35 ಸಾವಿರ ಕೋಟಿ ಎಂದು ಏಕೆ ಬದಲಾವಣೆ ಮಾಡಿದಿರಿ, ರೂ. 3 ಸಾವಿರ ಕೋಟಿ ಎಲ್ಲಿ ಹೋಯಿತು ಎಂದು ಕೇಳಿದರು. ಓಆಖಈ (National Disaster Response Fund) ನ ಮಾನದಂಡಗಳು ಬೇರೆ ಇವೆ, ಖಆಖಈ (State Disaster Response Fund) ನ ಮಾನದಂಡಗಳು ಬೇರೆ ಇವೆ. ಅನೇಕ ಸನ್ಮಿತ್ರರು ಮಾತನಾಡುವಾಗ market value ಬಗ್ಗೆ ಪ್ರಸ್ತಾಪ ಮಾಡಿದರು. ನನ್ನ ಒಂದು ಎಕರೆ ಕಾಫಿ ತೋಟವನ್ನು ಬಹಳ ಚೆನ್ನಾಗಿ ನಿರ್ವಹಣೆ ಮಾಡಿರುವುದರಿಂದ ಅದು ರೂ. 30 ಲಕ್ಷ ಬೆಲೆ ಬಾಳುತ್ತದೆ. ನನ್ನ ಸ್ನೇಹಿರೊಬ್ಬರು ಕಡಿಮೆ ನಿರ್ವಹಣೆ ಮಾಡಿರುವುದರಿಂದ ಅದು ರೂ. 10 ಲಕ್ಷ ಬೆಲೆ ಬಾಳುತ್ತದೆ. ನೀವು ಹೇಳುವುದು ಸರಿ, ನಾವು ಹೇಳುವುದೂ ಸರಿ. ಆದರೆ ಪರಿಹಾರ ಕೊಡಬೇಕಾದಾಗ ಅಲ್ಲಿ ನಮ್ಮ ಭಾವನೆಗಳಿಗೆ ಬೆಲೆ ಸಿಗುವುದಿಲ್ಲ. ಅಲ್ಲಿ ಗಣಿತಕ್ಕೆ ಬೆಲೆ ಸಿಗುತ್ತದೆ. ಪರಿಹಾರ ಎನ್ನುವುದು ಕೇವಲ ಭಾಷಣ ಕೊಡುವಂಥದ್ದಲ್ಲ, ಪರಿಹಾರ ಬರಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ನಿಮ್ಮ ನಡುವೆ ಇರಬಹುದಾದ ಭಾವನಾತ್ಮಕ ವ್ಯತ್ಯಾಸಗಳಿಗೆ ನಿರ್ದಿಷ್ಟವಾದ ರೂಪ ಕೊಡಬೇಕಾದರೆ ನಿಯಮಾವಳಿಗಳನ್ನು ಬದಲಾಯಿಸಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ನಿನ್ನೆ ಅತಿ ಹೆಚ್ಚು ಜನ ಸದಸ್ಯರು ಪ್ರವಾಹದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ಪೀಠಕ್ಕೆ ನಾನು ವಂದಿಸುತ್ತೇನೆ. ಇದರಿಂದ ಪ್ರವಾಹ ಪೀಡಿತ ಜನರ ನೋವುಗಳ ಮೇಲೆ ಬೆಳಕು ಚೆಲ್ಲುವಂತಾಯಿತು. 2009ರಲ್ಲೂ ಮುಖ್ಯ ಮಂತ್ರಿಗಳಾಗಿದ್ದ ಸನ್ಮಾನ್ಯ ಯಡಿಯೂರಪ್ಪನವರು ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಿದ್ದರು. ನಿನ್ನೆ ನಮ್ಮ ಸ್ನೇಹಿತರು ತಮಾಷೆ ಮಾಡುತ್ತಾ, ನಮಗೆ ಈ ಭಾಗದಲ್ಲಿ ಕುಳಿತುಕೊಳ್ಳುವ ಅಭ್ಯಾಸವಿಲ್ಲ, ನಿಮಗೆ ಆ ಭಾಗದಲ್ಲಿ ಕುಳಿತುಕೊಳ್ಳುವ ಅಭ್ಯಾಸ ಇಲ್ಲ ಎಂಬ ಮಾತುಗಳನ್ನು ಹೇಳಿದರು. ಅವಕಾಶ ಸಿಕ್ಕಿದಾಗ ಅಭ್ಯಾಸವಾಗುತ್ತದೆ. ಬಿಜೆಪಿಯವರಿಗೆ ಅತಿ ಹೆಚ್ಚು ಸೀಟುಗಳು ಸಿಕ್ಕಿದ್ದರೂ ಅಧಿಕಾರದ ಹತ್ತಿರ ಬರುವಷ್ಟು ಸಂಖ್ಯೆಗಳು ಸಿಕ್ಕಿರಲಿಲ್ಲ. ಆದರೆ ಅನುಭವಕ್ಕೆ ಕೊರತೆ ಇಲ್ಲ. ವಿರೋಧ ಪಕ್ಷದಲ್ಲಿ ಕುಳಿತುಕೊಂಡ ಮಾತ್ರಕ್ಕೆ ಅನುಭವ ಇರುವುದಿಲ್ಲ ಎಂದು ಹೇಳುವುದು ಸರಿಯಲ್ಲ. ತಮ್ಮ ಜೀವನದ 50 ವರ್ಷಗಳ ಕಾಲ ಹೋರಾಟ ನಡೆಸಿದಂತಹ, ರೈತರ ಜೊತೆ, ನೊಂದವರ ಜೊತೆ, ಕಟ್ಟಕಡೆಯ ಮನುಷ್ಯರ ಜೊತೆ ಇದ್ದ ಮಾನ್ಯ ಯಡಿಯೂರಪ್ಪನವರನ್ನು ವಿರೋಧ ಪಕ್ಷದಲ್ಲಿದ್ದಾಗಲೂ ನೆರೆ ಬಂದಾಗ ಅಧ್ಯಯನಕ್ಕೆ ಕಳುಹಿಸುತ್ತಿದ್ದರು. ಬರ ಬಂದಾಗಲೂ ಅಧ್ಯಯನಕ್ಕೆ ಕಳುಹಿಸುತ್ತಿದ್ದರು.

ಮಾನ್ಯ ಸಭಾಪತಿಯವರೇ, ಅನಿರೀಕ್ಷಿತ ರಾಜಕೀಯ ಸನ್ನಿವೇಶಗಳಲ್ಲಿ ಮಾನ್ಯ ಮುಖ್ಯಮಂತ್ರಿಯಾಗಿ ಒಂಟಿ ಸಲಗದಂತೆ 15 ದಿನಗಳ ಕಾಲ ಪ್ರವಾಸ ಮಾಡಿ ತಮ್ಮ ಜವಾಬ್ದಾರಿಯನ್ನು ನಿಭಾಯಿಸಿದರು. ಮಂತ್ರಿಗಳ ಸಂಖ್ಯೆ ಕಡಿಮೆ ಇದ್ದರೂ ಸಹ ಅವರು ಸ್ವಯಂ ಸೇವಕರ ರೀತಿಯಲ್ಲಿ ಸ್ವತಃ ಪರಿಹಾರ ಕಾರ್ಯದಲ್ಲಿ ನಿರತರಾಗಿದ್ದರು. ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಯಾವುದೇ ಹಮ್ಮು ಇಟ್ಟುಕೊಳ್ಳದೇ ಕೆಲಸ ಮಾಡಿರುವುದನ್ನು ತಾವೆಲ್ಲರೂ ನೋಡಿದ್ದೀರಿ, ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಸರ್ಕಾರ ಪ್ರಾಮಾಣಿಕವಾಗಿ ಸಂತ್ರಸ್ತರಿಗೆ ಅತ್ಯಂತ ತುರ್ತಾಗಿ, 1465 ಕಾಳಜಿ ಕೇಂದ್ರಗಳನ್ನು ತೆರೆಯಿತು, ಇದರಲ್ಲಿ 4,60,751 ಜನರಿಗೆ ನೆರವನ್ನು ನೀಡಲಾಗಿದೆ. 237 ಗೋಶಾಲೆಗಳನ್ನು ತೆಗೆದು 65,611 ಜಾನುವಾರುಗಳನ್ನು ರಕ್ಷಣೆ ಮಾಡಲಾಗಿದೆ. ತುರ್ತು ಆರೋಗ್ಯ ಸೇವೆಗೆ 24 ಗಂಟೆಗಳಲ್ಲಿ ದೆಹಲಿಯಿಂದ ಅಗತ್ಯ ಔಷಧಿಗಳನ್ನು ತರಿಸಿ 22 ಜಿಲ್ಲೆಗಳಲ್ಲಿ ಹಂಚಲಾಗಿದೆ. ಕಾಳಜಿ ಕೇಂದ್ರಗಳಲ್ಲಿ 4,415 ವೈದ್ಯಕೀಯ ಆರೋಗ್ಯ ಶಿಬಿರಗಳನ್ನು ನಡೆಸಲಾಗಿದೆ. 1844 ಕ್ಯಾಂಪುಗಳನ್ನು ನಡೆಸಲಾಗಿದೆ. 6,034,393 ಜನರಿಗೆ ಚಿಕಿತ್ಸೆ ಕೊಡುವುದರ ಜೊತೆಗೆ 10,326 ಹೆಚ್ಚುವರಿ ಸಿಬ್ಬಂದಿಗಳು 22 ಜಿಲ್ಲೆಗಳಿಗೆ ಹೋಗಿ ಕೆಲಸ ಮಾಡಿದ್ದಾರೆ. ಸರ್ಕಾರ ಕೆಲಸ ಮಾಡದೇ ಇವೆಲ್ಲವೂ ನಡೆಯುವುದಕ್ಕೆ ಸಾಧ್ಯವೇ? ಪ್ರವಾಹ ಬಂದ ಕಾರಣ ಅನೇಕ ಮನೆಗಳು ಮುಳುಗಿ ಹೋಯಿತು, ಇದರ ಬಗ್ಗೆ ಮನ ಮುಟ್ಟುವಂತೆ ಮಾತನಾಡಿದಿರಿ, ಉದ್ವೇಗದಲ್ಲಿ ಮಾತನಾಡಿದಿರಿ. ಒಂದಷ್ಟು ಸಂದರ್ಭಗಳಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಜಕೀಯ ಇಣುಕಿದರೂ ಅದನ್ನು ಬಿಟ್ಟುಬಿಡಬೇಕಾಗುತ್ತದೆ. ತಕ್ಷಣ ಏನು ರೂ. 10 ಸಾವಿರ ಘೋಷಿಸಿದರೋ ಅದು ಕಡಿಮೆ ಎನಿಸಬಹುದು. ಇದು ತತಕ್ಷಣದ ಪರಿಹಾರವಾಗಿದೆ. ಇದರಲ್ಲಿ ಕೇಂದ್ರದಿಂದ ರೂ.3800 ಬಂತು, ರಾಜ್ಯ ಸರ್ಕಾರ ರೂ. 6200ಗಳನ್ನು ಸೇರಿಸಿ ಕೊಟ್ಟಿತು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ಅವರು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದಾರೆಯೇ? She is giving reply. It is almost reply.

**ಡಾ॥ ತೇಜಸ್ವಿನಿ ಗೌಡ:-** ಇದು reply ಅಲ್ಲ; ಒಬ್ಬ ಸದಸ್ಯೆಯಾಗಿ ಮಾತನಾಡುತ್ತಿದ್ದೇನೆ. Reply ಕೊಡುವುದಕ್ಕೆ ಸರ್ಕಾರ ಇದೆ. This is all in public domain. This is your problem.

**Sri IVAN D'SOUZA:-** It is a form of reply.

**Dr. THEJASWINI GOWDA:-** Always you try to mix the politics.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:-** ಇದು ನೈತಿಕತೆ ಅಲ್ಲ. This is the fact. ಜನರಿಗೆ ಪರಿಹಾರ ತಲುಪಿದೆ.

**ಶ್ರೀ ಸುನಿಲ್‌ಗೌಡ ಬಸವನಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಎಷ್ಟು temporary shed ಗಳನ್ನು ಹಾಕಿದ್ದಾರೆ ಎನ್ನುವುದು ನಿಮಗೆ ಗೊತ್ತಿದೆಯೇ? ಅದು ಕೇವಲ ಕಾಗದದಲ್ಲಿ ಮಾತ್ರ ಇದೆ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನು ರಾಜಕಾರಣ ಮಾಡಬೇಕಾದರೆ ಮಾನ್ಯ ಸದಸ್ಯರಿಗಿಂತಲೂ ಚೆನ್ನಾಗಿ ರಾಜಕಾರಣ ಮಾಡಬಲ್ಲೆ. ನಾನು yield ಆಗಿಲ್ಲ. ಸಮಯ ಕಡಿಮೆ ಇರುವುದರಿಂದ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಜೂನ್, ಜುಲೈ ತಿಂಗಳುಗಳಲ್ಲಿ ವಾಡಿಕೆಗಿಂತ ಮಳೆ ಕಡಿಮೆಯಾಯಿತು, ಜಲಾಶಯಗಳಲ್ಲಿ ಶೇಕಡ 43ರಷ್ಟು ನೀರಿತ್ತು. ಆದರೆ ಆಗಸ್ಟ್ ತಿಂಗಳ ಒಂದು ವಾರದಲ್ಲಿ ಭೀಕರ ಪ್ರವಾಹ ಬಂದಿತು. ಹೀಗಾದರೆ ಮನುಷ್ಯ ಸಹಜವಾದಂಥವನಿಗೆ ತಡೆಯಲು ಸಾಧ್ಯವಾಗುವುದೇ ಇಲ್ಲ. ಅಂತಹ ಅಹಂಕಾರದ ಮಾತುಗಳನ್ನು ಈ ಸರ್ಕಾರ ಆಡುವುದಿಲ್ಲ. ಮಾನ್ಯ ಸಭಾಪತಿಯವರೇ, ಸಂತ್ರಸ್ತರಿಗೆ ಕೊಡುವ ಪರಿಹಾರವೇ ಬೇರೆ, ಪುನರ್ನಿರ್ಮಾಣದ ಕಾರ್ಯವೇ ಬೇರೆ. ಮೂಲಭೂತ ಸೌಕರ್ಯಗಳ ಪುನರ್ನಿರ್ಮಾಣ, ರಾಜ್ಯದ ಪುನರ್ನಿರ್ಮಾಣ, ರಸ್ತೆಯ ಪುನರ್ನಿರ್ಮಾಣಗಳಿಗೆ ಬೇರೆಯೇ ವ್ಯವಸ್ಥೆ ಇದೆ. ಕಂದಾಯ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯವರು ಜಂಟಿಯಾಗಿ ಕೆಲಸ ಮಾಡಬೇಕಾಗುತ್ತದೆ. ಭೂಮಿಯನ್ನು ಗುರುತು ಮಾಡಬೇಕಾಗುತ್ತದೆ. ಇದಕ್ಕೆ ಇಲಾಖೆಗಳಲ್ಲಿ ದುಡ್ಡಿನ ಕೊರತೆ ಇಲ್ಲ. ಮಾನ್ಯ ಸಭಾಪತಿಯವರೇ, ನಿನ್ನೆ ಕೆಲವು ಸದಸ್ಯರು ಮಾತನಾಡುತ್ತಾ ಕೊಡಗು ಜಿಲ್ಲೆಗೆ ಮತ್ತು ಇತರ ಜಿಲ್ಲೆಗಳಿಗೆ ಪರಿಹಾರ ಕೊಡುವುದರ ಬಗ್ಗೆ ತುಲನೆ ಮಾಡಿ ಹೇಳಿದರು. ಇದರಿಂದ ನನಗೆ ನೋವಾಯಿತು. ತುಲನೆ ಮಾಡುವುದಕ್ಕೆ ಹೋದರೆ ಅದು reservation ತನಕ ಹೋಗುತ್ತದೆ. ದುರ್ಬಲ ಮಗುವಿಗೂ ಸಾಮಾನ್ಯ ಮಗುವಿಗೂ ತುಲನೆ ಮಾಡಬೇಡಿ. ಕೊಡಗಿನ ಸ್ಥಿತಿ ಬೇರೆ, ಕೊಡಗಿನ ಭೌಗೋಳಿಕ ಚಿತ್ರಣ ಬೇರೆ. ಒಂದು ಗುಡ್ಡ ಬಿದ್ದರೆ 10 ಎಕರೆ ಜಾಗ 2 ಎಕರೆ ಆಗುತ್ತದೆ. ಇದರ ಬಗ್ಗೆ ಶ್ರೀಮತಿ ವೀಣಾ ಅಚ್ಚಯ್ಯ, ಮಾನ್ಯ ಸುನೀಲ್ ಸುಬ್ರಮಣಿ ಮತ್ತು ಮಾನ್ಯ ಪ್ರಾಣೇಶ್‌ರವರು ತುಂಬಾ ಚೆನ್ನಾಗಿ ಮಾತನಾಡಿದರು. ನಮಗೆಷ್ಟು ಪರಿಹಾರ ಬೇಕು ಎಂದು ಕೇಳಬೇಕೇ ಹೊರತು ಬೇರೆ ಜಿಲ್ಲೆಗಳಿಗೆ ಹೋಲಿಕೆ ಮಾಡಬಾರದು, ಇಲ್ಲಿ ಪ್ರಕರಣಗಳೇ ಬೇರೆ ಇರುತ್ತದೆ. ಗರಿಷ್ಠ ರೂ. 92 ಸಾವಿರ ಇದ್ದದ್ದು ಈ ಸರ್ಕಾರ ರೂ. 5 ಲಕ್ಷ ಘೋಷಿಸಿದೆ. ಮೊದಲು ಮನೆ ಕಟ್ಟಿಕೊಡುವುದನ್ನು ನೋಡಬೇಕು. ಬಜೆಟ್ ಪಾಸ್ ಮಾಡುವಾಗ ನೀವೂ ಇರುತ್ತೀರಿ. ರೂ. 10 ಲಕ್ಷ ಪರಿಹಾರ ಕೊಡಬೇಕೆಂದು ಕೇಳಿದರು, ಸಂತೋಷ. ರೂ. 25 ಲಕ್ಷ ಕೊಟ್ಟರೆ ಇನ್ನೂ ಸಂತೋಷವಾಗುತ್ತದೆ. ಆದರೆ ಅಂತಹ ಆರ್ಥಿಕ ಸ್ಥಿತಿಯಲ್ಲಿ ನಾವು ಇದ್ದೇವೆಯೇ? ಅಂತಹ ಸ್ಥಿತಿಗೆ ತಲುಪಬೇಕು. ಮುಂದಿನ ದಿನಮಾನಗಳಲ್ಲಿ ಅಂತಹ ಸ್ಥಿತಿ ತಲುಪೋಣ, ಸುಸಜ್ಜಿತ ಮನೆಗಳನ್ನು ಕಟ್ಟಿಕೊಡೋಣ. ಇಂತಹ ಸನ್ನಿವೇಶಗಳಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನುವುದನ್ನು ಮರೆತು ಸ್ಪಂದಿಸಬೇಕಿದೆ. ಅನೇಕ ಜನ ಹಿರಿಯ ಸದಸ್ಯರು, ನಿಯೋಗ ಹೋಗಬೇಕು ಎಂದು ಹೇಳಿದರು, ಅದಕ್ಕೆ ನಮ್ಮ ಸರ್ಕಾರ ಮುಕ್ತವಾಗಿದೆ. ವಾಡಿಕೆಗಿಂತ ಅತಿ ಹೆಚ್ಚು ಮಳೆ ಬಂದಂಥ ಸಂದರ್ಭದಲ್ಲಿ ಭೂಮಿ ಕೊಚ್ಚಿಕೊಂಡು ಹೋಗಿದೆ, ಈ ನಿಟ್ಟಿನಲ್ಲಿ ಏನು ಪರಿಹಾರ ಕೊಡಲು ಸಾಧ್ಯವಿದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು practical ಆಗಿ ಮಾತನಾಡೋಣ. Practical ಆಗಿ ಮಾತನಾಡದೇ ಇದ್ದರೆ ಕಾರ್ಯಸಾಧನೆ ಮಾಡುವುದಕ್ಕೆ ಆಗುವುದಿಲ್ಲ.

ಮಾನ್ಯ ಸಭಾಪತಿಯವರೇ, ರಾಮಕೃಷ್ಣ ಪರಮಹಂಸರ ಬಳಿ ಒಬ್ಬ ತಾಯಿ ತನ್ನ ಮಗುವನ್ನು ಕರೆದುಕೊಂಡು ಹೋಗುತ್ತಾಳೆ. ಮಗು ತುಂಬಾ ಬೆಲ್ಲ ತಿನ್ನುತ್ತಿರುತ್ತದೆ. ಬೆಲ್ಲ ತಿನ್ನಬಾರದು ಎಂದು ರಾಮಕೃಷ್ಣ ಪರಮಹಂಸರು ಮೂಲಕ ಹೇಳಿಸಬೇಕೆಂದು ಆಕೆಯ ಉದ್ದೇಶವಾಗಿರುತ್ತದೆ. ಆದರೆ ರಾಮಕೃಷ್ಣ ಪರಮಹಂಸರು, '15 ದಿನ ಬಿಟ್ಟು ಬಾ ತಾಯಿ' ಎಂದು ಹೇಳುತ್ತಾರೆ. ಬೆಲ್ಲ ತಿನ್ನುವುದನ್ನು ಬಿಡು, ಸಿಹಿ ತಿನ್ನುವುದನ್ನು ಬಿಡು ಎಂದು ಮಗುವಿಗೆ ಹೇಳಲು 15 ದಿನಗಳು ಬಿಟ್ಟು ಬನ್ನಿ ಎಂದು ಏಕೆ ಹೇಳಿದರು ಎಂದು ಆ ತಾಯಿ ಯೋಚಿಸುತ್ತಾಳೆ. 15 ದಿನ ಬಿಟ್ಟು ಹೋದಾಗ, 'ನೋಡು ಮಗು ತುಂಬಾ ಬೆಲ್ಲಾ ತಿನ್ನಬಾರದು, ಬೆಲ್ಲ ತಿನ್ನುವುದನ್ನು ಬಿಡು' ಎಂದು ಹೇಳುತ್ತಾರೆ. ಈ ಮಾತನ್ನು 15 ದಿನದ ಮುಂಚೆ ಏಕೆ ಹೇಳಲಿಲ್ಲ ಎಂದು ರಾಮಕೃಷ್ಣ ಪರಮಹಂಸರನ್ನು ಕೇಳುತ್ತಾಳೆ. ಆಗ ಅವರು, 'ಏನಿಲ್ಲ ತಾಯಿ, ನಾನೂ ಬೆಲ್ಲ ತಿನ್ನುತ್ತಿದೆ, ಮಗುವಿಗೆ ಬೋಧನೆ ಮಾಡುವುದಕ್ಕೆ ಮುಂಚೆ ನಾನು ಬೆಲ್ಲ ತಿನ್ನುವುದನ್ನು ಬಿಡಬೇಕಾಗಿತ್ತು. ನಾನು ಬೆಲ್ಲ ತಿನ್ನುವುದನ್ನು ಬಿಟ್ಟ ಮೇಲೆ ಮಗುವಿಗೆ ಹೇಳಿದೆ' ಎನ್ನುವ ಮಾತನ್ನು ಹೇಳುತ್ತಾರೆ. ನೈತಿಕತೆ ಪ್ರಶ್ನೆ ಬಂದಾಗ 2009ರಲ್ಲಿ ಅಂದಿನ ಕೇಂದ್ರ ಸರ್ಕಾರ ರೂ. 1600 ಕೋಟಿಗಳನ್ನು ಎಷ್ಟು ಹಂತದಲ್ಲಿ ಬಿಡುಗಡೆ ಮಾಡಿತು ಎನ್ನುವುದನ್ನು ನೋಡಬೇಕಾಗುತ್ತದೆ. ನಾನು ಬೇರೆ ರೀತಿ ಮಾತನಾಡಿದರೂ ದಾಖಲೆ ಸುಳ್ಳು ಹೇಳುವುದಿಲ್ಲ. ಅದಕ್ಕೆ ಲೆಕ್ಕ ಇದೆ. ಇವತ್ತಿನ ಸರ್ಕಾರ ಯಾವರೀತಿ ಸ್ಪಂದಿಸಿದೆ ಎಂಬುದನ್ನು ನೋಡಬೇಕು. ಕೊಟ್ಟಿರುವ ಹಣವನ್ನು ಖರ್ಚು ಮಾಡೋಣ. ಮಾನ್ಯ ಯಡಿಯೂರಪ್ಪನರಿಗೆ ಇಡೀ ಸಂಪುಟ ಸಹಕಾರ ಕೊಡುತ್ತಿದ್ದು, ಈ ಜನಪರ ಸರ್ಕಾರ ಪ್ರಾಮಾಣಿಕವಾಗಿ ಸಂತ್ರಸ್ತರ ಪರಿಹಾರ ಕಾರ್ಯಕ್ಕೆ ಪ್ರಯತ್ನ ಮಾಡಿದೆ.

(ಮುಂದು . . .)

(195)12-10-2019 12.40 ಡಿಎಸ್-ಎಕೆ

**ಡಾ|ತೇಜಸ್ವಿನಿಗೌಡ(ಮುಂದು):-**

ಸಂತ್ರಸ್ತರ ಪರಿಹಾರ ಕಾರ್ಯಕ್ಕೆ ನಮ್ಮ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿರುವುದರಿಂದಾಗಿ ಎಲ್ಲರ ಸಹಕಾರ ಇರಲಿ, ರಾಜ್ಯದ ಭಾದಿತ ಭಾಗಗಳು, ವಿಶೇಷವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳನ್ನು ಪುನರ್ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಮುಂದಿನ ಹೆಜ್ಜೆಗಳನ್ನು ಸಕರಾತ್ಮಕವಾಗಿ ಇಡುವುದರ ಕಡೆಗೆ ನಾವು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಉತ್ತರ ಕೊಡುವುದರಿಂದ ಇಲ್ಲಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಗೋವಿಂದರಾಜ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮಗೂ ಮತ್ತು ಸದನದ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಧನ್ಯವಾದಗಳನ್ನರ್ಪಿಸುತ್ತೇನೆ. ನನಗೆ ಯಾವುದೇ ಸರ್ಕಾರ ಇದ್ದರೂ ಕೂಡ ಕ್ರೀಡೆಗೆ ಮಹತ್ವವಾದ ಬೆಂಬಲವನ್ನು ಕೊಟ್ಟಿದ್ದಾರೆ. ಎಲ್ಲಾ ಮುಖ್ಯಮಂತ್ರಿಗಳಿಗೂ ಎಲ್ಲಾ ಸರ್ಕಾರಗಳಿಗೂ ಹಾಗೂ ತಮಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜ್‌ರವರು ನೀರು ಇದ್ದ ಹಾಗೆ. ಮಜ್ಜಿಗೆ ಮತ್ತು ಹಾಲು, ಈ ಎರಡಕ್ಕೂ ಮಿಕ್ಸ್ ಆಗುತ್ತಾರೆ.

ಮಾನ್ಯ ಸಭಾಪತಿಯವರೇ, ಇವತ್ತು ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಒಂದು ವಿಚಿತ್ರವಾದಂತಹ ಸನ್ನಿವೇಶ ಉದ್ಭವವಾಯಿತು. ಮಾನ್ಯ ಜಗದೀಶ್‌ಶೆಟ್ಟರ್‌ರವರು, ನಾವೆಲ್ಲಾ ಮಾರ್ಚ್, ಏಪ್ರಿಲ್‌ನಲ್ಲಿ 1 ಟಿಎಂಸಿ ನೀರು ಬಿಡಬೇಕೆಂದು ಮಹಾರಾಷ್ಟ್ರದವರಿಗೆ ಗೋಗರೆದೆವು. ಮುಖ್ಯಮಂತ್ರಿಗಳನ್ನು ಭೇಟಿಯಾದೆವು, ಮುಖ್ಯ ಕಾರ್ಯದರ್ಶಿಯವರನ್ನು ಕಳುಹಿಸಿದೆವು. ಏನು ಮಾಡಿದರೂ 1 ಟಿಎಂಸಿ ನೀರು ಬಿಡಲಿಲ್ಲ, ಆಗ ಕಬ್ಬುಗಳೆಲ್ಲಾ ಒಣಗಿ ಹೋದವು. ಮುಂದೆ ಒಂದೂವರೆ ತಿಂಗಳಿನಲ್ಲಿ ಇಷ್ಟು ನೀರು ಬಂದು ಸಂಪೂರ್ಣವಾಗಿ ಕಬ್ಬು ನಾಶವಾದವು. ಅಂದರೆ, ಪ್ರಕೃತಿ ಎಷ್ಟು ವಿಚಿತ್ರವಾಗಿದೆ ಎಂಬುದನ್ನು ನಾನು ಹೇಳಬಯಸುತ್ತಿದ್ದೇನೆ. ಆ ಹಿನ್ನೆಲೆಯಲ್ಲಿ ಸಾಕಷ್ಟು ಪ್ರಯತ್ನ ಮಾಡಿದರೂ ಕೂಡ ಯಾವುದೇ ರೀತಿಯ ಪರಿಹಾರ ಸಿಗಲಿಲ್ಲ. ಇವತ್ತು ಅತಿವೃಷ್ಟಿಯಾಗಿ ಬಾಗಲಕೋಟೆ, ಬೆಳಗಾವಿ, ಬಿಜಾಪುರ, ಇವೆಲ್ಲಾ ಜಿಲ್ಲೆಗಳಲ್ಲಿ ಎಷ್ಟು ಅನಾಹುತವಾಗಿದೆ ಎಂದರೆ ಹಿಂದೆ ಯಾವುತ್ತೂ ಆಗಿರಲಿಲ್ಲ. 15 ದಿವಸ ಮಾನ್ಯ ಯಡಿಯೂರಪ್ಪನವರು ಒಬ್ಬರೇ ರಾಜಾಹುಲಿಯಾಗಿ ಓಡಾಡುತ್ತಿದ್ದರು ಎಂದು ತೇಜಸ್ವಿನಿಗೌಡರವರು ಹೇಳುತ್ತಿದ್ದರು. ಯಡಿಯೂರಪ್ಪನವರಿಗೆ ರಾಜಾಹುಲಿ ಎನ್ನುವ ಹೆಸರು ಏಕೆ ಬಂತು ಎಂದು ನನಗೆ ಗೊತ್ತಾಗಲಿಲ್ಲ. ದಯಮಾಡಿ ರಾಜಾಹುಲಿ ಎಂದರೆ ಏನು ಎಂದು ಸರ್ಕಾರ ಸ್ಪಷ್ಟೀಕರಣ ನೀಡಲಿ.

**ಡಾ॥ತೇಜಸ್ವಿನಿಗೌಡ:-** ನಾನು ಹೇಳಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ತೇಜಸ್ವಿನಿಯವರು ಹೇಳಿಲ್ಲ. ಆದರೆ ಯಾರೋ ರಾಜಾಹುಲಿ ಎಂದು ಹೇಳಿದರು. ಆ ರೀತಿ ಏಕೆ ಹೇಳಿದರೋ ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂಟಿಸಲಗ ಓಕೆ, ಏಕೆಂದರೆ 27 ದಿವಸ ಒಬ್ಬರೇ ಮುಖ್ಯಮಂತ್ರಿಗಳು ಇಡೀ ರಾಜ್ಯದ ತುಂಬಾ ಓಡಾಡಿದರು. ನಾನು ಅವರಿಗೆ ಬಹಳ ಅಭಿನಂದನೆಯನ್ನು ಸಲ್ಲಿಸುತ್ತೇನೆ. 27 ದಿವಸ ಇಡೀ ರಾಜ್ಯದ ತುಂಬಾ ಹಗಲು ರಾತ್ರಿ ಓಡಾಡಿದರು. ಅದರಲ್ಲಿ ಎರಡು ಮಾತಿಲ್ಲ. ಏಕೆಂದರೆ, ಒಳ್ಳೆಯ ಕೆಲಸ ಮಾಡಿದವರಿಗೆ ಅಭಿನಂದನೆಯನ್ನು ಸಲ್ಲಿಸಬೇಕು. ಆಮೇಲೆ 17 ಜನರನ್ನು ಮಂತ್ರಿಗಳಾಗಿ ಮಾಡಿದರು. 17 ಜನ ಬಂದು ಕೆಲಸ ಮಾಡಿದ್ದಾರೆ, ಆದರೆ 17 ಜನರು ಮಾಡಿರುವ ಕೆಲಸ ನಮಗೆ ಇವತ್ತಿನವರೆಗೂ ಪೂರ್ಣವಾಗಿ ಸಮಾಧಾನ ತಂದಿಲ್ಲ. ಕೆಲವರು ಸಾಕಷ್ಟು ಪ್ರಯತ್ನ ಮಾಡಿದರು, ಕೆಲವರು ಮಾಡಲಿಲ್ಲ. ನಿಸರ್ಗ ವಿಕೋಪ ಬಂದಾಗ ನಾವು ಟೀಕೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಇದು ಆಡಳಿತ ಪಕ್ಷ, ವಿರೋಧ ಪಕ್ಷದವರೆಲ್ಲರ ಜವಾಬ್ದಾರಿಯಾಗಿರುತ್ತದೆ. ಏಕೆಂದರೆ, ರಾಜ್ಯದಲ್ಲಿ ಇಷ್ಟು ದೊಡ್ಡ ವಿಪತ್ತನ್ನು ನಾವು ಎಂದೂ ಕಂಡರಿಯಲಿಲ್ಲ. 2009 ರಲ್ಲಿ ಆಗಿರುವುದಕ್ಕಿಂತ ಈ ಸಲ ಐದಾರು ಪಟ್ಟು ಜಾಸ್ತಿಯಾಗಿದೆ. ನಮ್ಮ ಆಲಮಟ್ಟಿ ಡ್ಯಾಮ್ 519.60 ಮೀಟರ್ ಎತ್ತರ ಇದೆ. ಅದನ್ನು 524.26 ಮೀಟರ್‌ಗೆ ಎತ್ತರ ಮಾಡಬೇಕೆಂದು ನಾವೆಲ್ಲಾ ಹೊರಟಾಗ, ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರಿಗೆ ಗೊತ್ತಿದೆ, ಈ ಸಲ ನೀರು ಬಂದಿರುವುದು ಆ ನೀರಿನ ಲೆಕ್ಕ ನೋಡಿದರೆ 556 ಮೀಟರ್ ಬಂದಿದೆ. ಅಂದರೆ ಅಷ್ಟು ನೀರು ಈ ಸಲ ಬಂದಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** 450 ಟಿಎಂಸಿ ನೀರು ಪಾಸ್ ಆಗಿ ಹೋಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, 450 ಟಿಎಂಸಿ ನೀರು ಪಾಸ್ ಆಗಿದೆ. ಅದರ ಲೆಕ್ಕ ತೆಗೆದರೆ 556 ಮೀಟರ್ ಆಗಬೇಕಾಗಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಯಾವತ್ತೂ ಇಂತಹದ್ದು ಕಂಡಿರಲಿಲ್ಲ. ಈ ರೀತಿ ಹಿಂದೆ ಆಗಿರಬಹುದು, ಆದರೆ ನಮಗೆ ಗೊತ್ತಿಲ್ಲ. ನಾವು ದೊಡ್ಡವರಾದ ಮೇಲೆ ಎಂದೂ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿರಲಿಲ್ಲ. ಕೇವಲ ಇದು ಸರ್ಕಾರದ ಜವಾಬ್ದಾರಿ ಮಾತ್ರವಲ್ಲ, ನಮ್ಮೆಲ್ಲರ ಜವಾಬ್ದಾರಿಯೂ ಆಗಿದೆ. ಈಗ ಆಗಿರುವಂಥದ್ದಕ್ಕೆ ನಾವು ಸ್ವಲ್ಪ liberal ಆಗಿರಬೇಕಾಗುತ್ತದೆ. ಎಲ್ಲದ್ದಕ್ಕೂ ಕಾನೂನು ನೋಡಬಾರದು. ಅಧಿಕಾರಿಗಳು ಸಾಕಷ್ಟು ಕೆಲಸ ಮಾಡಿದ್ದಾರೆ. ಎಲ್ಲದ್ದಕ್ಕೂ ಕಾನೂನು ಇರುತ್ತವೆ. ಆದರೆ ಇಂಥವುಗಳಿಗೆ ಕಾನೂನನ್ನು ಸಡಿಲ ಮಾಡಬೇಕಾಗುತ್ತದೆ. ಮೊನ್ನೆ ಯಾರೋ ಒಬ್ಬ ರೈತರಿಗೆ ಬಾಕಿ ಕಟ್ಟದಿದ್ದರೆ ಆಸ್ತಿಯನ್ನು ಜಪ್ತಿ ಮಾಡುತ್ತೇವೆಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ನೋಟಿಸ್ ಕೊಟ್ಟಿದ್ದಾರೆ. ಈ ರೀತಿ ಮಾಡಿದರೆ ರೈತರು ಮತ್ತಷ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಈಗ ಹಾವೇರಿ ಜಿಲ್ಲೆಯಲ್ಲಿ ಬಾಕಿಯನ್ನು ಕಟ್ಟುವುದಕ್ಕಾಗದೆ ಇಬ್ಬರು ರೈತರು ಆತ್ಮಹತ್ಯೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಂಡಿದ್ದಾರೆ. ಈ ರೀತಿ ಆಗಬಾರದು. ಅಂಕಿಸಂಖ್ಯೆಯ ಪ್ರಕಾರ ಒಟ್ಟು 22 ಜಿಲ್ಲೆಗಳು 132 ತಾಲ್ಲೂಕುಗಳಲ್ಲಿ ಈ ರೀತಿ ಆಗಿವೆ. ನೆರೆ ಹಾವಳಿಯಿಂದ 23,000 ಸರ್ಕಾರಿ ಶಾಲೆಗಳು ತೊಂದರೆಗೀಡಾಗಿವೆ. ಮಕ್ಕಳು ಶಾಲೆಗಳಿಗೆ ಹೋಗಿ ಅಭ್ಯಾಸ ಮಾಡುವುದಕ್ಕೆ ಆಗದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಪುಸ್ತಕಗಳೆಲ್ಲಾ ನೀರಿನಲ್ಲಿ ಮುಳುಗಿ ಹೋಗಿವೆ ಎಂದು ಹೇಳಿದರು. ಅದನ್ನೆಲ್ಲಾ ನಾವು ಒಪ್ಪುತ್ತೇವೆ. ಸರ್ಕಾರ ಮೊದಲು ಇದಕ್ಕೆ ತಕ್ಷಣ ಸ್ಪಂದಿಸಬೇಕು. ಮಕ್ಕಳ ಭವಿಷ್ಯದ ಸಲುವಾಗಿ ನಾವು ಚಿಂತನೆಯನ್ನು ಮಾಡಬೇಕಾಗಿದೆ. ಮಾನ್ಯ ಅಶೋಕ್‌ರವರೇ, ಬೆಳೆ ವಿಮೆಯ ಬಗ್ಗೆ ನಾನು ಒಂದು ವಿಷಯವನ್ನು ಹೇಳುತ್ತೇನೆ. ಇದೊಂದು ವಿಚಿತ್ರವಾದಂತಹ ಸನ್ನಿವೇಶ. Extraordinary circumstance ಆಗಿದೆ. ನೆರೆ ಬಂದಾಗ ಆಣೆವಾರಿ ಪದ್ಧತಿಯನ್ನು ಅನುಸರಿಸಬೇಕಾಗಿಲ್ಲ. ಆಣೆವಾರಿ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಆದರೆ, ಆಣೆವಾರಿ ಪದ್ಧತಿಯನ್ನು ಬಿಡಬೇಕು. ಇಂತಹ ಪರಿಸ್ಥಿತಿಯಲ್ಲಿ ಆಣೆವಾರಿ ಪದ್ಧತಿಯನ್ನು ಮಾಡಿದರೆ ಸರಿಯಾಗುವುದಿಲ್ಲ. ಸಿಕ್ಕಾಪಟ್ಟೆ ನಷ್ಟವಾಗಿದೆ. ವಿಶೇಷ ಸಂದರ್ಭಗಳಲ್ಲಿ ಇವನ್ನೆಲ್ಲಾ ಕಡಿಮೆ ಮಾಡಿ ಅವರಿಗೆ ಹೆಚ್ಚು ಅವಕಾಶ ಮಾಡಿಕೊಡುವಂತಹ ಕೆಲಸ ಆಗಬೇಕು.

ಮಾನ್ಯ ಸಭಾಪತಿಯವರೇ, ಎಲ್ಲರೂ ಎಲ್ಲಾ ವಿಷಯಗಳ ಬಗ್ಗೆ ಹೇಳಿದ್ದಾರೆ. ಆದರೆ ನೇಕಾರರ ಬಗ್ಗೆ ಯಾರು ಹೇಳಲಿಲ್ಲ. ಜಮಖಂಡಿ, ಬನಹಟ್ಟಿ, ರಬಕವಿ, ರಾಮದುರ್ಗ, ಬಾಗಲಕೋಟೆ, ಗುಳೇದಗುಡ್ಡ, ಅಲ್ಲೆಲ್ಲಾ ಬಹಳಷ್ಟು ನೇಕಾರರ ಬದುಕು ಹದಗೆಟ್ಟಿದೆ. ಮಗ್ಗಗಳೆಲ್ಲಾ ನೀರಿನಲ್ಲಿ ಮುಳುಗಿ ಹೋಗಿವೆ. ತಯಾರು ಮಾಡಿದಂತಹ ಬಟ್ಟೆಗಳೆಲ್ಲಾ ಹಾಳಾಗಿವೆ. ಅವರಿಗೆ ಕೇವಲ 25,000 ರೂಪಾಯಿ ಕೊಟ್ಟಿದ್ದಾರೆ. ಅವರು ಸೀರೆ, ಬಟ್ಟೆ ನೇಯ್ದದ್ದು ಸುಮಾರು ಒಂದು ಲಕ್ಷ ರೂಪಾಯಿಗಳವರೆಗೆ ಹೋಗಿದೆ. ಇದರ ಬಗ್ಗೆ ನುರಿತ ಅಧಿಕಾರಿಗಳು ಅಧ್ಯಯನ ಮಾಡಿ ನೇಕಾರರ ಬದುಕಿನ ಬಗ್ಗೆ ಬಹಳಷ್ಟು ಗಮನ ಕೊಡಬೇಕಾಗುತ್ತದೆ. ಅದರಿಂದ ಬದುಕುವಂಥವರು ಬಹಳಷ್ಟು ಜನರು ಇರುವುದರಿಂದ ಅವರ ಬಗ್ಗೆ ಗಮನ ಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ನಾವೆಲ್ಲಾ ರೈತರ ಬಗ್ಗೆ ಸಾಕಷ್ಟು ಕಾಳಜಿಯನ್ನು ವಹಿಸಿ ಮಾತನಾಡುತ್ತೇವೆ. ಇವತ್ತು ಮೇವಿನ ಬಗ್ಗೆ practical ಆಗಿ ಹೇಳಿದ್ದಾರೆ. ರೈತ ಮೇವು ಸ್ಟಾಕ್ ಮಾಡಿರುವುದೆಲ್ಲಾ ನೀರು ಕೊಚ್ಚಿಕೊಂಡು ಹೋಗಿಬಿಟ್ಟಿದೆ. ಈಗ ಗೋಶಾಲೆಯನ್ನು ತೆರೆದಿದ್ದೇವೆಂದು ಹೇಳಿದ್ದಾರೆ. ಗೋಶಾಲೆಯಲ್ಲಿ ಎಲ್ಲಾ ರೈತರ ದನಗಳನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ಕಡೆ ಮಳೆಯಾಗುತ್ತಿರುವುದರಿಂದ ಇನ್ನು ಒಂದು ತಿಂಗಳಾದ ಮೇಲೆ ಹಸಿರು ಬರುತ್ತದೆ, ಇವತ್ತಿನ ಪರಿಸ್ಥಿತಿಯಲ್ಲಿ ರೈತರ ಜೀವನ ಬಹಳ ಕಷ್ಟದಲ್ಲಿದೆ. 2

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಲಕ್ಷ ಬೆಲೆ ಬಾಳುವ ಎತ್ತುಗಳನ್ನು ಮಾರುವುದಕ್ಕೆ ಹೋದರೆ ಅನಿವಾರ್ಯವಾಗಿ ನೂಲಿ ಸಂತೆಯಲ್ಲಿ 80 ಸಾವಿರ ರೂಪಾಯಿಗಳಿಗೆ ಮಾರುತ್ತಿದ್ದಾರೆ. ದನಗಳನ್ನು ಸಾಕುವುದಕ್ಕೆ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇವತ್ತು ಯಾರೂ ದನಗಳನ್ನು ಕೊಂಡುಕೊಳ್ಳುತ್ತಿಲ್ಲ. ಮೇವು ಇಲ್ಲ, ಇಂತಹ ಪರಿಸ್ಥಿತಿಯಲ್ಲಿ ಕೆಲವು ಸಣ್ಣಸಣ್ಣ ಬೇನೆಗಳು ದನಗಳಿಗೆ ಬರುತ್ತಿವೆ. ರೈತನ ಬದುಕಿಗೆ ಇಷ್ಟು ದೊಡ್ಡದಾದ ನೋವು ಬಂದಾಗ ರೈತರ ಬಗ್ಗೆ ಹೆಚ್ಚು ಕಾಳಜಿಯನ್ನು ಸರ್ಕಾರ ವಹಿಸಬೇಕಾಗುತ್ತದೆ. ಕಾಯ್ದೆ, ಕಾನೂನುಗಳನ್ನು ಸ್ವಲ್ಪ ಸಡಿಲಗೊಳಿಸಿ ಅವರಿಗೆ ಹೆಚ್ಚು ಸಹಕಾರ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಧಾರವಾಡ ಜಿಲ್ಲೆಯಲ್ಲಿ ಅಣ್ಣಾವರ ಎನ್ನುವ ಕಡೆ ಹೊಗಿದ್ದೆವು. ನಾನು practical ಆಗಿ ಆಗಿರುವ ತೊಂದರೆಯನ್ನು ಹೇಳಿಬಿಡುತ್ತೇನೆ. ಅವರ ಮನೆಯಲ್ಲಿ ಮದುವೆ ಇತ್ತು, ಮದುವೆ ಸಲುವಾಗಿ ಬಂಗಾರವನ್ನು ಅವರ ಮನೆಯಲ್ಲಿ ತಂದಿಟ್ಟಿದ್ದರು. ಮನೆ ಸಂಪೂರ್ಣವಾಗಿ ಕುಸಿದು ನೀರಲ್ಲಿ ನಿಂತುಬಿಟ್ಟಿದೆ.

(ಮುಂದು)

196/12-10-2019/12-50/bkp-ak

**ಶ್ರೀ ಬಸವರಾಜ ಎಸ್.ಹೊರಟ್ಟಿ(ಶಿಕ್ಷಕರರ ಕ್ಷೇತ್ರ) (ಮುಂದು. .)**

ಒಂದು ಬಾರಿ ಧಾರವಾಡ ತಾಲ್ಲೂಕಿನ ಅಳ್ಣಾವರ ಗ್ರಾಮಕ್ಕೆ ಹೋಗಿದ್ದೆವು. ನಾನು ಇಲ್ಲಿ ಪ್ರಾಕ್ಟಿಕಲ್ ಆಗಿ ಉಂಟಾಗಿರುವಂತಹ ಒಂದು ತೊಂದರೆ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ. ಒಂದು ಮನೆಯಲ್ಲಿ ಮದುವೆ ಸಮಾರಂಭಕ್ಕಾಗಿ ಬಂಗಾರ ಇತ್ಯಾದಿ ಬೆಲೆ ಬಾಳುವ ಸಾಮಾನುಗಳನ್ನು ತಂದು ಮನೆಯಲ್ಲಿ ಇಟ್ಟಿದ್ದರು. ಆದರೆ, ನೆರೆ ಹಾವಳಿಯಿಂದ ಆ ಮನೆ ಸಂಪೂರ್ಣವಾಗಿ ನೀರಿನಲ್ಲಿ ನಿಂತು ನಾಶವಾಗಿದೆ. ಯಾವ ಒಂದು ವಸ್ತುವೂ ಅವರ ಕೈಗೆ ಸಿಕ್ಕಿರುವುದಿಲ್ಲ. ಬಂಗಾರ ಕಳೆದಿದೆ ಎಂದು ಹೇಳಿ ಬಂಗಾರ ಕಳೆದು ಹೋಗಿರುವುದಕ್ಕೆ ಪರಿಹಾರ ಕೊಡುವುದಕ್ಕೆ ಕಾಯಿದೆಯಲ್ಲಿ ಅವಕಾಶವಿಲ್ಲವೆಂದರು. ಅಂತಹ ಸಮಯದಲ್ಲಿ ಅವರ ಮನೆಯನ್ನು ಕಟ್ಟಿಕೊಳ್ಳಲಿಕ್ಕೆ 5 ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತದೆ ಎಂದು ಹೇಳಲಾಗುತ್ತಿದೆ. ಆ ಹಣದಲ್ಲಿ ಮನೆಯನ್ನು ಕಟ್ಟಿಕೊಳ್ಳಲಿಕ್ಕೆ ಎಷ್ಟು ಸಾಧ್ಯತೆ ಇದೆ ಎಂದು ಯೋಚನೆ ಮಾಡಿ.

ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಎಲ್ಲಾ ಕಡೆ ಏನು ಅಧಿಕಾರಿಗಳು ಭೇಟಿ ನೀಡಿದ್ದಾರೆ, ಅವರೆಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಅವರು ಸಣ್ಣ ಅಧಿಕಾರಿಗಳು ಇರಬಹುದು, ದೊಡ್ಡ ಅಧಿಕಾರಿಗಳು ಇರಬಹುದು ಅವರೆಲ್ಲರೂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಾಮಾಣಿಕವಾಗಿ 99% ರಷ್ಟು ಕೆಲಸ ಮಾಡಿದ್ದಾರೆ. ಈ ಅಧಿಕಾರಿಗಳು ಆ ಒಡವೆಗಳನ್ನು ತಂದು ಇಟ್ಟುಕೊಳ್ಳುವುದು, ಮತ್ತೊಂದು ಕೆಲಸವನ್ನು ಮಾಡುವುದು ಇದ್ಯಾವುದನ್ನು ಸಹ ಅವರು ಮಾಡದೇ ಸರಿಯಾದ ರೀತಿಯಲ್ಲಿ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ಸಂತ್ರಸ್ತರ ಹೆಸರುಗಳನ್ನು ಅಂಕಿ-ಸಂಖ್ಯೆಗಳೊಂದಿಗೆ ತೆಗೆದುಕೊಂಡು ಪ್ರಾಮಾಣಿಕವಾಗಿ ಕೆಲಸಗಳನ್ನು ಮಾಡಿದ್ದಾರೆ. ಏಕೆಂದರೆ, ಪ್ರಾಮಾಣಿಕವಾಗಿ ಕೆಲಸ ಮಾಡಿದಂತಹ ಅಧಿಕಾರಿಗಳನ್ನು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆಂದು ಹೇಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವೂ ಸಹ ಸ್ಪಂದಿಸಿದೆ. ಈ ವಿಚಾರದಲ್ಲಿ ನಾವು ಸಹ ಅವರೊಂದಿಗೆ ಸ್ಪಂದಿಸಬೇಕಾಗಿದೆ. ಈ ವಿಚಾರದಲ್ಲಿ ಈ ನಾಡಿನ ಜನರ ವಿಚಾರ ಬಂದಾಗ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಎಂದು ಹೇಳದೇ ಪ್ರಾಮಾಣಿಕವಾಗಿ ಕೆಲಸ ಮಾಡಿಕೊಂಡು ಬಂದಿದ್ದೇವೆ ಮತ್ತು ಮುಂದೆಯೂ ಮಾಡುತ್ತೇವೆ.

ಮತ್ತೆ, ನಾವು ಹಣಕಾಸಿನ ವಿಚಾರ ಬಂದಾಗ ಖಜಾನೆ ಖಾಲಿಯಾಗಿದೆ, ಖಜಾನೆ ಖಾಲಿಯಾಗಿಲ್ಲವೆಂದು ಮಾತನಾಡುತ್ತೇವೆ. ಜನಪರ ಕೆಲಸಗಳನ್ನು ಮಾಡುವಾಗ ಖಜಾನೆ ಖಾಲಿಯಾದರೆ ಅದು ತಪ್ಪೇನೂ ಆಗುವುದಿಲ್ಲ. ಅದಕ್ಕೆ ಬೇಕಾದರೆ ಸಾಲ ಮಾಡಿ, ಮತ್ತೊಂದು ಮಾಡುವುದರ ಮೂಲಕ ತಂದು ಹೆಚ್ಚು ಹಣವನ್ನು ಪರಿಹಾರವಾಗಿ ಜನರಿಗೆ ತಂದು ಕೊಡಿ. ನಾವು ಖಜಾನೆ ಖಾಲಿಯಾಗಿದೆ ಎಂದು ಹೇಳುತ್ತೇವೆ, ಸರ್ಕಾರದವರು ಖಜಾನೆ ತುಂಬಿದೆ ಎಂದು ಹೇಳುತ್ತಾರೆ. ಈ ರೀತಿಯಲ್ಲಿ ನಾವು ಹೆಚ್ಚು ಮಾತನಾಡುವುದಕ್ಕಿಂತ ಇವತ್ತಿನ ಪರಿಸ್ಥಿತಿಯಲ್ಲಿ ನಾವು ಜನರಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬೇಕೆನ್ನುವುದನ್ನು ನೋಡಬೇಕು. ಈ ಕಾರಣಕ್ಕೋಸ್ಕರ ಸರ್ಕಾರ ಸಾಲ ಮಾಡಿದರೆ ಯಾರೂ ಸಹ ಏನೂ ಅನ್ನುವುದಿಲ್ಲ. ಇಂತಹ ಸಂದರ್ಭದಲ್ಲಿ ಯಾವುದೇ ಸರ್ಕಾರ ಇದ್ದರೂ ಸಹ ಸಾಲವನ್ನು ಮಾಡಲೇಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಹೆಚ್ಚು ಹಣವನ್ನು ರೈತರಿಗೆ, ಬಡ ಕುಟುಂಬದವರಿಗೆ, ಹಳ್ಳಿ ಜನರಿಗೆ ಪರಿಹಾರ ರೂಪದಲ್ಲಿ ಕೊಡಬೇಕು. ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ರವರು ಮತ್ತು ನಾವು ಒಂದೇ ತಾಲ್ಲೂಕಿನವರು. ಮುಧೋಳದಲ್ಲಿ ಏನು ಪರಿಸ್ಥಿತಿಯಾಗಿದೆ ಎಂದು ಅವರನ್ನು ಕೇಳಿದರೆ ಗೊತ್ತಾಗುತ್ತದೆ. ಇವತ್ತು ಯಾವ ಮಟ್ಟದಲ್ಲಿ ನೀರು ಬಂದಿದೆ ಎಂದರೆ ಹಿಂದೆ ನಾವು ಯಾವತ್ತು ಸಹ ಈ ರೀತಿಯಲ್ಲಿ ನೆರೆ ಬಂದಿರುವುದನ್ನು ನೋಡಿರುವುದಿಲ್ಲ. ನಾವುಗಳೇ ಅಲ್ಲ, 100-200 ವರ್ಷಗಳ ನಮ್ಮ ಹಿರಿಯರು ಸಹ ಈ ರೀತಿಯ ಪರಿಸ್ಥಿತಿಯನ್ನು ನೋಡಿರಲಿಲ್ಲ. ಯಾವ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ ಎಂದರೆ, ಸುಮಾರು ಊರುಗಳೇ ಮುಳುಗಿ ಹೋಗಿವೆ. ನಮ್ಮ ಊರಿನಲ್ಲಿರುವ ಶಾಲೆಯಲ್ಲಿ 2000 ಮಂದಿ ವ್ಯಾಸಂಗ ಮಾಡುತ್ತಿದ್ದರು. ಪರಿಶಿಷ್ಟ ಜಾತಿಯವರ ಕೇರಿಗಳು ಸೇರಿದಂತೆ ಎಲ್ಲಾ ಭಾಗದ ಜನರು ಆ ಒಂದು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೆನಪಿಸಿಕೊಳ್ಳಲಿಕ್ಕೆ ಆಗಲಾರದಷ್ಟು ಮಟ್ಟದಲ್ಲಿ ಎಲ್ಲವೂ ಮುಳುಗಿ ಹೋಗಿದೆ. ಹೀಗಾಗಿ, ಸರ್ಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ಸ್ಪಂದಿಸಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. 2009 ರಲ್ಲಿ ಇದಕ್ಕಿಂತ ಸ್ವಲ್ಪ ಕಡಿಮೆ ಮಟ್ಟದಲ್ಲಿ ನೆರೆಹಾವಳಿ ಸಂಭವಿಸಿತ್ತು. ಆ ಸಂದರ್ಭದಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟರು. ಆದರೆ, ಅಲ್ಲಿಗೆ ಒಬ್ಬರೂ ಸಹಿತ ಇಲ್ಲಿಯವರೆಗೂ ಹೋಗಿರುವುದಿಲ್ಲ. ಎಲ್ಲಿ ಎಂದರೆ ನವಲಗುಂದ ತಾಲ್ಲೂಕಿನ ಬಸ್ಸಾಪುರದಲ್ಲಿ ಮನೆಗಳನ್ನು ಕಟ್ಟಿಕೊಟ್ಟರು. ಯಾವ ರೀತಿಯಲ್ಲಿ ಕಟ್ಟಿಕೊಟ್ಟರು ಎಂದರೆ ಏನು ಆಶ್ರಯ ಮನೆಗಳಿರುತ್ತವೆ, ಆ ರೀತಿಯಲ್ಲಿ ಒಂದು ಸಣ್ಣ ಬೆಡ್‌ರೂಮ್, ಒಂದು ಸಣ್ಣ ಕಿಚನ್ ಒಂದು ಸಣ್ಣ ಹಾಲ್ ಕಟ್ಟಿಕೊಟ್ಟರು. 8-10 ದನಗಳು ಇದ್ದಂತಹ ರೈತರಿಗೆ ಆ ಮನೆಗಳು ಸಾಕಾಗಾದೆ ಅಲ್ಲಿಗೆ ಹೋಗಲಿಲ್ಲ. ಅಲ್ಲಿಗೆ ಹೋಗಲಿಲ್ಲವೆಂದರೆ, ಈ ಬಾರಿ ಮತ್ತೆ ಆ ಗ್ರಾಮ ಮುಳುಗಿತು. ಕಳೆದ ಬಾರಿ 70% ರಷ್ಟು ಮುಳುಗಿತ್ತು. ಈ ಬಾರಿ ಆ ಗ್ರಾಮ 100% ಮುಳುಗಿ ಹೋಗಿದೆ. ಅಲ್ಲಿ ನಿಮಗೆ ಒಂದು ಮನೆಯೂ ಸಹಿತ ಸಿಗುವುದಿಲ್ಲ. ನಮ್ಮ ಮುಧೋಳ ತಾಲ್ಲೂಕಿನಲ್ಲಿ ಯಾವಾಗಲೂ ಸಹ ಇದೇ ಪರಿಸ್ಥಿತಿ ಉಂಟಾಗುತ್ತಿರುತ್ತದೆ.

ಈ ಹಿನ್ನೆಲೆಯಲ್ಲಿ ನನ್ನ ಸಲಹೆ ಏನೆಂದರೆ ಈ ವಿಚಾರದಲ್ಲಿ ನೀವು identify ಮಾಡಿ. ಇದು ದೊಡ್ಡ ಪ್ರವಾಹವಾಗಿದೆ. ಇನ್ನು 100 ವರ್ಷ ಕಳೆದರೂ ಸಹ ಈ ರೀತಿಯ ಪ್ರವಾಹ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಎಲ್ಲಿ ಯಾವ ಪ್ರದೇಶ ಮುಳುಗಿಲ್ಲ, ಆ ಪ್ರದೇಶವನ್ನು ಗುರುತು ಮಾಡಿ ಅಲ್ಲಿ ಮನೆಗಳನ್ನು ಕಟ್ಟಿಸಿಕೊಡಿ. ಮೊದಲು ನರಗುಂದ ತಾಲ್ಲೂಕಿನಲ್ಲಿ ಇದೇ ಪರಿಸ್ಥಿತಿ ಆಗಿತ್ತು. ಸೂಕ್ತ ಜಾಗವನ್ನು ನೋಡಿ ಮನೆ ಕಟ್ಟಿಕೊಡಬೇಕು. ಈಗ ಏನು ಮನೆಗಳು ಮುಳುಗಿವೆ, ಅವುಗಳಲ್ಲಿ ಯಾವ ಒಂದು ಮನೆಯನ್ನು ಸಹ ಉಳಿಸಬಾರದು. ಇವುಗಳನ್ನೆಲ್ಲಾ demolish ಮಾಡಬೇಕು. ಏಕೆಂದರೆ, ಇವರುಗಳು ಮತ್ತೆ ಅಲ್ಲಿಗೆ ಹೋಗಿ ವಾಸ ಮಾಡುತ್ತಾರೆ. ಅಲ್ಲಿಯೇ ಇದ್ದರೆ, ಮತ್ತೆ ಅಲ್ಲಿ ಪ್ರವಾಹ ಬರುತ್ತದೆ, ಮತ್ತೆ ಇದೇ ಸಮಸ್ಯೆ ಉಂಟಾಗುತ್ತದೆ. ಮತ್ತೆ ದನಕರುಗಳು, ಮನುಷ್ಯರು ಸಾಯುತ್ತಾರೆ. ಮತ್ತೆ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ, ಮನೆಗಳನ್ನು ಕಟ್ಟುವಾಗ ಸೂಕ್ತ ಜಾಗವನ್ನು ನೋಡಿ ಕಟ್ಟಬೇಕೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ನನ್ನ ಒಟ್ಟಾರೆ ಅಭಿಪ್ರಾಯ ಏನೆಂದರೆ ಈ ವಿಚಾರವಾಗಿ ನಾವುಗಳು ಸದನದಲ್ಲಿ ಎಷ್ಟೋ ಬಾರಿ ಮಾತನಾಡಿರುತ್ತೇವೆ. ಮಳೆಯಾಗುವುದಿಲ್ಲ, ಗಿಡಗಳನ್ನು ಹಾಕಬೇಕು, ಗಿಡಗಳನ್ನು ಕಡಿಯಬಾರದು ಎಂದು ಹೇಳಿ ಎಷ್ಟೋ ಬಾರಿ ಹೋರಾಟ ಮಾಡುತ್ತೇವೆ. ಪ್ರಕೃತಿ ಮನಸ್ಸು ಮಾಡಿದರೆ ಏನೆಲ್ಲಾ ಆಗುತ್ತದೆ ಎನ್ನುವುದಕ್ಕೆ ಇದೇ ಉದಾಹರಣೆ. ನಿನ್ನೆ ಒಬ್ಬರು ಇದೇ ರೀತಿಯಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಿದ್ದರು. ಪ್ರವಾಹ ಮತ್ತು ಜನಶಕ್ತಿಯನ್ನು ಯಾರೂ ತಡೆಯಲಿಕ್ಕೆ ಆಗುವುದಿಲ್ಲ. ಬೆಂಕಿ ಹತ್ತಿಕೊಂಡರೆ ಆರಿಸಬಹುದು. ಪ್ರವಾಹ ಬಂದರೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಆ ಹಿನ್ನೆಲೆಯಲ್ಲಿ ನಾನು ಇವತ್ತು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ವಿಚಾರದಲ್ಲಿ ನಾವು ಮತ್ತು ನೀವುಗಳು ಎಲ್ಲರೂ ಭಾಗಿಯಾಗಿ, ಜನರ ಈ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ನಾವುಗಳೆಲ್ಲರೂ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಇನ್ನು ಹೆಚ್ಚಿನ ಮಟ್ಟದಲ್ಲಿ ಮುತುವರ್ಜಿವಹಿಸಿ ಸಾಧ್ಯವಾದ ಮಟ್ಟಿಗೆ ಅವರೆಲ್ಲರಿಗೂ ಅನುಕೂಲ ಮಾಡಬೇಕು. ಮಾನ್ಯ ಸಭಾಪತಿಯವರೇ, ಕಳೆದು ಹೋಗಿರುವಂತಹ ನಮ್ಮದೇ ಹೊಲ ಇನ್ನು ನಮ್ಮ ಕೈಗೆ ಸಿಕ್ಕಿರುವುದಿಲ್ಲ. ನಮ್ಮದು ಎಂಟೂವರೆ ಎಕರೆ ಜಮೀನಿನಲ್ಲಿ ಕಬ್ಬು ಇತ್ತು. ಆ ಜಮೀನು ನಮಗೆ ಇನ್ನೂ ಪತ್ತೆಯಾಗಿಲ್ಲ. ಎಲ್ಲವೂ ಮುಳುಗಿ ಹೋಗಿದೆ. ನಮ್ಮದೇ ಅಲ್ಲ, ಎಷ್ಟೋ ಜನರದ್ದು ಅಂದರೆ ಹೆಚ್ಚು ಕಡಿಮೆ ನಮ್ಮ ನವಲಗುಂದ ತಾಲ್ಲೂಕು ಪೂರ್ಣ ಮುಳುಗಿದೆ. ಇಂಗಳಹಳ್ಳಿ ಎನ್ನುವ ಊರು ಮಹಂತಪ್ಪ ಎನ್ನುವವರು ಹುಟ್ಟಿದ ಊರು. ಅಲ್ಲಿ ಅವರೊಬ್ಬರದ್ದೇ ಸುಮಾರು 20 ಎಕರೆ ಜಮೀನು ಸಂಪೂರ್ಣವಾಗಿ ಮುಳುಗಿ ಹೋಗಿದೆ. ಅದರಲ್ಲಿ ಹತ್ತಿ, ಗೋಧಿ, ಇತ್ಯಾದಿ ಬೆಳೆ ಇತ್ತು. ಅದು ನೀರು ತುಂಬಿಕೊಂಡು ಕೊಳೆತು ಹೋಗಿದೆ, ಯಾವುದೂ ಉಳಿದಿಲ್ಲ. ಮುಂಬರುವ ದಿನಗಳಲ್ಲಿ ಕಾಳು-ಕಡಿಗಳಿಗೆ ತುಂಬಾ ಸಮಸ್ಯೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಕೂಡಿಕೊಂಡು ಈ ಒಂದು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್‌ರವರು ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು. ಸಾಕಷ್ಟು ಜನರು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಸರ್ಕಾರಕ್ಕೆ ನನ್ನ ವಿನಂತಿ ಏನೆಂದರೆ, 2005 ರಲ್ಲಿ ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್.ನ ಗೈಡ್‌ಲೈನ್ಸ್ ಆಗಿದೆ. ಇವತ್ತು 2019 ರಲ್ಲಿ ಇದ್ದೇವೆ. ಇವತ್ತು ನಾವು ಯಾವುದೇ ಜಮೀನು ಆಗಲಿ, ಕಟ್ಟಡಗಳನ್ನಾಗಲಿ, ನೋಂದಣಿ ಮಾಡಲಿಕ್ಕೆ ಹೋಗುತ್ತೇವೆ. ಇದಕ್ಕೆ ಪ್ರತಿ ವರ್ಷ ಸರ್ಕಾರದವರು 5%, 6% ಹೆಚ್ಚು ಮಾಡುತ್ತಾ ಹೋಗುತ್ತಾರೆ. ಮತ್ತೆ P.W.D. rates ಸಹ ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಿದೆ. ಈ ವಿಚಾರದಲ್ಲಿ ಕೆಳಮನೆ ಮತ್ತು ಮೇಲ್ಮನೆಯವರು ಸೇರಿ ಒಂದು ನಿರ್ಣಯ ಮಾಡಿ, ಇದನ್ನು ಕೇಂದ್ರಕ್ಕೆ ಕಳುಹಿಸಬೇಕು. ಹೇಗಿದ್ದರೂ ಕೇಂದ್ರದಲ್ಲಿ ನಮ್ಮ ರಾಜ್ಯದಿಂದ ಬಿಜೆಪಿಯ 25 ಮಂದಿ ಲೋಕಸಭಾ ಸದಸ್ಯರಿದ್ದಾರೆ. ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್ ಅಡಿಯಲ್ಲಿ ನೀಡುವ ಮೊತ್ತವನ್ನು revise ಮಾಡಿಸಬಹುದಾಗಿದೆ.

**ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೇ, ಎನ್.ಡಿ.ಆರ್.ಎಫ್ ರೂಲ್ಸ್ ಪ್ರಕಾರ ಇದು ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂತಹದ್ದಾಗಿದೆ. ಮತ್ತೆ ಇದು ಆಗಿದ್ದು 2005 ರಲ್ಲಿ ಮಾನ್ಯ ಸದಸ್ಯರು ಹೇಳಿದರು. 2005 ಆದ ಮೇಲೆಯೂ ಸಹ ಸಾಕಷ್ಟು ಹೆಚ್ಚಳ ಮಾಡಿಕೊಂಡು ಬಂದಿದ್ದಾರೆ. ಇಷ್ಟಾದರೂ ಕೂಡ ಇವತ್ತಿನ ಎನ್.ಡಿ.ಆರ್.ಎಫ್ ರೂಲ್ಸ್ ಪ್ರಕಾರ ಅದು ಬಹಳ ಕಡಿಮೆಯೇ ಇದೆ. ನಾವು ಇದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ಮಾನ್ಯ ಸದಸ್ಯರು 2005 ಎಂದು ಏನು ಹೇಳಿದರು ಅದರ ರೆಕಾರ್ಡ್ಸ್ ಸರಿಯಿಲ್ಲ.

(ಗೊಂದಲ)

ನಾನು ಕಂದಾಯ ಮಂತ್ರಿ ಇದ್ದಾಗ ಈ ದರವನ್ನು ಹೆಚ್ಚು ಮಾಡಿ ಎಂದು ಹೇಳಿ ರಾಜ್ಯದ ವತಿಯಿಂದ ಪ್ರಸ್ತಾವನೆಯನ್ನು ಕಳುಹಿಸಿದ್ದೆವು. ಆ ಸಂದರ್ಭದಲ್ಲಿ ಯುಪಿಎ ಸರ್ಕಾರ ಅಸ್ತಿತ್ವದಲ್ಲಿತ್ತು. ಆದಾದ ಮೇಲೆ ಹೆಚ್ಚಳವಾಗಿದೆ. ಆದರೆ, ಇವತ್ತಿನ ಪರಿಸ್ಥಿತಿಗೆ ಅದು ಸಾಲುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಅವೈಜ್ಞಾನಿಕವಾಗಿ ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್ ನಾರ್ಮ್ಸ್ ಇಟ್ಟರೆ ಯಾವ ಕೆಲಸಕ್ಕೂ ಬರುವುದಿಲ್ಲ.

(ಗೊಂದಲ)

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಇದು 2015 ರಲ್ಲಿಯೇ ಹೆಚ್ಚಳವಾಗಿದ್ದು, ಅದನ್ನು 2020 ರವರೆಗೂ ನಿಗದಿ ಮಾಡಿದ್ದಾರೆ. 2020 ಆದಮೇಲೆಯೇ ಹೆಚ್ಚಳವಾಗುತ್ತದೆ. ಅಲ್ಲಿಯವರೆಗೂ ಆಗುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಏನು ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಎನ್.ಡಿ.ಆರ್.ಎಫ್ ಬಗ್ಗೆ ಹೇಳಿದರು. ನಾನು ಕಾನೂನು ಒಪ್ಪುತ್ತೇನೆ. ಇಡೀ ದೇಶಕ್ಕೆ ಆಗಲಾರದಂತಹ ಪರಿಸ್ಥಿತಿ ಕರ್ನಾಟಕದಲ್ಲಿ ಆಗಿದೆ. ಮತ್ತೆ, ಬಿಹಾರ ರಾಜ್ಯದಲ್ಲಿಯೂ ಆಗಿದೆ. ಹೀಗಾಗಿ, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿ. Extraordinary circumstance ಎಂದು ಇದಕ್ಕೆ ಏನಾದರೊಂದು ವ್ಯವಸ್ಥೆಯನ್ನು ಮಾಡಬೇಕಲ್ಲವೇ? ಈ ನಿಟ್ಟಿನಲ್ಲಿ ಒಂದು ಕಾಯಿದೆಯನ್ನು ಮಾಡಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ಈ ವಿಚಾರದಲ್ಲಿ ನನ್ನ ಒಂದು ಸಲಹೆ ಇದೆ. ಈ ವಿಚಾರವಾಗಿ ದಯಮಾಡಿ ನಮ್ಮ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ. ಈ ವಿಚಾರವಾಗಿ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಎಲ್ಲಾ ಅಂಶಗಳನ್ನು ಕ್ರೋಢಿಕರಿಸಿಕೊಂಡು ವರದಿಯನ್ನು ತಯಾರು ಮಾಡಿಕೊಂಡು ನಾವೆಲ್ಲರೂ ಪ್ರಧಾನ ಮಂತ್ರಿಗಳ ಹತ್ತಿರ ಹೋಗೋಣ. ಈ ವಿಚಾರದಲ್ಲಿ ನೀವು ಏತಕ್ಕೆ ಹೆದರುತ್ತೀರಿ? ನಾವು ಅಲ್ಲಿಗೆ ಹೋದಾಗ, ಪ್ರಧಾನಮಂತ್ರಿಗಳು ಸಿಗುವುದಿಲ್ಲವೆಂದು ಹೇಳಿ ಏತಕ್ಕೆ ಬಯ್ಯಿಸಿಕೊಳ್ಳುತ್ತೀರಿ. ಈ ವಿಚಾರವಾಗಿ ನಾವು ಕೇಂದ್ರಕ್ಕೆ ನಿಯೋಗ ಹೋಗಲು ಒಂದು appointment ತೆಗೆದುಕೊಳ್ಳಿ. ಅಲ್ಲಿಗೆ ಹೋಗುವುದರ ಮೂಲಕ ಮಾನ್ಯ ಪ್ರಧಾನ ಮಂತ್ರಿಗಳಿಗೆ ರಾಜ್ಯದಲ್ಲಿನ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡೋಣ.

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀಮಾನ್ ಜಗದೀಶ್ ಶೆಟ್ಟರ್ ರವರು ಈ ವಿಚಾರವಾಗಿ ಉತ್ತರ ಹೇಳಿದ್ದನ್ನು ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಗಮನಿಸಬೇಕು. ಎನ್.ಡಿ.ಆರ್.ಎಫ್.ನ ಮಾರ್ಗ ಸೂಚಿಗಳು ಏನಿವೆ, ಅವುಗಳನ್ನು ಪ್ರತಿ 5 ವರ್ಷಕ್ಕೊಮ್ಮೆ change ಮಾಡುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಆ ಒಂದು ಕೆಲಸ ಆಗಿಲ್ಲ.

**ಶ್ರೀ ಆರ್.ಅಶೋಕ:-** ಆ ಒಂದು ಕೆಲಸ 2015 ರಲ್ಲಿ ಆಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಎಷ್ಟು ಹೆಚ್ಚು ಮಾಡಬೇಕಾಗಿತ್ತು ಆ ಪ್ರಮಾಣದಲ್ಲಿ ಹೆಚ್ಚು ಮಾಡಿರುವುದಿಲ್ಲ. ಕನಿಷ್ಠ ಮಟ್ಟದಲ್ಲಿ ಹೆಚ್ಚು ಮಾಡಿಕೊಂಡು ಹೋಗುತ್ತಿದ್ದಾರೆ. ಅಷ್ಟು ಹಣ ಯಾವುದಕ್ಕೂ ಸಾಕಾಗುವುದಿಲ್ಲ. 10 ಲಕ್ಷ ರೂಪಾಯಿಗಳಿದ್ದುದು, 35 ಲಕ್ಷ ರೂಪಾಯಿಗಳು ಚಿಕ್ಕಮಗಳೂರಿನಲ್ಲಿ ಆಗಿದೆ. ಆದರೆ, ಎನ್.ಡಿ.ಆರ್.ಎಫ್.ನಲ್ಲಿ ಹೆಚ್ಚಳವಾಗಿಲ್ಲ. ಅಲ್ಪಸ್ವಲ್ಪ ಆಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ಇದು ಕಡಿಮೆ ಇದ್ದು, ಇದನ್ನು raise ಮಾಡಬೇಕೆಂದು ಹೇಳಿ, ರಾಜ್ಯ ಸರ್ಕಾರದ ವತಿಯಿಂದ ಪತ್ರವನ್ನೂ ಸಹ ಬರೆಯಲಾಗಿದೆ. ಐದು ವರ್ಷಕ್ಕೊಮ್ಮೆ ಅದು review ಆಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಕಡೇ ಪಕ್ಷ ಎಸ್.ಡಿ.ಆರ್.ಎಫ್ ಅಡಿಯಲ್ಲಿ ನೀಡುವ ಪರಿಹಾರ ಮೊತ್ತವನ್ನಾದರೂ revise ಮಾಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್ ಬಗ್ಗೆ ಏನು ಹೇಳಿದರು, ಅವರು ಆ ಕೆಲಸವನ್ನು ಮಾಡುತ್ತಾರೆ. ಈ ಒಂದು ಪರಿಸ್ಥಿತಿ ನಮ್ಮ ರಾಜ್ಯಕ್ಕೆ extraordinary circumstance ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ. ಈ ಪರಿಸ್ಥಿಯನ್ನು ನಿಭಾಯಿಸಲಿಕ್ಕೆ ಕೇಂದ್ರಕ್ಕೆ ನಿಯೋಗವನ್ನು ತೆಗೆದುಕೊಂಡು ಹೋಗಿ. ಹಿಂದೆ ಕೆಲವೊಂದು ವಿಚಾರಗಳ ನಿಮಿತ್ತ ಕೇಂದ್ರಕ್ಕೆ ಹಲವಾರು ಬಾರಿ ನಿಯೋಗ ಹೋಗಿದ್ದೇವೆ.

ಮುಂದು. . .

**(197) 12.10.2019 01.00 ಎಸ್‌ವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುವುದೇನೆಂದರೆ ಎಲ್ಲಿಯವರೆವಿಗೆ ಸರ್ಕಾರ ಕೇಂದ್ರದವರೆಗೆ ನಿಯೋಗವನ್ನು ಕೊಂಡೊಯ್ಯುವುದಿಲ್ಲವೋ ಅಲ್ಲಿಯವರೆವಿಗೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ನಿಯೋಗವನ್ನು ತೆಗೆದುಕೊಂಡು ಹೋಗಲೇ ಬೇಕಾಗುತ್ತದೆ, ಹೆಚ್ಚಿಗೆ ಹಣವನ್ನು ತರಬೇಕಾಗುತ್ತದೆ. ಇಲ್ಲವಾದಲ್ಲಿ ನಾಡಿನ ಜನರ ಪರಿಸ್ಥಿತಿ ಇನ್ನೂ ಬಹಳ ಗಂಭೀರವಾಗುತ್ತದೆ. ಕೇಳುವುದನ್ನು ಕೇಳೋಣ. ಕಡೆಗೆ ಅವರ ಬಳಿ ನಮ್ಮನ್ನಾದರೂ ಬಿಡುತ್ತಾರೆಯೋ ಇಲ್ಲವೋ? ನಾವು ಹೋಗಿದ್ದಕ್ಕೆ ಕನಿಷ್ಟ ಪಕ್ಷ ಸ್ವಲ್ಪವನ್ನಾದರೂ ಕೊಡುವ ಬುದ್ಧಿಯನ್ನು ದೇವರು ಅವರಿಗೆ ಕೊಡಬಹುದು. ಈ ಹಿನ್ನೆಲೆಯಲ್ಲಿ ತಕ್ಷಣವೇ ಸರ್ಕಾರ ಮಾನ್ಯ ಪ್ರಧಾನಿಯವರನ್ನು, ಮಾನ್ಯ ಗೃಹ ಮಂತ್ರಿಗಳನ್ನು ಹಾಗೂ ಸಂಬಂಧಪಟ್ಟವರ ಸಚಿವರನ್ನು ಭೇಟಿಯಾಗುವುದಕ್ಕಾಗಿ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಬೇಕೆಂದು ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಕ್ಕೆ ವಿನಂತಿಸುತ್ತೇನೆ. ಇದರಿಂದ ನೆರೆ ಸಂತ್ರಸ್ತರಿಗೆ ಎಷ್ಟು ಸಹಾಯವಾಗುತ್ತದೆಯೋ ಆಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಉಂಟಾದ...

**ಶ್ರೀ ಲೆಹರ್ ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶವೇ ದೊರೆತಿಲ್ಲ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ನೀಡುತ್ತೇನೆ. ಮಧ್ಯದಲ್ಲಿ ಸ್ಪಷ್ಟೀಕರಣವನ್ನು ಕೇಳಲಿ. ಅಲ್ಲವೆ?

**ಶ್ರೀ ಲೆಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನನಗೆ ಕೇವಲ ಮೂರು ನಿಮಿಷ ಕಾಲಾವಕಾಶವನ್ನು ಕೊಡಿ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಲೆಹರ್ ಸಿಂಗ್ ಅವರು ಮಾತನಾಡುವುದೇ ಕಷ್ಟ. ಅವರಿಗೂ ಅವಕಾಶವನ್ನು ಕೊಡಿ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಲೆಹರ್ ಸಿಂಗ್ ಅವರು ದೆಹಲಿಗೆ ಹೋಗಿಬರಲಿ. ಅಷ್ಟೇ ಸಾಕು.

**ಶ್ರೀ ಲೆಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರಿಗೆ ವಿಶೇಷವಾದ ಧನ್ಯವಾದಗಳು. ಪ್ರವಾಹದ ಬಗ್ಗೆ ನಿನ್ನೆಯಿಂದ ಬೇಕಾದಷ್ಟು ಚರ್ಚೆ ನಡೆದಿದ್ದು, ಅದರ ಯಾವುದರ ಬಗ್ಗೆಯೂ ನಾನು ಪ್ರಸ್ತಾಪ ಮಾಡುವುದಿಲ್ಲ. ಎಲ್ಲರೂ ಬೆಂಗಳೂರಿನಲ್ಲಿ ನೆರೆ ಇಲ್ಲವೆಂದು ಭಾವಿಸಿದ್ದಾರೆ. ನಾನು ಮಾತನಾಡಬೇಕೆಂದುಕೊಂಡಾಗ "ಬೆಂಗಳೂರಿನಲ್ಲಿ ಪ್ರವಾಹವೇ ಇಲ್ಲ, ಏನು ಮಾತನಾಡುತ್ತೀರಿ" ಎಂದು ಹೇಳಿದರು. ಮೊನ್ನೆ ರಾತ್ರಿ 03.00 ಗಂಟೆ ಸಮಯದಲ್ಲಿ ಬೆಂಗಳೂರಿನ ಕೆರೆಯೊಂದು breach ಆಗಿ ಸುಮಾರು 300 ಕುಟುಂಬಗಳು ಬೀದಿಪಾಲಾಗಿವೆ. ಇದರ ಬಗ್ಗೆ ನಿನ್ನೆ ಪತ್ರಿಕೆಯಲ್ಲೆಲ್ಲಾ ಬಂದಿದ್ದು, ಎಲ್ಲರಿಗೂ ತಿಳಿದಿದೆ. ಕಳೆದ 15 ವರ್ಷಗಳಿಂದ ಬೆಂಗಳೂರಿಗೆ ನಾಲ್ಕೈದು ಜನರು ಯಜಮಾನರಾಗಿದ್ದಾರೆ. ಅವರಲ್ಲಿ ನಮ್ಮ 'ಸಾಮ್ರಾಟ ಅಶೋಕ್' ಅವರೂ ಸೇರಿದ್ದಾರೆ. ಕೆರೆ ಒತ್ತುವರಿಯ ಬಗ್ಗೆ ನಾವು ಹೆಚ್ಚಿನ ಗಮನವನ್ನು ಕೊಡದಿದ್ದಲ್ಲಿ, ಕೊಡಗು ಜಿಲ್ಲೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ಉತ್ತರ ಕರ್ನಾಟಕದಲ್ಲಿ ಆದಂತೆ ಬೆಂಗಳೂರಿನಲ್ಲಿಯೂ ಪರಿಸ್ಥಿತಿ ಹಾಳಾಗುತ್ತದೆ. ನಾನು 50 ವರ್ಷದ ಮುಂಚೆ ಬೆಂಗಳೂರಿಗೆ ಬಂದಾಗ there was no flood or drought situations. ಏನೂ ಸಮಸ್ಯೆಯಿರಲಿಲ್ಲ. ಈಗ ನೋಡಿದರೆ ತಗ್ಗುಪ್ರದೇಶದಲ್ಲಿ ನೀರು ನುಗ್ಗಿ ಮನೆಗಳೆಲ್ಲಾ ಜಲಾವೃತವಾಗುತ್ತಿವೆ.

ಎರಡನೆಯದಾಗಿ ನಿನ್ನೆ ಮಾನ್ಯ ಮನಮೋಹನಸಿಂಗ್ ಅವರು ಏನು ಮಾಡಿದರು, ಮಾನ್ಯ ನರೇಂದ್ರ ಮೋದಿ ಏನು ಮಾಡುತ್ತಿಲ್ಲ ಎನ್ನುವ ಮಾತು ಬಂದಿತು. ಮಾನ್ಯ ಮನಮೋಹನಸಿಂಗ್ ಅವರ ಕಾಳಜಿ ಮತ್ತು ಕಳಕಳಿಯ ಬಗ್ಗೆ ನಮಗೂ ಗೌರವವಿದೆ. ಮಾನ್ಯ ಐವನ್ ಡಿ'ಸೋಜ ಅವರು ನನ್ನ ಸ್ನೇಹಿತರು ಹಾಗೂ ಅವರ ಬಗ್ಗೆ ನನಗೆ ಗೌರವವಿದೆ. ಮಾನ್ಯ ಡಿ'ಸೋಜ ಅವರು ಮಾತನಾಡುತ್ತಾ ಮಾನ್ಯ ಮೋದಿಯವರು jolly trip ಗೆ ಹೋಗಿದ್ದಾರೆಂದು ಹೇಳಿದರು. ನಾನು ಆರು ಕೋಟಿ ಜನರ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಸಿದ್ದರಾಮಯ್ಯ ಹಾಗೂ ಮಾನ್ಯ ಕುಮಾರಸ್ವಾಮಿಯವರಿಗೆ ಗೌರವವನ್ನು ಕೊಟ್ಟು ಮಾತನಾಡಿದ್ದೇನೆ. ಆ ರೀತಿಯಾಗಿ ಲಘುವಾಗಿ ಎಂದೂ ಮಾತನಾಡಿಲ್ಲ. ಯಾರು ಏನೇ ಹೇಳಿದರೂ ದೇಶದ 130 ಕೋಟಿ ಜನ ಮಾನ್ಯ ನರೇಂದ್ರ ಮೋದಿಯವರ ಜೊತೆಗಿದ್ದಾರೆ. ಹೀಗಾಗಿ ಈ ರೀತಿಯಾಗಿ ಲಘುವಾಗಿ ಮಾತನಾಡುವುದರಿಂದ ಅವರ ಮಾತಿನ ತೂಕ ಕಡಿಮೆಯಾಗುತ್ತದೆಯೆಂದು ಮಾನ್ಯ ಐವನ್ ಡಿ'ಸೋಜ ಅವರಿಗೆ ಮನವಿ ಮಾಡುತ್ತೇನೆ.

ಈ ದೇಶದಲ್ಲಿ ಕೆಲವೊಮ್ಮೆ ಅರ್ಧ ಭಾಗದಲ್ಲಿ ನೆರೆಯಿರುತ್ತದೆ, ಅರ್ಧ ಭಾಗದಲ್ಲಿ ಬರ ಇರುತ್ತದೆ. ಕರ್ನಾಟಕದಲ್ಲಿಯೂ ಅದೇ ಪರಿಸ್ಥಿತಿ. ಒಂದು ವರ್ಷ ಪ್ರವಾಹ ಜಾಸ್ತಿ, ಒಂದು ವರ್ಷ ಬರ ಜಾಸ್ತಿ ಇರುತ್ತದೆ. ಇದರ ಬಗ್ಗೆ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಎನ್.ಡಿ.ಎ ಸರ್ಕಾರವಿದ್ದಾಗ 'Linking of Rivers' ಯೋಜನೆಯನ್ನು ಮಾಡಿದರು. ಅವರು 14 Himalayan and 16 Peninsular rivers ಅನ್ನು ಜೋಡಿಸುವುದಕ್ಕೆ ಒಂದು ಯೋಜನೆಯನ್ನು ಮಾಡಿದರು. Thirty canals and 3000 reservoirs ಅನ್ನು ಇದರಡಿಯಲ್ಲಿ ಸಿದ್ಧಪಡಿಸಲಾಗಿತ್ತು. The mission of this programme was to ensure greater equity in the distribution of water by enhancing the availability of water in draught prone and rainfed area. The project was expected to provide relief to the monsoon floods that affect much of India and reduce the farmers dependence on fickle monsoon rains.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Diverting water from bounteous rivers such as the Ganges, Godavari and Mahanadi to sparse waterways by building a clutch of dams and a network of canals is the only solution to flood and droughts. The overall implementation of Interlinking of Rivers programme under National Perspective Plan would give benefits of 35 million hectares of irrigation, raising the ultimate irrigation potential from 140 million hectare to 175 million hectares in the country. ನಿನ್ನೆ ನಾವು ಒಂದು ಲಕ್ಷ, ಎರಡು ಲಕ್ಷ ಎಂದೆಲ್ಲಾ ಮಾತನಾಡುತ್ತಿದ್ದೆವು. 35 ಮಿಲಿಯನ್ ಹೆಕ್ಟೇರ್ಸ್ ಅಂದರೆ, 8 ಕೋಟಿ 70 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿಯಾಗುತ್ತಿತ್ತು. It could have enhanced the twenty-five percent of the total agricultural area of our country. ಈಗ ನಾವು 140 million hectare cultivate ಮಾಡುತ್ತೇವೆ. River linking scheme ಆಗಿಬಿಟ್ಟಿದ್ದರೆ 175 million hectares ಆಗುತ್ತಿತ್ತು. ಅದೇ ರೀತಿ 34,000 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿತ್ತು. Sri Vajpayeeji had formed a task force on interlinking of rivers under the chairmanship of Shri Suresh Prabhu. The blueprint of interlinking of rivers was prepared. However, the project could not take off as several states were not on board. After years of bureaucratic delays, Rs.5.55 lakh crore schemes are finally set to take off under Prime Minister Shri Narendra Modi government. Rs.5.55 lakh crore was earmarked for this. A Task Force for Interlinking of Rivers has been constituted by the government on April 13, 2015 under Union Minister Shri Nitin Gadkari ji. The national river linking project will ease the water shortages in western and southern India while mitigating the impacts of recurrent floods in eastern India. As Shri Gadkari ji has said, Linking the Godavari and Cauvery rivers will be the top priority for the NDA government

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

and the water resources ministry has already prepared a Detailed Project Report (DPR) with an estimated cost of Rs.40,000 crore. Therefore, I urge Chief Minister Yediyurappaji and this Government to coordinate with the Central Government for this ambitious project which will render immense benefit to Karnataka. ಧನ್ಯವಾದಗಳು ಸರ್.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಸುಮಾರು ನಲವತ್ತಕ್ಕೂ ಹೆಚ್ಚು ಜನ ವಿರೋಧ ಪಕ್ಷದ ಹಾಗೂ ಆಡಳಿತ ಪಕ್ಷದ ಸದಸ್ಯರು ಈ ಪ್ರವಾಹದ ಸಂದರ್ಭದಲ್ಲಿ ಸರ್ಕಾರ ಏನು ಮಾಡಬೇಕಾಗಿತ್ತು? ಸರ್ಕಾರ ಎಲ್ಲಿ ಒಳ್ಳೆಯ ಕೆಲಸ ಮಾಡಿದೆ? ಸರ್ಕಾರ ಎಲ್ಲಿ ತಪ್ಪು ಮಾಡಿದೆ? ಇವೆಲ್ಲವನ್ನೂ ಕೂಡ ಸರ್ಕಾರಕ್ಕೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಸಲಹೆ ಕೊಟ್ಟಿರುವ ಎಲ್ಲಾ ಸದಸ್ಯರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಟೀಕೆ ಮಾಡಿದವರನ್ನು ಹಾಗೂ ಬೆನ್ನು ತಟ್ಟಿದವರನ್ನು ಸಮನಾಗಿ ಸ್ವೀಕರಿಸುತ್ತೇನೆ.

ತಮಗೆಲ್ಲಾ ತಿಳಿದಿರುವಂತೆ ಬಹಳಷ್ಟು ಜನ ಸದಸ್ಯರು ಗ್ರಾಮೀಣ ಪ್ರದೇಶದಿಂದ ಮತ್ತು ಪ್ರವಾಹ ಉಂಟಾಗಿರುವ ಪ್ರದೇಶದಿಂದ ಬಂದವರಾಗಿದ್ದಾರೆ. ನಮ್ಮಲ್ಲಿ "ದೀಪ ಹಚ್ಚಿದರೆ ಮನೆಯೆಲ್ಲಾ ಬೆಳಕಾಗುವುದು. ಧರೆಯೇ ಹತ್ತಿ ಉರಿದರೆ ಬದುಕಲೆಲ್ಲಿ ಹೋಗುವೆ" ಎನ್ನುವ ಒಂದು ಕವಿ ವಾಣಿ ಇದೆ. ನಾನು ಪ್ರವಾಹ ಪ್ರದೇಶಕ್ಕೆ ಸುಮ್ಮನೆ ಭೇಟಿ ನೀಡಿ ಪತ್ರಿಕಾಗೋಷ್ಠಿಯನ್ನು ನಡೆಸಿ ಹೋಗಿಲ್ಲ. ಹೋದಾಗ ಒಂದೊಂದು ಜಾಗದಲ್ಲಿಯೂ ನಾಲ್ಕೈದು ಗಂಟೆ ಅಲ್ಲಿಯೇ ಕುಳಿತು ಸಂತ್ರಸ್ತರ ಜೊತೆ ಸುಮಾರು ಎರಡು ಮೂರು ಗಂಟೆಗಳ ಕಾಲ ಮಾತನಾಡಿದ್ದೇನೆ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಭಾಗಕ್ಕೆ ಹೋದಾಗ ಅಲ್ಲಿ ಹೇಳಿದರು, ಒಬ್ಬ ತಾಯಿ ತನ್ನ ಮಗುವಿನೊಂದಿಗೆ ಮೂರು ದಿನಗಳ ಕಾಲ ಕಾಡಿನಲ್ಲಿಯೇ ಇದ್ದಾರೆ. ಪ್ರವಾಹ ಬಂದು ಎಲ್ಲಿಗೆ ಹೋಗಬೇಕೆಂದು ತಿಳಿಯದೆ ಕಾಡಿಗೆ ಹೋಗಿಬಿಟ್ಟಿದ್ದರು. ಕಾಡಿನಲ್ಲಿ ಪ್ರಾಣಿಗಳ ಕಾಟದಿಂದ ಮರ ಹತ್ತಿ ಕುಳಿತಿದ್ದರು. ಮೂರು ದಿನ ಊಟ ಇಲ್ಲದೆ ಕಾಡಿನಲ್ಲಿದ್ದ ಅವರನ್ನು ಪೊಲೀಸರು ರಕ್ಷಣೆ ಮಾಡಿ ಕರೆದುಕೊಂಡು ಬಂದರು. ಈ ರೀತಿಯಾದ ಹಲವು ಪರಿಸ್ಥಿತಿಗಳನ್ನು ಮಾನ್ಯ ಸದಸ್ಯರೆಲ್ಲರೂ ಬಹಳ ವಿಸ್ತೃತವಾಗಿ ಹೇಳಿದ್ದಾರೆ.

**(...ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಸಭಾಪತಿಯವರ ಉಪಸ್ಥಿತಿ)

(198 ) 12.10.2019 KG.RN 1.10

**ಶ್ರೀ ಆರ್.ಅಶೋಕ (ಮುಂದು.,):-** 2019ರ ಮಾರ್ಚ್ ನಿಂದ ಜೂನ್ ಮತ್ತು ಜುಲೈವರೆಗೂ ನಮ್ಮ ಇಡೀ ರಾಜ್ಯದಲ್ಲಿ ಒಂದು ರೀತಿಯ ಬರಗಾಲ ಇತ್ತು. 19 ಜಿಲ್ಲೆಗಳಲ್ಲಿ ಬರದ ಛಾಯೆ ಆಗಲೇ ಮೂಡಿತ್ತು.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠದಿಂದ ನಿರ್ಗಮಿಸಿದರು ಹಾಗೂ ವೈಸ್ ಚೇರ್ಮನ್‌ರವರಾದ ಶ್ರೀ ಕೆ.ಸಿ.ಕೊಂಡಯ್ಯನವರು ಪೀಠದಲ್ಲಿ ಉಪಸ್ಥಿತರಾದರು)

ಮಾನ್ಯ ಸಭಾಪತಿಯವರೇ, ಆಗ ಜಲಾಶಯಗಳಲ್ಲಿ ನೀರಿನ ಮಟ್ಟ 43% ಮಾತ್ರ ಇತ್ತು. ಏಕಾಏಕಿ ಆಗಸ್ಟ್ 3 ರಿಂದ 10ನೇ ತಾರೀಖಿನವರೆಗೆ ಬಿದ್ದಂತಹ ಧಾರಾಕಾರವಾದ ಮಳೆ ಕಳೆದ 118 ವರ್ಷಗಳ ಇತಿಹಾಸದಲ್ಲೇ ಕೇವಲ ಏಳು ದಿವಸಗಳಲ್ಲಿಯೇ ನಮ್ಮ ರಾಜ್ಯದ ಎಲ್ಲಾ ಜಲಾಶಯಗಳು ತುಂಬಿದ ಇತಿಹಾಸ ಇಲ್ಲ. ಕರ್ನಾಟಕದ ಎಲ್ಲಾ ಜಲಾಶಯಗಳು ತುಂಬಿವೆ. ಅದಕ್ಕೆ ನಿನ್ನೆ ದಿವಸ ವಿಧಾಸೌಧದಲ್ಲಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಅಧಿಕಾರಕ್ಕೆ ಬಂದಾಗಲೆಲ್ಲಾ ಜಲಾಶಯಗಳು ತುಂಬುತ್ತವೆ, ಈ ರೀತಿ 2009ನೇ ಸಾಲಿನಲ್ಲಿ ಆಗಿತ್ತು, ಈಗಲೂ ಜಲಾಶಯಗಳು ತುಂಬಿವೆ ಎಂದು ಹೇಳಿದರು. ಈಗ ನಮಗೆ 224 ಮಿಲಿಮೀಟರ್ ಮಳೆಯಾಗಿದ್ದು, ಇದನ್ನು ವಾಡಿಕೆಗೆ ಹೋಲಿಸಿದಾಗ ಅಂಕಿ-ಅಂಶಗಳ ಪ್ರಕಾರ 279% ಅಧಿಕ ಮಳೆಯಾಗಿದೆ. ಇದರ ಜೊತೆಗೆ 'ಹಳ್ಳಕ್ಕೆ ಬಿದ್ದಾಗ ಕಲ್ಲು ಹಾಕುತ್ತಾರೆ' ಎನ್ನುವ ಮಾತನ್ನು ಸಾಮಾನ್ಯವಾಗಿ ಹೇಳುತ್ತಾರೆ. ಒಂದು ಕಡೆ ನಮಗೆ ಅಧಿಕ ಪ್ರಮಾಣದಲ್ಲಿ ಮಳೆ ಬಂತು. ಎರಡನೆಯದಾಗಿ, ನಮಗೆ ಮಹಾರಾಷ್ಟ್ರದಿಂದ ಕೃಷ್ಣಾ ಮತ್ತು ಭೀಮ ನದಿಗಳಿಂದ ನೀರು ಬಂತು. ಆ ನೀರು ಈ ಪ್ರವಾಹದ ಸ್ಥಿತಿಯನ್ನು 2 ರಿಂದ 3 ಪಟ್ಟು ಹೆಚ್ಚಿಗೆ ಮಾಡಿತು. ಆಗಲೇ ಬಹಳಷ್ಟು ಜನರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದರು. ದಾಖಲೆ ಪ್ರಮಾಣದಲ್ಲಿ ಆರು ಲಕ್ಷ cusecs ನೀರು ಆಲಮಟ್ಟಿ ಜಲಾಶಯಕ್ಕೆ ಬಂತು. ಮೂರು ಲಕ್ಷ cusecs ನೀರು ಭೀಮ ನದಿ ಹರಿದು ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರದೇಶವನ್ನು ಆವರಿಸಿತು. ಈಗಾಗಲೇ ಒಟ್ಟು 22 ಜಿಲ್ಲೆಗಳು, 103 ತಾಲ್ಲೂಕ್‌ಗಳು ಮತ್ತು 2,798 ಹಳ್ಳಿಗಳನ್ನು ರಾಜ್ಯ ಸರ್ಕಾರ ಪ್ರವಾಹ ಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದೆ.

ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ ಬೆಳೆ ಹಾನಿಯಾಗಿದೆ ಎಂಬುದರ ಬಗ್ಗೆ ಹೇಳುತ್ತೇನೆ. 7,54,191 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಹಾನಿಯಾಗಿದೆ. 1,09,492 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಹಾನಿಯಾಗಿದೆ. 1,06,425 ಹೆಕ್ಟೇರ್ ಪ್ರದೇಶದಲ್ಲಿ ಕಾಫಿ ಬೆಳೆ ಹಾನಿಯಾಗಿದೆ. 244.48 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆ ಹಾನಿಯಾಗಿದೆ. 3,400 ಜಾನುವಾರುಗಳು ಸತ್ತಿರುತ್ತವೆ. ಮನೆಗಳಿಗೆ ನೀರು ನುಗ್ಗಿರುವುದು ಮತ್ತು ಹಾನಿಯಾಗಿರುವಂತಹ ಸಂಖ್ಯೆ.,

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸರ್ಕಾರ ಅದನ್ನು 'ಎ,ಬಿ ಮತ್ತು ಸಿ' ಕ್ಯಾಟಗರಿ ಎಂದು ಮಾಡಿದೆ. ನಮಗೆ ಯಾವ ಯಾವ ಕ್ಯಾಟಗರಿಯಲ್ಲಿ ಎಷ್ಟು ಎಂದು ಅಂಕಿ-ಸಂಖ್ಯೆಗಳನ್ನು ಹೇಳಿದರೆ ನಮಗೆ ಅದು clarity ಆಗುತ್ತದೆ.

**ಶ್ರೀ ಆರ್.ಅಶೋಕ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನನಗೆ ಇದರಲ್ಲಿ ಅರ್ಧ ಭಾಗವನ್ನು ಹೇಳುವುದಕ್ಕೆ ಅವಕಾಶ ಕೊಟ್ಟರೆ, ನಂತರ ಅವರ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ. ನಾನು ಇನ್ನೂ highlights ಮಾತ್ರ ಹೇಳುತ್ತಿದ್ದೇನೆ. ಪುನಃ ವಿವರವಾಗಿ ಹೇಳುತ್ತೇನೆ. ಮನೆಗಳಿಗೆ ನೀರು ನುಗ್ಗಿರುವಂತಹ ಮತ್ತು ಹಾನಿಯಾಗಿರುವಂತಹ ಮನೆಗಳ ಸಂಖ್ಯೆ 2,47,625. ಈಗಾಗಲೇ 'ಕಾಳಜಿ ಕೇಂದ್ರ' ಗಳನ್ನು ಮಾಡಿದ್ದೇವೆ. ನಾನು ಈ ಹಿಂದೆ ಪ್ರವಾಹದ ಸಂದರ್ಭದಲ್ಲಿ ಅಲ್ಲಿಗೆ ಹೋದಾಗ ಅಲ್ಲಿ ಎಲ್ಲಾ ಕಡೆ 'ಗಂಜಿ ಕೇಂದ್ರ'ಕ್ಕೆ ದಾರಿ, 'ಗಂಜಿ ಕೇಂದ್ರ'ಕ್ಕೆ ದಾರಿ ಎಂಬ ನಾಮ ಫಲಕಗಳನ್ನು ಹಾಕಿದ್ದರು. ನಾನು ಮತ್ತು ಮಾನ್ಯ ಸಚಿವರಾದ ಶ್ರೀ ಸುರೇಶ್‌ಕುಮಾರ್‌ರವರು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಮಾನ್ಯ ಸುರೇಶ್‌ಕುಮಾರ್‌ರವರು ಈ 'ಗಂಜಿ ಕೇಂದ್ರ' ಎಂದು ಹೇಳುವುದೇ ತಪ್ಪು, ಅದಕ್ಕೆ ನಾವೇ ಒಂದು ರೀತಿಯಲ್ಲಿ ಅವಮಾನ ಮಾಡಿದ ರೀತಿಯಾಗುತ್ತದೆ. ಅದಕ್ಕೆ ಆ ಹೆಸರನ್ನು ಬದಲಾವಣೆ ಮಾಡಬಹುದಲ್ಲವೇ ಎಂದು ಹೇಳಿದರು. ಆಗ ಅದರ ಬಗ್ಗೆ ಯೋಚನೆ ಮಾಡಿ ಸರ್ಕಾರದ ಆದೇಶವನ್ನು ಸಹ ಹೊರಡಿಸಿದ್ದೇವೆ. ಇನ್ನು ಮುಂದೆ ಯಾರು ಸಹ ಅದನ್ನು ಗಂಜಿ ಕೇಂದ್ರ ಎಂದು ಕರೆಯಬಾರದು ಮತ್ತು ಗಂಜಿ ಕೇಂದ್ರ ಎಂದು ನಾಮಫಲಕವನ್ನು ಹಾಕಬಾರದೆಂದು ತೀರ್ಮಾನವನ್ನು ಸಹ ಮಾಡಿದ್ದೇವೆ. ಇದು ಸರ್ಕಾರದ ಕರ್ತವ್ಯವಾಗಿದ್ದು ಅವರ ಬಗ್ಗೆ ಸರ್ಕಾರ ಕಾಳಜಿ ವಹಿಸುವುದರಿಂದ ಅದನ್ನು 'ಕಾಳಜಿ ಕೇಂದ್ರ' ಎಂದು ಪರಿವರ್ತನೆ ಮಾಡಬೇಕೆಂದು ಆದೇಶವನ್ನು ಹೊರಡಿಸಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, 237 ಗೋ-ಶಾಲೆಗಳನ್ನು ಮಾಡಿದ್ದೇವೆ. ಅದರಲ್ಲಿ ಸುಮಾರು 65,611 ಹಸು ಮತ್ತು ಎಮ್ಮೆ ಇತರ ಪ್ರಾಣಿಗಳನ್ನು ರಕ್ಷಣೆ ಮಾಡಲಾಗಿತ್ತು. 1,465 ಕಾಳಜಿ ಕೇಂದ್ರಗಳನ್ನು ಮಾಡಿದ್ದೇವೆ. ಈಗ ಅವುಗಳ ಸಂಖ್ಯೆ ಕಡಿಮೆಯಾಗಿದೆ. ಒಟ್ಟು 21,818 ಕಿಲೋಮೀಟರ್‌ಗಳಷ್ಟು ರಸ್ತೆ ಹಾನಿಯಾಗಿದೆ. 4,119 ಕಿಲೋಮೀಟರ್‌ಗಳಷ್ಟು ರಾಜ್ಯ ಮತ್ತು ಜಿಲ್ಲಾ ಹೆದ್ದಾರಿ ಹಾನಿಯಾಗಿದೆ. 14,991 ಕಿಲೋಮೀಟರ್‌ಗಳಷ್ಟು ಗ್ರಾಮೀಣ ರಸ್ತೆ ಹಾನಿಯಾಗಿದೆ. 2,778 ಕಿಲೋಮೀಟರ್‌ನಷ್ಟು ನಗರ ಪ್ರದೇಶದ ರಸ್ತೆಗಳು ಹಾನಿಯಾಗಿದೆ. 2,913 ಸೇತುವೆಗಳಿಗೆ ಹಾನಿಯಾಗಿದೆ. 1,550 ಕೆರೆಗಳಿಗೆ ಹಾನಿಯಾಗಿದೆ. 11,063 ಸರ್ಕಾರಿ ಕಟ್ಟಡಗಳಿಗೆ ಹಾನಿಯಾಗಿದೆ. ಇಷ್ಟು ಹಾನಿಯಾಗಿರುವಂತಹ ವರದಿ.

ಮಾನ್ಯ ಸಭಾಪತಿಯವರೇ, ನಾನು highlights ಮಾತ್ರ ಹೇಳಿದ್ದೇನೆ. ಮತ್ತೊಮ್ಮೆ ವಿವರವಾಗಿ ಹೇಳುತ್ತೇನೆ. ಸಾಮಾನ್ಯವಾಗಿ ಮಾಧ್ಯಮಗಳು, ವಿರೋಧ ಪಕ್ಷದವರು, ಬೇರೆ ಬೇರೆ ಸಂಘ ಸಂಸ್ಥೆಗಳು ರಾಜ್ಯ ಸರ್ಕಾರ ಏನು ಮಾಡಿದೆ? ರಾಜ್ಯ ಸರ್ಕಾರ ಸರಿಯಾಗಿ ಸ್ಪಂದನೆ ಮಾಡಿಲ್ಲ ಎಂದು ಈ ತರಹದ comments ಬಂದಿವೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ರಾಜ್ಯ ಸರ್ಕಾರ ಇಷ್ಟೊಂದು ಪ್ರವಾಹ ಬಂದಂತಹ ಸಂದರ್ಭದಲ್ಲಿ rescue ಮಾಡುವಂತಹ ಕೆಲಸವನ್ನು ಸಮರ್ಥವಾಗಿ ಮಾಡಬೇಕೆಂದು ಮೊದಲ ಬಾರಿಗೆ ದೊಡ್ಡ ರೀತಿಯಾದಂತಹ ತಂಡಗಳನ್ನು ರಚನೆ ಮಾಡಿ ಮಾಡಿದ್ದೇವೆ. ನಮ್ಮ ರಾಜ್ಯ ಸರ್ಕಾರದ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ 43 ತಂಡಗಳು ಇದರಲ್ಲಿ ಕೆಲಸ ಮಾಡಿವೆ. SDRF, Civil Defence and KSRP ತಂಡಗಳು ಸಹ ಈ ಎಲ್ಲಾ ಏರಿಯಾದಲ್ಲಿ ಕೆಲಸ ಮಾಡಿವೆ. ಕೇಂದ್ರ ಸರ್ಕಾರದಿಂದ 19 NDRF ತಂಡಗಳು ರಾಜ್ಯಕ್ಕೆ ಬಂದಿವೆ. ನಾವು ವಾಯುಪಡೆಯ ನಾಲ್ಕು Helicopter ಗಳನ್ನು ಬಳಸಿದ್ದೇವೆ, ಅದರ ಜೊತೆಗೆ ರಕ್ಷಣಾ ತಂಡವು ಸಹ ನಮ್ಮ ಜೊತೆಗೆ ಕೆಲಸ ಮಾಡಿದೆ. ಭೂ-ಸೇನೆ ಮತ್ತು ನೌಕಪಡೆಯ 17 ತುಕಡಿಗಳು ಸಹ ಬಂದಿವೆ. ಇಷ್ಟೆಲ್ಲ ತಂಡಗಳು ಬಂದಿದ್ದರಿಂದ, ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ rescue ಮಾಡಿದ್ದೇವೆ. ಇದರಿಂದ ಏಳು ಲಕ್ಷ ಜನರನ್ನು ಸುರಕ್ಷಿತ ಜಾಗಕ್ಕೆ ಸೇರಿಸುವಂತಹ ಕಾರ್ಯದಲ್ಲಿ ಈ ತಂಡಗಳು ಕೆಲಸ ಮಾಡಿವೆ. ಇದನ್ನು ನಾವೆಲ್ಲರೂ ನೋಡಿದ್ದೇವೆ. ಇದರ ಬಗ್ಗೆ ಮಾಧ್ಯಮದಲ್ಲಿ ವರದಿ ಬಂದಿದೆ. NDRF ತಂಡದವರು ನಮ್ಮ ರಾಜ್ಯವನ್ನು ಬಿಟ್ಟು ಹೋಗಬೇಕಾದರೆ ಅವರಿಗೆ ಗೌರವ ಸಲ್ಲಿಸಿ, ನಮ್ಮನ್ನು ಬದುಕಿಸಿದ್ದೀರಿ ಎಂದು ಹೇಳಿರುವಂತಹ ಮಾತುಗಳು ಸಹ ಕೇಳಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, 13,993 Transformers ಗಳಿಗೆ ಹಾನಿಯಾಗಿವೆ. 59,598 ವಿದ್ಯುತ್ ಕಂಬಗಳಿಗೆ ಹಾನಿಯಾಗಿವೆ. 3,619 ಕಿಲೋಮೀಟರ್‌ಗಳಷ್ಟು ವಿದ್ಯುತ್ ತಂತಿಗೆ ಹಾನಿಯಾಗಿವೆ. ಜನರನ್ನು ರಕ್ಷಣೆ ಮಾಡುವಂತಹ ದೃಷ್ಟಿಯಿಂದ ಸರ್ಕಾರ ಇದನ್ನು ಸಮರ್ಥವಾಗಿ ನಿಭಾಯಿಸುವ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದೆ. ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ಬಸವರಾಜ ಹೊರಟ್ಟಿಯವರು ಮಾತನಾಡುವಂತಹ ಸಂದರ್ಭದಲ್ಲಿ ಇದರಲ್ಲಿ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಎನ್ನುವ ಹಾಗಿಲ್ಲ, ಈ ಬಾರಿ ಅಧಿಕಾರಿಗಳು 95% ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ಹೇಳಿದ್ದಾರೆ.

(ಮುಂದು.,)

(199)12-10-2019(1-20)ಎಂವಿ-ವಿಕೆ

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು) (ಮುಂದು...):-**

ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ನಾನು ಮೈಸೂರು ಜಿಲ್ಲೆಗೆ ಹೋದಾಗ ಅಲ್ಲಿ ಸುಮಾರು 50 ಮನೆಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದವು. ಆ ಸ್ಥಳಕ್ಕೆ ನಾನು ಮತ್ತು ಜಿಲ್ಲಾಧಿಕಾರಿ ಹೋಗಿ ಅಲ್ಲಿನ ಸಂತ್ರಸ್ತರ ಜೊತೆ ಸುಮಾರು ಎರಡು ಗಂಟೆ ಕುಳಿತುಕೊಂಡು ಜನರಿಗೆ ಏನು ಮಾಡಬೇಕು ಮತ್ತು ಅಲ್ಲಿ ಏನು ಸಮಸ್ಯೆ ಇದೆ ಎಂದು ಕೇಳಿದಾಗ. ಅಲ್ಲಿಂದತಹ ಸಂತ್ರಸ್ತರು ದನದ ಕೊಟ್ಟಿಗೆಯನ್ನು ತೋರಿಸಿದರು ಮತ್ತು ಅಧಿಕಾರಿಗಳು ಕೊಟ್ಟಿಗೆಗೆ ಪರಿಹಾರ ನೀಡುತ್ತಿಲ್ಲವೆಂದು ಹೇಳಿದರು. ಆಗ ನಾನು ದನದ ಕೊಟ್ಟಿಗೆಗೆ ಏನಾದರೂ ಹಾನಿಯಾಗಿದ್ದರೆ ಅದಕ್ಕೂ ಸಹ ಪರಿಹಾರ ನೀಡಬೇಕೆಂದು ಹೇಳಿದ್ದೇನೆ. ಆ ಸಂದರ್ಭದಲ್ಲಿ ಒಬ್ಬ ತಾಯಿ ಮತ್ತು ಮಗಳು ನನ್ನ ಬಳಿ ಬಂದು ಮಾತನಾಡಬೇಕಾದರೆ ನನಗೆ ಈ ರೀತಿ ಹೇಳಿದರು. ನೀವು ಈಗ ಬಂದಿದ್ದೀರಿ. ಆದರೆ, ಮೂರು ದಿನದಿಂದ ಒಬ್ಬ ಸಬ್‌ಇನ್‌ಸ್ಪೆಕ್ಟರ್ ಒಂದೇ ಡ್ರೆಸ್‌ನಲ್ಲಿ ಅವರು ತಮ್ಮ ಮನೆಗೂ ಸಹ ಹೋಗದೆ ಮತ್ತು ಅವರು ತಮ್ಮ ಹೆಂಡತಿ ಮತ್ತು ಮಕ್ಕಳನ್ನು ಸಹ ನೋಡದೆ ನಮ್ಮ ಜೊತೆಯಲ್ಲೇ ಇದ್ದರು ಎಂದು ಹೇಳುತ್ತಾ. ಆ ಸಬ್‌ಇನ್‌ಸ್ಪೆಕ್ಟರ್ ಇವರಿಗೆ ಈ ರೀತಿ ಹೇಳಿದರಂತೆ; ಕೊನೆ ಮನುಷ್ಯ ಇಲ್ಲಿಂದ ಹೊರಗಡೆ ಹೋದಮೇಲೆ ನಾನು ಹೋಗುತ್ತೇನೆಂದು ಹೇಳಿದರಂತೆ. ಅಲ್ಲಿನ ಜನರು ಎಷ್ಟೇ ಬಲವಂತ ಮಾಡಿ, ಇನ್ನು ಹೆಚ್ಚು ನೀರು ನುಗ್ಗುತ್ತಿದೆ ಹೋಗಿ ಎಂದು ಹೇಳಿದರೂ ಕೂಡ ಆ ಸಬ್‌ಇನ್‌ಸ್ಪೆಕ್ಟರ್ ಹಠ ಹಿಡಿದು ಅಲ್ಲೇ ಇದ್ದು ಕೊನೆಯ ಮನುಷ್ಯನನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಕ್ಷಿಸಿದ ಮೇಲೆ ಅವರು ಅಲ್ಲಿಂದ ವಾಪಸ್ಸು ಬಂದಿದ್ದಾರೆ. ನನಗೆ ಇದುವರೆವಿಗೂ ಆ ಸಬ್‌ಇನ್‌ಸ್ಪೆಕ್ಟರ್‌ನ ಹೆಸರು ಗೊತ್ತಿಲ್ಲ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆ ಸಬ್‌ಇನ್‌ಸ್ಪೆಕ್ಟರ್‌ಗೆ ಪ್ರಶಸ್ತಿ ನೀಡುವಂತೆ ಶಿಫಾರಸ್ಸು ಮಾಡಲಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಆಯಿತು ಶಿಫಾರಸ್ಸು ಮಾಡುತ್ತೇನೆ. ನಾನು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಆ ಸಬ್‌ಇನ್‌ಸ್ಪೆಕ್ಟರ್‌ನ ಹೆಸರು ಮತ್ತು ಅವರು ಯಾವ ಸ್ಟೇಷನ್ ಎಂದು ಮಾಹಿತಿ ನೀಡುವಂತೆ ತಿಳಿಸಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಅಧಿಕಾರಿಗಳು ಹೆಚ್ಚು ಕೆಲಸ ಮಾಡಿದ್ದಾರೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಉತ್ತರ ಕರ್ನಾಟಕ, ಮಲೆನಾಡು ಕರ್ನಾಟಕ ಮತ್ತು ಹಳೆ ಮೈಸೂರು ಎಂದು ಇಲ್ಲ. ನಾನು ಮೈಸೂರು ಜಿಲ್ಲೆಯಲ್ಲಿ review meeting ಮಾಡುತ್ತಿದ್ದೆ. Review ಮಾಡಬೇಕಾದರೆ ಅಲ್ಲಿನ ಜಿಲ್ಲಾಧಿಕಾರಿಗಳು ವರ್ಗಾವಣೆಯಾಗಿದ್ದಾರೆಂದು ಆದೇಶ ಬಂತು. ನಮಗೆ ಯಾವ್ಯಾವ ಪತ್ರ ಎಲ್ಲೆಲ್ಲಿಗೆ ಹೋಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಸರ್ಕಾರ ನಡೆಸಿರುವಂತಹ ವಿರೋಧ ಪಕ್ಷದವರಿಗೂ ಸಹ ಗೊತ್ತಿದೆ. ಅಲ್ಲಿರುವಂತಹ ಜನರು ಒಟ್ಟಿಗೆ ಬಂದು ಜಿಲ್ಲಾಧಿಕಾರಿಗಳು ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ನೀವು ಅವರನ್ನು ಏಕೆ ವರ್ಗಾವಣೆ ಮಾಡುತ್ತೀರಾ ಎಂದು ಕೇಳಿದರು. ಅವರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ಎನ್ನುವಂತಹ ಒಂದೇ ಒಂದು ಕಾರಣಕ್ಕೆ, ನಾನು ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳ ಬಳಿ ಮಾತನಾಡಿ ಅವರ ವರ್ಗಾವಣೆಯನ್ನು ರದ್ದುಪಡಿಸಿದೆ. ಆಗ ಅಲ್ಲಿ ಮಾನ್ಯ ಸಂದೇಶ್ ನಾಗರಾಜ್‌ರವರು ಸಹ ಇದ್ದರು. ಸಾಮಾನ್ಯವಾಗಿ ಅಧಿಕಾರಿಗಳಿಗೆ ಯಾರು ಸಹ ಸಹಾಯ ಮಾಡುವುದಿಲ್ಲ. ಈಗ ಜಿಲ್ಲಾಧಿಕಾರಿಗಳು ಅಲ್ಲೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಭೆಯಲ್ಲಿದ್ದಂತಹ ಎಲ್ಲಾ ಪಕ್ಷದವರು ಅಂದರೆ, ಕಾಂಗ್ರೆಸ್ ಮತ್ತು ಜನತಾದಳದವರು ಜಿಲ್ಲಾಧಿಕಾರಿಗಳು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಅವರ ವರ್ಗಾವಣೆ ಮಾಡಿರುವುದು ತಪ್ಪು ಎಂದು ಹೇಳಿದರು. ಆದುದರಿಂದ ಜಿಲ್ಲಾಧಿಕಾರಿಯವರನ್ನು ಐದು ನಿಮಿಷದಲ್ಲಿ retain ಮಾಡಿಸಿದೆ. ಅಧಿಕಾರಿಗಳು ಕೂಡ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಈಗಾಗಲೇ ಕಾಳಜಿ ಕೇಂದ್ರಗಳ ಬಗ್ಗೆ ಹೇಳಿದ್ದೇನೆ. ಪ್ರಾರಂಭದಲ್ಲಿ ಕಾಳಜಿ ಕೇಂದ್ರಗಳಲ್ಲಿ ಒಟ್ಟು 4,60,750/- ಜನರು ಇದ್ದರು. ನಾನು ಆ ಕಾಳಜಿ ಕೇಂದ್ರಕ್ಕೆ ಹೋಗಿ ಊಟ ಮಾಡಿದ್ದೇನೆ. ನಾನು ಅಲ್ಲಿಗೆ ಭೇಟಿ ನೀಡಿದಾಗ ಪಾಯಸ ಮಾಡಿದ್ದರು. ಅದಕ್ಕೆ ನಾನು ಜಿಲ್ಲಾಧಿಕಾರಿಗಳಿಗೆ ಕೇಳಿದೆ ನಾನು ಬರುತ್ತಿದ್ದೇನೆಂದು ಪಾಯಸ ಮಾಡಿದ್ದೀರಾ ಎಂದು. ಅದಕ್ಕೆ ಜಿಲ್ಲಾಧಿಕಾರಿಗಳು ಹೇಳಿದರು, ವಾರದಲ್ಲಿ ಮೂರು ದಿನ ಪಾಯಸ ಕೊಡುತ್ತೇವೆ ಹಾಗೂ ಬೇರೆ ಬೇರೆ ರೀತಿಯ ಪಲ್ಯ ಮತ್ತು ರೊಟ್ಟಿಗಳನ್ನು ಕೊಡುತ್ತೇವೆಂದು ಹೇಳಿದರು. ಈಗ ತಾವು ಬಂದಿದ್ದೀರಾ ಎಂದು ಪಾಯಸ ಮಾಡಿಲ್ಲವೆಂದು ತಿಳಿಸಿದರು. ಅದಕ್ಕೆ ನಾನು ಇದೇ ರೀತಿಯ ಗುಣಮಟ್ಟದ ಆಹಾರವನ್ನು ಎಲ್ಲಾ ಕಡೆ ನೀಡಬೇಕೆಂದು ತಿಳಿಸಿದ್ದೇನೆ. ಕೆಲವು ಕಡೆ ಅಕ್ಕಿಗೆ ಹುಳು ಬಿದ್ದಿದೆ ಎಂದು ಪತ್ರಿಕೆಯಲ್ಲಿ ಕಾಮೆಂಟ್ ಬಂದಿತ್ತು. ಆಗ ನಾನು ತಕ್ಷಣ ಅಲ್ಲಿನ ಜಿಲ್ಲಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ, ಯಾವುದೇ ಕಾರಣಕ್ಕೂ ಸಹ ಕಳಪೆ ಆಹಾರ ಪದಾರ್ಥಗಳನ್ನು ಎಲ್ಲಿಯೂ ಕೂಡ ಕೊಡಬಾರದು ಎಂದು ತಿಳಿಸಿದ್ದೇನೆ. ಅದೇ ರೀತಿ ಪ್ರತಿಯೊಂದು ಕಾಳಜಿ ಕೇಂದ್ರದಲ್ಲೂ ಕೂಡ ವೈದ್ಯರ ವ್ಯವಸ್ಥೆಯನ್ನು ಮಾಡಿದ್ದೇವೆ. ನಾನು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದಾಗ ಅದನ್ನು ಪರಿಶೀಲನೆ ಮಾಡಿದ್ದೇನೆ. ಈಗ ಎಲ್ಲೆಲ್ಲಿ ಪ್ರವಾಹ ಬಂದಿದೆ ಅಲ್ಲಿ ಸುಮಾರು 4415 ವೈದ್ಯಕೀಯ ಆರೋಗ್ಯ ಶಿಬಿರಗಳನ್ನು ಮಾಡಿದ್ದೇವೆ. ಅದೇರೀತಿ ಸುಮಾರು 10326 ಆರೋಗ್ಯ ಸಿಬ್ಬಂದಿಗಳು ಅಲ್ಲೇ ಇದು ಮೇಲ್ವಿಚಾರಣೆ ಮಾಡಿ ಕೆಲಸ ಮಾಡಿದ್ದಾರೆ. ಸುಮಾರು ಏಳು ಲಕ್ಷ ಜನರನ್ನು ಸ್ಥಳಾಂತರ ಮಾಡಿ ಸಂತ್ರಸ್ತರನ್ನು ರಕ್ಷಣೆ ಮಾಡಿದರೂ ಸಹ ನಮ್ಮದೇ ಸಹೋದರರು ಸುಮಾರು 91 ಜನ ಈ ಸಂದರ್ಭದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಅದರಲ್ಲಿ ನಾಲ್ಕು ಜನರ ಶವಗಳು ಇನ್ನು ದೊರೆತ್ತಿಲ್ಲ. ಮಡಿಕೇರಿ ಭಾಗಕ್ಕೆ ಬೆಂಗಳೂರಿನಿಂದ ನಾಲ್ಕು ಹಿಟಾಚಿಗಳನ್ನು ತೆಗೆದುಕೊಂಡು ಹೋಗಿ 20 ರಿಂದ 30 ದಿವಸ ಆಗಿದರೂ ಸಹ ಇನ್ನೂ ನಾಲ್ಕು ಜನರ ಮೃತ ದೇಹಗಳು ದೊರೆತಿಲ್ಲ. ಆದುದರಿಂದ ನಾಪತ್ತೆ ಎನ್ನುವಂತಹ ಪ್ರಕರಣವನ್ನು ದಾಖಲು ಮಾಡಿ ಅವರ ಕುಟುಂಬದವರಿಗೂ ಕೂಡ ಪರಿಹಾರ ಕೊಡುವಂತಹ ವ್ಯವಸ್ಥೆಯನ್ನು ಮಾಡಿ ಈಗಾಗಲೇ ಪರಿಹಾರವನ್ನು ಸಹ ನೀಡಿದ್ದೇವೆ. ಇದರ ಜೊತೆಗೆ ಎಲ್ಲಾ ಪ್ರದೇಶಗಳಿಗೆ ಆಹಾರ ಇಲಾಖೆಯಿಂದ 2,69,900 ಆಹಾರದ ವಿಶೇಷ ಕಿಟ್‌ಗಳನ್ನು ನೀಡಿದ್ದೇವೆ. ಈಗ ಎಲ್ಲವನ್ನು ಕಳೆದುಕೊಂಡು ಬಂದಿರುವಂತಹವರಿಗೆ ಆಹಾರ ಭದ್ರತೆಗಾಗಿ ಹತ್ತು ಕೆ.ಜಿ ಅಕ್ಕಿ, ಒಂದು ಲೀಟರ್ ಎಣ್ಣೆ, ಒಂದು ಕೆ.ಜಿ ಉಪ್ಪು, ಒಂದು ಕೆ.ಜಿ ತೊಗರಿಬೇಳೆ, ಒಂದು ಕೆ.ಜಿ ಸಕ್ಕರೆ ಮತ್ತು ಐದು ಲೀಟರ್ ಸೀಮೆಎಣ್ಣೆಯನ್ನು ನೀಡಿದ್ದೇವೆ. ಭಾದಿತರಾಗಿರುವವರಿಗೆ ಸರ್ಕಾರದಿಂದ ಇಷ್ಟನ್ನು ನೀಡಿದ್ದೇವೆ. ಬೇರೆ ಬೇರೆ ಜನರು ಕೂಡ voluntary ಆಗಿ ನೀಡಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಾನುವಾರುಗಳು ಸತ್ತಿದ್ದರೆ ಅದಕ್ಕೂ ಸಹ ಸುಮಾರು 30,000/- ರೂಪಾಯಿಗಳವರೆಗೆ ಪರಿಹಾರ ಕೊಡುವುದಕ್ಕೆ ಅವಕಾಶವಿದೆ ಅದರಂತೆ ಪರಿಹಾರವನ್ನು ಕೊಟ್ಟಿದ್ದೇವೆ. NDRF (National Disaster Response Fund) norms ಪ್ರಕಾರ ಕುರಿ, ಎಮ್ಮೆ ಮತ್ತು ಹಸು ಈ ರೀತಿಯ ಅದರಲ್ಲಿ ವ್ಯತ್ಯಾಸವಿದೆ. ಇದುವರೆವಿಗೂ ನಾವು ಸುಮಾರು 617 ಲಕ್ಷ ರೂಪಾಯಿಗಳನ್ನು ನೀಡಿದ್ದೇವೆ. ಅದೇರೀತಿ NDRF norms ಪ್ರಕಾರ 3,800/- ಕೊಡುವುದಕ್ಕೆ ಅವಕಾಶವಿದೆ. ಆದರೆ ಸರ್ಕಾರ ಅದಕ್ಕೆ 6,200/- ರೂಪಾಯಿಗಳನ್ನು ಸೇರಿಸಿ ಒಟ್ಟು 10,000/- ರೂಪಾಯಿಗಳನ್ನು ನೀಡಿದ್ದೇವೆ. ನಾನು ಕೆಲವು ಕಡೆಗಳಿಗೆ ಭೇಟಿ ನೀಡಿದಾಗ ಸಂತ್ರಸ್ತರಿಗೆ ಚೆಕ್‌ಗಳನ್ನು ನೀಡುತ್ತಿದ್ದರು. ಅದಕ್ಕೆ ನಾನು ಹೇಳಿದ್ದೇನೆ ಚೆಕ್‌ಗಳನ್ನು ನೀಡಬಾರದು ಎಲ್ಲವೂ ಸಹ RTGS ಮುಖಾಂತರ ಕೊಡಬೇಕು ಎಂದು ಆದೇಶ ಕೊಟ್ಟಿದ್ದೇನೆ. RTGS ಮುಖಾಂತರ ಒಟ್ಟು 2.03 ಲಕ್ಷ ಕುಟುಂಬಗಳಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ ಹಾಗೂ ಸುಮಾರು 200 ಕೋಟಿ ರೂಪಾಯಿಗಳನ್ನು ವಿತರಣೆ ಮಾಡಿದ್ದೇವೆ. ಕೆಲವು ಕಡೆ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿಲ್ಲ ಮತ್ತು ತಪ್ಪಾಗಿದೆ ಎಂದು ಕಾಮೆಂಟ್ಸ್ ಕೂಡ ಬಂದಿತ್ತು. ನಾನು ಪ್ರತಿ ಜಿಲ್ಲೆಯಿಂದ ವರದಿಯನ್ನು ತರಿಸಿಕೊಂಡಿದ್ದೇನೆ. ವರದಿಗೆ ತಹಶೀಲ್ದಾರ್ certify ಮಾಡಿದ್ದಾರೆ. ನನ್ನ ಬಳಿ ಇರುವ ಪುಸ್ತಕದಲ್ಲಿ ಪ್ರತಿಯೊಂದು ಊರು ಮತ್ತು ಸಂತ್ರಸ್ತರ ಹೆಸರು ಸಮೇತ ಮತ್ತು ಅವರಿಗೆ ಹಣ ಯಾವ ರೀತಿ ಪಾವತಿಯಾಗಿದೆ ಎಂಬುದರ ಮಾಹಿತಿಯನ್ನು ಎಲ್ಲಾ ಜಿಲ್ಲೆಗಳಿಂದ ತರಿಸಿಕೊಂಡಿದ್ದೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು RTGS ಮುಖಾಂತರ ಸಂತ್ರಸ್ತರಿಗೆ ಹಣವನ್ನು ತಲುಪಿಸಿದ್ದಾರೆಂದು ಹೇಳಿದ್ದಾರೆ. ಆದರೆ, ಆ ಹತ್ತು ಸಾವಿರ ರೂಪಾಯಿಗಳನ್ನು ಕೊಡುವ ಸಂದರ್ಭದಲ್ಲಿ ಚೆಕ್‌ಗಳ ವಿತರಣೆ ಮಾಡುವಾಗ, ಅಧಿಕಾರಿಗಳು ಮೂರು ಸಾವಿರ ರೂಪಾಯಿಗಳ ಲಂಚವನ್ನು ತೆಗೆದುಕೊಂಡು ಸಂತ್ರಸ್ತರಿಗೆ ತೊಂದರೆ ಕೊಟ್ಟಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಈ ವಿಷಯ ಮಾಧ್ಯಮಗಳಲ್ಲಿ ಬಂದಿರುವಂಥದ್ದು

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಪ್ರಾರಂಭದಲ್ಲೇ squad ಅನ್ನು ಮಾಡಿದ್ದೇನೆ ಮತ್ತು ಕೆಲವು ಎಂಎಲ್‌ಎ ಗಳು ಚೆಕ್ ನೀಡಿ ಅದನ್ನು ನಾವು ನೀಡುತ್ತೇವೆಂದು ಹೇಳುತ್ತಿದ್ದರು. ಅದಕ್ಕೆ ನಾನು ಏನು ಹೇಳಿದೆ ಎಂದರೆ, ಈಗ ಎಂಎಲ್‌ಎ ಗಳು ನೂರು ಚೆಕ್‌ಗಳಲ್ಲಿ ಹತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚೆಕ್‌ಗಳನ್ನು ನೀಡಿ ಅವರು ಮುಂದಿನ ಹಳ್ಳಿಗಳಿಗೆ ಹೋಗುತ್ತಾರೆ. ಇನ್ನು ಉಳಿದ 90 ಚೆಕ್‌ಗಳು ರೆವಿನ್ಯೂ ಇನ್‌ಸ್ಪೆಕ್ಟರ್ ಜೇಬ್‌ನಲ್ಲಿ ಇರುತ್ತದೆ. ಅದಕ್ಕೆ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅವ್ಯವಹಾರವಾಗುತ್ತದೆ ಎಂದು ಆ ಪದ್ದತಿಯನ್ನು ತೆಗೆದು ಹಾಕಿದ್ದೇವೆ. RTGS ಮುಖಾಂತರವೆ ಎಲ್ಲರಿಗೂ ಕೊಡಬೇಕೆಂದು ಮಾಡಿದ್ದೇವೆ. ಯಾವುದೇ ಕಾರಣಕ್ಕೂ ಈ ಹಣವನ್ನು ಯಾರಾದರೂ ಸಹ ತಿಂದರೆ, ಅಂತಹವರಿಗೆ ಆ ದೇವರು ಸಹ ಒಳ್ಳೆಯದು ಮಾಡುವುದಿಲ್ಲ ಮತ್ತು ಸರ್ಕಾರ ಸಹ ಅವರನ್ನು ಬಿಡುವುದಿಲ್ಲ. ಅಂತಹವರನ್ನು ಸರ್ಕಾರದಿಂದ ಮಟ್ಟ ಹಾಕುತ್ತೇವೆ. ಅಂತಹವರು ಇನ್ನು ಮುಂದೆ ಸರ್ಕಾರದ ಅಧಿಕಾರಿಯಾಗಿ ಕೆಲಸ ಮಾಡಲು ಅವಕಾಶ ಕೊಡುವುದಿಲ್ಲ. ಇದು ಅಷ್ಟು ಕಟ್ಟುನಿಟ್ಟಾಗಿದೆ. ಈ ಪ್ರವಾಹದ ವಿಚಾರದಲ್ಲಿ ಏನಾದರೂ ಮೋಸವಾದರೆ ಅವರನ್ನು ನಾವು ಯಾವುದೇ ಕಾರಣಕ್ಕೂ ಅದನ್ನು ಸಹಿಸುವುದಿಲ್ಲ ಮತ್ತು ಅಂತಹವರನ್ನು ಬಿಡುವುದಿಲ್ಲ ಎಂಬ ಮಾತನ್ನು ಈ ಸದನದ ಮುಖಾಂತರ ಅವರಿಗೆಲ್ಲಾ ತಿಳಿಸುತ್ತಿದ್ದೇನೆ.

ಅದರ ಜೊತೆಗೆ ನಿನ್ನೆಯ ದಿವಸ ಕೂಡ ಸದನದಲ್ಲಿ ಈ ವಿಷಯ ಚರ್ಚೆಯಾಗಿದೆ ಮತ್ತು ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಈಗ ನಾವು 'ಎ' 'ಬಿ' ಮತ್ತು 'ಸಿ' ಎಂದು ಮೂರು ಕೆಟಗರಿ ಮಾಡಿದ್ದೇವೆ. 'ಎ' 'ಬಿ' ಮತ್ತು 'ಸಿ' ಕೆಟಗರಿ ಮಾಡಿರುವುದರಲ್ಲಿ 'ಎ' ಕೆಟಗರಿಯಲ್ಲಿ ಸುಮಾರು ಹತ್ತು ಸಾವಿರ ಮನೆಗಳು ಪೂರ್ತಿಯಾಗಿ ಬಿದ್ದಿವೆ ಎಂದು ಅಧಿಕಾರಿಗಳು ವರದಿಯನ್ನು ನೀಡಿದ್ದರು. ಅಂತಹವರಿಗೆ ಸರ್ಕಾರದಿಂದ ಐದು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಇತ್ತು. ಈಗ ನಾವು 'ಬಿ' ಕೆಟಗರಿಯನ್ನು ಸಹ 'ಎ' ಕೆಟಗರಿಗೆ ಸೇರಿಸಿದಾಗ ಈಗ ಒಟ್ಟು 42893 ಮನೆಗಳಾಗಿವೆ ಈಗ ಅಂತಹ ಮನೆಗಳಿಗೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಇದರಿಂದ ಸರ್ಕಾರಕ್ಕೆ ಸುಮಾರು 2800 ಕೋಟಿ ಹೆಚ್ಚುವರಿ ಬಜೆಟ್ ಬೇಕಾಗುತ್ತದೆ.

**(ಮುಂದು...)**

(200) 12.10.2019-01.30-LL-VK

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್. ಅಶೋಕ್(ಮುಂದುವರೆದಿದ್ದು...)**

ಇದಕ್ಕೆ ಸುಮಾರು 2,800 ಕೋಟಿ ರೂಪಾಯಿ ಹೆಚ್ಚುವರಿ ಬಜೆಟ್ ಬೇಕಾಗುತ್ತದೆ. ಶೇಕಡ 25 ರಿಂದ 75 ಭಾಗದಷ್ಟು ಮನೆ ಹಾನಿಯಾದ ಮನೆಗಳು ಒಂದು ವಾರದ ನಂತರದಲ್ಲಿ ಬಿದ್ದು ಹೋಗುತ್ತವೆಯೆಂದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾಗೂ ಮನೆ ಕೇವಲ ಬಿರುಕು ಬಿಟ್ಟಿದ್ದರೆ ಅಧಿಕಾರಿಗಳು ಶೇಕಡ 50 ರಷ್ಟು ಪರಿಹಾರವನ್ನು ಗುರುತು ಮಾಡಿರುತ್ತಾರೆ. ಅದರಿಂದ ಅವರಿಗೆ ಹಣ ಸಿಗುವುದಿಲ್ಲ. ನಮ್ಮ ಪ್ರಕಾರ ಅವರಿಗೆ 1 ಲಕ್ಷ ರೂಪಾಯಿ ಹಣ ಮಾತ್ರ ಸಿಗುತ್ತದೆ ಎಂದು ಮಾನ್ಯ ಸದಸ್ಯರು ನಿನ್ನೆಯ ದಿವಸ ಈ ಸದನದಲ್ಲಿ ಚರ್ಚೆ ಮಾಡಿದ್ದರು. ಇದುವರೆವಿಗೂ ನಾವು ಮನೆ ರಿಪೇರಿಗಾಗಿ 1 ಲಕ್ಷ ರೂಪಾಯಿ ಹಣವನ್ನು ಆರ್.ಟಿ.ಜಿ.ಎಸ್. ಮುಖಾಂತರ ಕೊಟ್ಟಿದ್ದು, ಅವರು ಪೂರ್ತಿ ಮನೆ ಕಟ್ಟಿಕೊಳ್ಳುವುದಕ್ಕೆ ಇನ್ನೂ 4 ಲಕ್ಷ ರೂಪಾಯಿಗಳನ್ನು ಆರ್.ಟಿ.ಜಿ.ಎಸ್. ಮುಖಾಂತರ ಬಿಡುಗಡೆ ಮಾಡುತ್ತೇವೆ. ಇದಕ್ಕೆ ಸುಮಾರು 2,800 ಕೋಟಿ ರೂಪಾಯಿಯಷ್ಟು ಹೆಚ್ಚುವರಿ ಬಜೆಟ್ ಬೇಕಾಗುತ್ತದೆ. ಅದನ್ನು ಕೂಡ ರಾಜ್ಯ ಸರ್ಕಾರವೇ ಬಿಡುಗಡೆ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಆಗಲೇ ನಾನು 10 ಸಾವಿರ ರೂಪಾಯಿ ಪರಿಹಾರದ ಬಗ್ಗೆ ಹೇಳಿದ್ದು, ಮನೆಗೆ ಸಂಬಂಧಪಟ್ಟಂತೆ, ಇದಕ್ಕಾಗಿ 244.11 ಕೋಟಿ ರೂಪಾಯಿ ಪರಿಹಾರ ವಿತರಣೆ ಮಾಡಿದ್ದು, ಆರ್.ಟಿ.ಜಿ.ಎಸ್. ಮುಖಾಂತರ ಈಗಾಗಲೇ ಸಂಬಂಧಪಟ್ಟವರಿಗೆ ಅದನ್ನು ಪಾವತಿ ಮಾಡಿದ್ದೇವೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದುವರೆವಿಗೂ ಸರ್ಕಾರ ಯಾವ ರೀತಿ ಕೆಲಸ ಮಾಡಿದೆ ಎಂದು ಬಹಳಷ್ಟು ಚೆನ್ನಾಗಿ ಹೇಳಿದ್ದಾರೆ. ಅದು ಶ್ಲಾಘನೀಯ. ಮಾನ್ಯ ಸಚಿವರು ಇಷ್ಟೊಂದು ಪರಿಹಾರ ಹಣವನ್ನು ನೆರೆ ಸಂತ್ರಸ್ತರಿಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಒಂದು ಮಾತನ್ನು ಹೇಳಿದರು. ಅದೇನೆಂದರೆ, "ನಾವು ಪರಿಹಾರ ಕೊಡುವುದಕ್ಕೆ ಮುಂದೆ ಬಂದರೂ ಸಹ ಅದನ್ನು ಪಡೆಯುವುದಕ್ಕೆ ಯಾವ ಜನರೂ ಬರುತ್ತಿಲ್ಲವೆಂದು" ಹೇಳಿದರು. ಅಂದರೆ, ಏನು ಅರ್ಥ? ಅವರು ಒಂದು ರೀತಿಯಲ್ಲಿ ಹೇಳುತ್ತಾರೆ. ಆದರೆ, ಮಾನ್ಯ ಸಚಿವರು 244.11 ಕೋಟಿ ರೂಪಾಯಿ ಪರಿಹಾರ ಹಣವನ್ನು ಆರ್.ಟಿ.ಜಿ.ಎಸ್. ಮುಖಾಂತರ ಈಗಾಗಲೇ ತಲುಪಿಸಿದ್ದೇವೆಂದು ಹೇಳುತ್ತಿದ್ದಾರೆ. ಇದರಲ್ಲಿ ನಾವು ಯಾವುದನ್ನು ನಂಬಬೇಕು?

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಕೂಡ ಅದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಮಾನ್ಯ ಸಚಿವರು ಕೂಡ ಮಾರನೆಯ ದಿನ, 'ನಾನು ಆ ಅರ್ಥದಲ್ಲಿ ಹೇಳಿಲ್ಲ' ಎಂದು ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. ಈ ಬಗ್ಗೆ ನನ್ನ ಅಭಿಪ್ರಾಯವೆಂದರೆ, ನೆರೆ ಹಾವಳಿಯಿಂದ ಯಾರಿಗೆ ಅನ್ಯಾಯ ಆಗಿದೆ ಅವರನ್ನು ಹುಡುಕಿಕೊಂಡು ಹೋಗಿಯಾದರೂ ಪರಿಹಾರ ಕೊಡಬೇಕಾಗಿರುವುದು ನಮ್ಮ ಸರ್ಕಾರದ ಕರ್ತವ್ಯ. ಉದಾಹರಣೆಗೆ ನಾನು ಆಗಲೇ ಯಾರೋ ಕಾಡಿನಲ್ಲಿ 3 ದಿನ ಇದ್ದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿದ್ದಾರೆ ಎಂದು ಹೇಳಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಕೂಡ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಇದರ ಜೊತೆಗೆ, ಮನೆ ಬಾಡಿಗೆಗಾಗಿ 5 ಸಾವಿರ ರೂಪಾಯಿ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ನಾನು ನಿನ್ನೆಯ ದಿವಸ ಕೂಡ ಬಾಡಿಗೆ ಮುಂಗಡ ಹಣದ ಬಗ್ಗೆ ಹೇಳಿದ್ದು, ಪುನಃ ಅದನ್ನು ಪುನರುಚ್ಚರಿಸುವುದಿಲ್ಲ. ಅದರಂತೆ, ಮನೆ ಬಾಡಿಗೆಗಾಗಿ 25 ಸಾವಿರ ರೂಪಾಯಿ ಕೊಡುವುದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಕಡತ ಕಳುಹಿಸಿಕೊಡುತ್ತೇನೆ. ಅದಕ್ಕೆ ಅವರು ಅನುಮೋದನೆಯನ್ನು ನೀಡುತ್ತಾರೆ. ನೆರೆ ಸಂತ್ರಸ್ತರು ಬಾಡಿಗೆ ಮನೆಯಲ್ಲಿ ಆಶ್ರಯ ಪಡೆಯಲು 5 ಸಾವಿರ ರೂಪಾಯಿಗಳಿಗೆ ಬದಲಾಗಿ 25 ಸಾವಿರ ರೂಪಾಯಿ ಒಂದೇ ಬಾರಿಗೆ ಪರಿಹಾರ ಕೊಟ್ಟರೆ ಬಾಡಿಗೆ ಮುಂಗಡ ಹಣ ಮತ್ತು ಮಾಸಿಕ ಬಾಡಿಗೆ ಹಣ ನೀಡುವುದಕ್ಕೆ ಸರಿಹೋಗುತ್ತದೆ. ಸರ್ಕಾರಕ್ಕೂ ಕೂಡ ಒಂದೇ ಬಾರಿಗೆ ಹಣ ಕೊಡುವುದು ಒಂದು ಹೊರೆಯಾಗುವುದು ಬಿಟ್ಟರೆ ಹೆಚ್ಚಿಗೆ ಹೊರೆಯಾಗುವುದಿಲ್ಲ.

ಇದರ ಜೊತೆಗೆ, ಪರಿಹಾರ ಕಾರ್ಯಗಳಿಗೆ ರಾಜ್ಯ ಸರ್ಕಾರ ಏನು ಮಾಡಿದೆ ಎಂಬುದನ್ನು ಕೂಡ ತಮ್ಮ ಗಮನಕ್ಕೆ ತರಬೇಕಾಗಿದೆ. ಅದರಂತೆ, ಕಂದಾಯ ಇಲಾಖೆಯಿಂದ ಈಗಾಗಲೇ 20 ನಿರ್ವಹಣಾ ಖಾತೆಯಿಂದ 417.93 ಕೋಟಿ ರೂಪಾಯಿ ಪರಿಹಾರ ಹಣ ಬಿಡುಗಡೆ ಮಾಡಿದ್ದೇವೆ. ಕಂದಾಯ ಇಲಾಖೆಯಿಂದ ಪ್ರವಾಹದಿಂದ ಹಾನಿಯಾದವರಿಗೆ ಮೂಲಭೂತ ಸೌಕರ್ಯ ಕೊಡುವುದಕ್ಕೋಸ್ಕರ 500 ಕೋಟಿ ರೂಪಾಯಿ ಹಣವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇವೆ. ಅದೇ ರೀತಿ ವಸತಿ ಇಲಾಖೆಯಿಂದ ತಲಾ 5 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮನೆ ಕಟ್ಟುವುದಕ್ಕೋಸ್ಕರ 1 ಸಾವಿರ ಕೋಟಿ ರೂಪಾಯಿ ಹಣವನ್ನು ನಾವು ವಸತಿ ಇಲಾಖೆಗೆ ಬಿಡುಗಡೆ ಮಾಡಿದ್ದೇವೆ. ಅವರು ಕೂಡ...

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮನೆ ವಿಷಯದಲ್ಲಿ ಪತ್ರಿಕೆಯಲ್ಲಿ ಅಥವಾ ಬೇರೆ ಕಡೆಯಿಂದ ನಮಗೆ ತಿಳಿದು ಬಂದಂತೆ, ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟಂತಹ ಹಣವನ್ನು ನೆರೆ ಸಂತ್ರಸ್ತರಿಗೆ ಪರಿಹಾರ ನೀಡುವುದಕ್ಕೆ ಉಪಯೋಗ ಮಾಡುತ್ತಿದ್ದಾರೆಯೇ ಅಥವಾ ಅದನ್ನು ಬಿಟ್ಟು ರಾಜ್ಯ ಸರ್ಕಾರದ ಬೊಕ್ಕಸದಿಂದ ಕೊಡುತ್ತಿದೆಯೇ ಎಂಬ ಬಗ್ಗೆ ಒಂದು ಸ್ಪಷ್ಟೀಕರಣ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಇಲ್ಲ ಇಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಪ್ರವಾಹದಿಂದ ಎಸ್‌ಸಿ/ಎಸ್‌ಟಿ ಜನಾಂಗದವರು ಸಹ ಮನೆಗಳನ್ನು ಕಳೆದುಕೊಂಡಿದ್ದಾರೆ, ಅವರಿಗೆ ಈ ಮೀಸಲಿಟ್ಟ ಹಣವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಪಯೋಗ ಮಾಡುತ್ತಾರೋ ಅಥವಾ ಅದನ್ನು ಬಿಟ್ಟು ರಾಜ್ಯ ಸರ್ಕಾರದ ಬೊಕ್ಕಸದಿಂದ ಮಾಡುತ್ತಾರೆಯೋ ಎಂಬ ಬಗ್ಗೆ ಸ್ಪಷ್ಟೀಕರಣ ಬೇಕಾಗಿದೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಮೀಸಲಿಟ್ಟ ಹಣದ ಬಗ್ಗೆ ತಮಗೆಲ್ಲಾ ಚೆನ್ನಾಗಿ ಗೊತ್ತಿದ್ದು, ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆ ಹಣ ಯಾವ ಸಮುದಾಯಕ್ಕೆ ಸೇರಬೇಕೋ ಅವರಿಗೆ ಸೇರಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟೀಕರಣ ಕೇಳುವುದೇನೆಂದರೆ, ನೆರೆ ಸಂತ್ರಸ್ತರಲ್ಲಿ ಎಸ್‌ಸಿ/ಎಸ್‌ಟಿ ಜನಾಂಗದವರು ಸಹ ತಮ್ಮ ಮನೆಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಮೀಸಲಿಟ್ಟ ಹಣದಲ್ಲಿ ಪರಿಹಾರ ಕೊಡುತ್ತಾರೋ ಅಥವಾ ಅದನ್ನು ಬಿಟ್ಟು ಬೇರೆ ಹಣವನ್ನು ಕೊಡುತ್ತಾರೋ ಎಂಬ ಬಗ್ಗೆ ಸ್ಪಷ್ಟೀಕರಣ ಕೋರುತ್ತಿದ್ದೇನೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ಮಾಡಿ ಸ್ಪಷ್ಟಪಡಿಸುತ್ತೇನೆ.

**ಶ್ರೀ ಸಿ.ಎಂ. ಲಿಂಗಪ್ಪ:-** ಮಾನ್ಯ ಸಭಾಪತಿಯವರೇ, ನೆರೆ ಹಾವಳಿಯಿಂದ 91 ಜನರು ತೀರಿಕೊಂಡಿರುವುದಾಗಿ ಲೆಕ್ಕ ಹೇಳಿದ್ದಾರೆ. ಅದರ ಜೊತೆಗೆ, ಜಾನುವಾರುಗಳ ಲೆಕ್ಕವನ್ನು ಸಹ ಹೇಳಿದ್ದಾರೆ. ಆದರೆ ಮನುಷ್ಯ, ಆಕಸ್ಮಿಕ ಅಥವಾ ಅನಿರೀಕ್ಷಿತವಾಗಿ ಬಂದಂತಹ ಪ್ರವಾಹದಲ್ಲಿ ತಾನು ಬದುಕಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟನೇ ಹೊರತು, ತನ್ನ ಅವಲಂಬಿತವಾದ ಕುರಿ, ದನ, ಮೇಕೆ, ಎತ್ತು ಇವುಗಳನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಹಾಗಾಗಿ, ನಮಗೆ ಅನ್ನಿಸುವುದೇನೆಂದರೆ, ಕನಿಷ್ಠ ಪಕ್ಷ ಇಷ್ಟೊಂದು ಮನೆಗಳು ನಷ್ಟಕ್ಕೆ ಗುರಿಯಾಗಿರಬೇಕಾದರೆ ಸತ್ತಿರತಕ್ಕಂತಹ ಜಾನುವಾರುಗಳ ಸಂಖ್ಯೆ ಬಹುಶಃ ಲಕ್ಷ ಮುಟ್ಟಿರಬಹುದೆಂಬ ಅಂದಾಜು ಇದೆ. ಅದಕ್ಕೆ ದಯಮಾಡಿ ನಮ್ಮ ಸ್ನೇಹಿತ ಶ್ರೀ ನಾರಾಯಣಸ್ವಾಮಿಯವರು ಹೇಳಿದ ಹಾಗೆ ಮಾನ್ಯ ಸಚಿವರು ತುಂಬಾ ಮನವರಿಕೆಯಾಗುವ ರೀತಿಯಲ್ಲಿ ಸರ್ಕಾರ ಮಾಡಿರುವಂತಹ ಕೆಲಸವನ್ನು ಹೇಳಿದ್ದಾರೆ. ಅದರಲ್ಲಿ ಎರಡು ಮಾತಿಲ್ಲ. ಆದರೆ, ಈ ಜಾನುವಾರುಗಳ ಸಂಖ್ಯೆಯನ್ನು ಅಧಿಕಾರಿಗಳಿಗೆ ತಿಳಿಸಿ, ನಿಜವಾಗಿಯೂ ಜಾನುವಾರುಗಳನ್ನು ಕಳೆದುಕೊಂಡಂತಹವರಿಗೆ ಪರಿಹಾರ ಕೊಡುವಂತಹ ಮತ್ತೊಂದು ಕಾರ್ಯವನ್ನು ತಾವು ಮಾಡಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ನಾನು ಪ್ರಾರ್ಥನೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಜಾನುವಾರುಗಳ ಬಗ್ಗೆ ಹೇಳಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಭಾಗದಲ್ಲಿಯೂ ಸಹ ನೆರೆ ಬಂದು, ಆ ನೆರೆಯ ಜೊತೆ ಜಾನುವಾರುಗಳು ಕೊಚ್ಚಿ ಹೋದವು. ಆದರೆ, ಪರಿಹಾರ ಕೊಡಬೇಕಾದರೆ ಡಾಕ್ಟರ್‌ಗಳು ತಹಶೀಲ್ದಾರ್‌ರವರಿಂದ ಮರಣೋತ್ತರ ಪರೀಕ್ಷೆ ಮಾಡಿಸದೇ ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವ ರೀತಿಯಲ್ಲಿ ಹೇಳಿದ್ದಾರೆ. ಜಾನುವಾರುಗಳು ನೀರಿನಲ್ಲಿ ಕೊಚ್ಚಿ ಹೋದ ಮೇಲೆ ಮರಣೋತ್ತರ ಪರೀಕ್ಷೆ ಮಾಡುವುದಕ್ಕೆ ಹೇಗೆ ಸಾಧ್ಯ? ಹಾಗಾಗಿ, ಈ ಒಂದು ವಿಚಾರದ ಬಗ್ಗೆ ಸಹ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕು.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಜಾನುವಾರುಗಳು ಸತ್ತರೆ, ಅವುಗಳನ್ನು ಡಾಕ್ಟರ್‌ಗಳು ಪರಿಶೀಲನೆ ಮಾಡಿ ವರದಿ ನೀಡಬೇಕು. ಅದು ಸರ್ಕಾರದ ಕಾನೂನು. ಅದನ್ನು ನಾವು ಮಾಡಲೇಬೇಕು. ನಮ್ಮ ಸರ್ಕಾರ ಇದ್ದರೂ ಮಾಡಬೇಕು, ಮತ್ತೊಂದು ಸರ್ಕಾರ ಅಧಿಕಾರದಲ್ಲಿದ್ದರೂ ಮಾಡಬೇಕು. ಆದರೆ, ಜಾನುವಾರುಗಳು ಕೊಚ್ಚಿ ಹೋಗಿರುವಂತಹ ಸಂದರ್ಭದಲ್ಲಿ, ಸುತ್ತಮುತ್ತಲಿನ ಜನಗಳ ಸಹಾಯದಿಂದ ಮಹಜರು ಮಾಡಿ, ಅದರ ಮುಖಾಂತರ ಪರಿಹಾರ ಹಣ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ನಾನು ಸೂಚನೆ ಕೊಡುತ್ತೇನೆ. ಇದರ ಜೊತೆಗೆ, ವಸತಿ ಇಲಾಖೆಗೆ 1 ಸಾವಿರ ಕೋಟಿ ರೂಪಾಯಿ ಹಣ ಕೊಟ್ಟಿದ್ದೇವೆ. ಮನೆ ದುರಸ್ತಿ ಮಾಡುವುದಕ್ಕೋಸ್ಕರ 231 ಕೋಟಿ ರೂಪಾಯಿ ಹಣವನ್ನು ಈಗಾಗಲೇ ಆರ್ಥಿಕ ಇಲಾಖೆಯಿಂದ ವಸತಿ ಇಲಾಖೆಗೆ ಕೊಟ್ಟಿರುತ್ತೇವೆ. ಅವರೂ ಕೂಡ ಶೇಕಡ 25 ಕ್ಕಿಂತಲೂ ಕಡಿಮೆ ಹಾನಿಗೊಳಗಾದ ಮನೆಗಳ ದುರಸ್ತಿಗಾಗಿ ಅವರಿಗೆಲ್ಲಾ ಈಗಾಗಲೇ 25 ಸಾವಿರ ರೂಪಾಯಿ ಪರಿಹಾರ ಹಣವನ್ನು ಆರ್.ಟಿ.ಜಿ.ಎಸ್. ಮುಖಾಂತರ ಕೊಟ್ಟಿದ್ದೇವೆ. ಅದನ್ನು 50 ಸಾವಿರ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಈ ಸದನದಲ್ಲಿ ನಿನ್ನೆಯ ದಿವಸ ಚರ್ಚೆ ಮಾಡಲಾಗಿತ್ತು. ಅದರಂತೆ, ಶೇಕಡ 25 ಕ್ಕಿಂತಲೂ ಕಡಿಮೆ ಹಾನಿಯಾಗಿದ್ದ ಮನೆಗಳಿಗೆ ಸಂಬಂಧಿಸಿದಂತೆ ನೆರೆ ಸಂತ್ರಸ್ತರ ಬ್ಯಾಂಕ್ ಖಾತೆಗೆ, ಈಗಾಗಲೇ 25 ಸಾವಿರ ರೂಪಾಯಿ ಪರಿಹಾರ ನೀಡಿದ್ದು, ಉಳಿದ 25 ಸಾವಿರ ರೂಪಾಯಿ ಪರಿಹಾರ ಹಣವನ್ನು ಸಹ ಆರ್.ಟಿ.ಜಿ.ಎಸ್. ಮುಖಾಂತರ ಅವರ ಖಾತೆಗೆ ತುಂಬಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶೇಕಡ 15 ರಿಂದ 25 ರಷ್ಟು ಹಾನಿಯಾಗಿದ್ದ ಮನೆಗಳ ವಿಚಾರದಲ್ಲಿ ನೆರೆ ಸಂತ್ರಸ್ತರಿಗೆ 25 ಸಾವಿರ ರೂಪಾಯಿ ಪರಿಹಾರ ನೀಡಿರುವುದನ್ನು 50 ಸಾವಿರ ರೂಪಾಯಿವರೆಗೆ ಹೆಚ್ಚಿಸಲಾಗಿದೆಯೇ?

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಹೌದು. ಇದರ ಜೊತೆಗೆ, ಲೋಕೋಪಯೋಗಿ ಇಲಾಖೆಗೆ 500 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದು, ಕೆಲಸ ನಡೆಯುತ್ತಿದೆ. ಅದರ ನಂಬರ್‌ಗಳನ್ನು ನಾನು ಮುಂದೆ ಹೇಳುತ್ತೇನೆ. ಪ್ರವಾಹ ಪರಿಹಾರಕ್ಕಾಗಿ ಇದುವರೆವಿಗೂ ರಾಜ್ಯ ಸರ್ಕಾರ 2,949 ಕೋಟಿ ರೂಪಾಯಿ ಪರಿಹಾರ ಹಣವನ್ನು ಬಿಡುಗಡೆ ಮಾಡಿದೆ. ಹಲವಾರು ಮಾನ್ಯ ಸದಸ್ಯರುಗಳು ಮಾತನಾಡುತ್ತಾ, ಖಜಾನೆ ಖಾಲಿಯಾಗಿದೆ ಎಂದು ಹೇಳಿದ್ದಾರೆ. ಅದಕ್ಕೆ ಮಾನ್ಯ ಹೊರಟ್ಟಿಯವರು ಕಾಮೆಂಟ್ ಮಾಡಿದ್ದು, ಖಜಾನೆ ಖಾಲಿಯಾಗುವುದಿಲ್ಲವೆಂದು ಬೇರೆ ರೀತಿಯಲ್ಲಿ ಹೇಳಿದರು. ಅದರಿಂದ ನಾನು ಹೇಳುವುದೇನೆಂದರೆ, ಸರ್ಕಾರದ ಖಜಾನೆ ಖಾಲಿಯಾಗಿಲ್ಲ. ಆ ಖಜಾನೆಗೆ ನಿರಂತರವಾಗಿ ತೆರಿಗೆ ಬರುತ್ತಿರುತ್ತದೆ. ಅದು ಒಂದೇ ದಿನ ತೆರಿಗೆ ಬರುವುದಿಲ್ಲ. ನಿರಂತರವಾಗಿ ರಾಜ್ಯ ಸರ್ಕಾರಕ್ಕೆ ತೆರಿಗೆ ಬರುತ್ತಿರುತ್ತದೆ. ಮಾನ್ಯ ಯಡಿಯೂರಪ್ಪನವರು ಸಹ ಆ ಅರ್ಥದಲ್ಲಿ ಹೇಳಿರುವುದಿಲ್ಲ. ಅವರು ಯಾರೋ ಅಭಿವೃದ್ಧಿ ಕಾರ್ಯಕ್ಕೆ ಹಣವನ್ನು ಮಂಜೂರು ಮಾಡುವಂತೆ ವಿನಂತಿಸಿ ಪತ್ರ ಕೊಡುವುದಕ್ಕೆ ಬಂದಾಗ, "ಹಣ ಎಲ್ಲಿದೆಯಪ್ಪಾ" ಎಂದು ಹೇಳಿದ್ದಾರಷ್ಟೇ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲರೂ ಖಜಾನೆ ಖಾಲಿಯಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ, ಖಜಾನೆ ಖಾಲಿಯಾಗಿರುವುದಿಲ್ಲವೆಂದು ಹೇಳಿದ್ದೇನೆ. ಏಕೆಂದರೆ, ಇದು ನಿರಂತರವಾಗಿ ನಡೆಯುವಂತಹ ಪ್ರಕ್ರಿಯೆ ಆಗಿರುವುದರಿಂದ ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ, ತೆರಿಗೆ ಬಂದ ಹಾಗೆ ಪರಿಹಾರ ಕಾರ್ಯಗಳನ್ನು ಮಾಡಿ ಎಂದು ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8.ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 104 ರ ಮೇರೆಗೆ ವಿಧಾನ ಸಭೆಯು ದಿನಾಂಕ:12.10.2019ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸುತ್ತದೆಯೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2019
2) ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕ, 2019
3) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2019

(ಮುಂದುವರೆದಿದೆ...)

(201)12.10.2019/1.40/ವೈಎಲ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**9. ನಿಯಮ 68 ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

**ವಿಷಯ: ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ**

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಆ ರೀತಿ ಯಾವುದೇ ಸಮಸ್ಯೆ ಇಲ್ಲ. ಯಾವತ್ತು ಸರ್ಕಾರ ಪ್ರವಾಹವಾಗಿರುವಂಥ ಸಂದರ್ಭದಲ್ಲಿ ಪರಿಹಾರ ನೀಡುವುದಕ್ಕೆ, ಕೆಲಸ ಮಾಡುವುದಕ್ಕ ಹಿಂಜರಿಯುವುದಿಲ್ಲ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಎಷ್ಟೇ ಹಣ ಬೇಕಾದರೂ ಅದನ್ನು ಬಿಡುಗಡೆ ಮಾಡುವುದಕ್ಕೆ ತಯಾರಿದ್ದಾರೆ. ನಿನ್ನೆ ದಿವಸ ಇಲ್ಲಿ comments ಮಾಡಿರುವುದರ ಸಲುವಾಗಿ voluntarily, ಹಲವಾರು ಪರಿಹಾರ ನೀಡುವುದಕ್ಕೆ ಕೇಂದ್ರ ಸರ್ಕಾರದಿಂದ ಪರಿಹಾರಕ್ಕೆ ಬಿಡುಗಡೆಯಾಗಿರುವ ಹಣದ ಜೊತೆಗೆ ರಾಜ್ಯ ಸರ್ಕಾರದಿಂದ ಸಹ ಜೊತೆಗೂಡಿಸಿ ಹಣವನ್ನು ನೀಡುವಂತಹ ಕೆಲಸ ಮಾಡಿದ್ದೇವೆ. ಸಾಲವಾದರೂ ಪರವಾಗಿಲ್ಲ, ನೊಂದ ಜನರಿಗೆ ಸಹಾಯ ಮಾಡಲು ನಾವು ಇದ್ದೇವೆ. ಸರ್ಕಾರದ ಖಜಾನೆಗೆ ಯಾವುದೇ ಸಮಸ್ಯೆ ಇಲ್ಲ. ಒಂದು ವಿಚಾರವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದರೆ ನಂಬಿಕೆ ಬರಬಹುದು. ಏಕೆಂದರೆ ವೈಜ್ಞಾನಿಕವಾಗಿ ನಾನು ಮಾತನಾಡುತ್ತಿದ್ದೇನೆ. ನಾನು ದಾಖಲೆಯನ್ನಿಟ್ಟುಕೊಂಡು ಮಾತನಾಡುತ್ತಿದ್ದೇನೆ. ಏಕೆಂದರೆ, ಎಷ್ಟೇ ಹಣವನ್ನು ಬಿಡುಗಡೆ ಮಾಡಿದರೂ ಸಹ ನಮ್ಮ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎನ್ನುವ ಪ್ರಶ್ನೆ ಮಾನ್ಯ ಸದಸ್ಯರಲ್ಲಿ ಬರುತ್ತದೆ. ಆರ್ಥಿಕ ಇಲಾಖೆಯವರು ಹಣವನ್ನು ಘೋಷಣೆ ಮಾಡುತ್ತಾರೆ, ಆದರೆ, ಆ ಹಣ ತಲುಪಿಲ್ಲ ಎಂಬುವ ಪ್ರಶ್ನೆ ಬರುತ್ತದೆ. ಜಿಲ್ಲಾಧಿಕಾರಿಗಳ P.D. (Personal Deposit) ಖಾತೆಯಲ್ಲಿ ಇರುವ ಹಣದ ಬಗ್ಗೆ ವಿವರ ನೀಡುತ್ತೇನೆ; ಬಾಗಲಕೋಟೆ ಜಿಲ್ಲೆ – 141.1 ಕೋಟಿ ರೂಪಾಯಿ, ಬೆಳಗಾವಿ ಜಿಲ್ಲೆ – 504.91 ಕೋಟಿ ರೂಪಾಯಿ, ಚಿಕ್ಕಮಗಳೂರು – ಜಿಲ್ಲೆ 33.75 ಕೋಟಿ ರೂಪಾಯಿ, ಧಾರವಾಡ ಜಿಲ್ಲೆ – 69.96 ಕೋಟಿ ರೂಪಾಯಿ, ಹಾವೇರಿ ಜಿಲ್ಲೆ – 88.72 ಕೋಟಿ ರೂಪಾಯಿ, ಮಡಿಕೇರಿ ಜಿಲ್ಲೆ – 87.53 ಕೋಟಿ ರೂಪಾಯಿ, ಮೈಸೂರು ಜಿಲ್ಲೆ – 42.03 ಕೋಟಿ ರೂಪಾಯಿ, ಶಿವಮೊಗ್ಗ ಜಿಲ್ಲೆ – 86.95 ಕೋಟಿ ರೂಪಾಯಿ. ಇನ್ನೂ ಯಾವುದಾದರೂ ಜಿಲ್ಲೆಯ ವಿವರ ಮಾನ್ಯ ಸದಸ್ಯರಿಗೆ ಬೇಕಾದರೆ ಹೇಳುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿಯೇ 10 ಲಕ್ಷ ಕ್ಯೂಸೆಕ್ಸ್‌ಗಳಷ್ಟು ನೀರು ಬಂದಿದೆ. ಆ ಜಿಲ್ಲೆಗಳ ಬಗ್ಗೆ ವಿವರ ಹೇಳಿ.

**ಶ್ರೀ ಆರ್.ಅಶೋಕ್:–** ಆಯಿತು. ರಾಯಚೂರು ಜಿಲ್ಲೆಗೆ 15.97 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಮಡಿಕೇರಿ ಜಿಲ್ಲೆಗೆ 87.53 ಕೋಟಿ ರೂಪಾಯಿಗಳು ಬಿಡುಗಡೆ ಮಾಡಲಾಗಿದೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಚಿವರೇ, ಒಂದು ನಿಮಿಷ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆಮೇಲೆ ಪ್ರಶ್ನೆ ಕೇಳಲಿ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಹಾಗಲ್ಲ. ಮಾನ್ಯ ಸಚಿವರಲ್ಲಿ ನನ್ನದು ಒಂದು ಮನವಿ ಇದೆ. ಈಗಾಗಲೇ ಮಡಿಕೇರಿ ಜಿಲ್ಲೆಯ ಅಂಕಿ–ಅಂಶವನ್ನು ಹೇಳಿದ್ದಾರೆ. ಹಾಗೆಯೇ ಹಣಕ್ಕೆ ಏನೂ ಕೊರತೆ ಇಲ್ಲ, ಎಷ್ಟು ಬೇಕಾದರೂ ನೀಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅದು ಸ್ವಾಗತಾರ್ಹ. ಆದರೆ, ಕಳೆದ ಬಾರಿ ಅತಿವೃಷ್ಟಿ ಬಂದಿದ್ದಾಗ ಸರ್ಕಾರದಿಂದ ನಿವೇಶನಕ್ಕೆ ಜಾಗವನ್ನು ನೀಡಿ, 9.85 ಲಕ್ಷ ರೂಪಾಯಿಗಳಲ್ಲಿ ಮನೆ ನಿರ್ಮಿಸಿ ನೀಡಲಾಗಿತ್ತು. ಅದೇ ರೀತಿ ಈ ಸಲವೂ ಮಡಿಕೇರಿ, ಕೊಡಗಿನಲ್ಲಿ ಸಮಸ್ಯೆಯಾಗಿದೆ. ಒಬ್ಬೊಬ್ಬರಿಗೆ ಒಂದೊಂದು ರೀತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಾರತಮ್ಯ ಮಾಡುವುದು ಬೇಡ. ದಯವಿಟ್ಟು ಎಲ್ಲರಿಗೂ ಒಂದೇ ರೀತಿ ಸಮಾನವಾಗಿ ಹಣ ಬಿಡುಗಡೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಕೊಡಗು ಜಿಲ್ಲೆಗೆ ತಾರತಮ್ಯ ಮಾಡುವುದು ಬೇಡ. ಎಲ್ಲೂ ತಾರತಮ್ಯ ಮಾಡುವುದು ಬೇಡ.

(ಗೊಂದಲ)

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಒಟ್ಟು 1394.31 ಕೋಟಿ ರೂಪಾಯಿಗಳು ಇವೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತೋರಿಕೆಗಾಗಿ ಹಣವನ್ನಿಟ್ಟುಕೊಳ್ಳಬೇಡಿ, ಕೂಡಲೇ ಅದನ್ನು ಖರ್ಚು ಮಾಡಿ, ಯಾರಿಗೆ ಆ ಹಣ ತಲುಪಬೇಕು, ಅದನ್ನು ಪ್ರಾಮಾಣಿಕವಾಗಿ ಯಾವುದೇ ರೀತಿಯ ಭ್ರಷ್ಟಚಾರವಾಗದೇ, ಮಧ್ಯವರ್ತಿಗಳ ಹಾವಳಿ ಇಲ್ಲದೇ, ಜನರಿಗೆ ಆ ಹಣವನ್ನು ಆದಷ್ಟು ಬೇಗ ತಲುಪಿಸಿ ಎಂದು ಸೂಚನೆಯನ್ನು ನೀಡಲಾಗಿದೆ. ನಮ್ಮ ಮುಖ್ಯ ಕಾರ್ಯದರ್ಶಿಯವರು ಸಹ ಪ್ರತಿ ವಾರ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ರೆವಿನ್ಯೂ ಇಲಾಖೆಯ ಅಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಯನ್ನು ನಡೆಸಿ, ಹಣ ಖರ್ಚು ಮಾಡದೇ ಇರುವುದಕ್ಕೆ ಕಾರಣವೇನು ಮತ್ತು ಎಷ್ಟು ಹಣದ ಅವಶ್ಯಕತೆ ಇದೆ ಎನ್ನುವ ಮಾತನ್ನು ಕೇಳುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಗೆ ನಾನು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹೋದಾಗ ಅಲ್ಲಿನ ಜಿಲ್ಲಾಧಿಕಾರಿಯವರು ಕೇವಲ 2½ ಕೋಟಿ ರೂಪಾಯಿಗಳು ಮಾತ್ರ ಇದೆ ಎಂದು ಹೇಳಿದರು. ಆಗ ಮಾನ್ಯ ಮುಖ್ಯಮಂತ್ರಿಗಳು ತಕ್ಷಣವೇ 10.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ನನಗೆ ಆದೇಶ ನೀಡಿದರು. ಅದೇ ರೀತಿ ನಾನು ಬೇರೆ-ಬೇರೆ ಜಿಲ್ಲೆಗಳಿಗೆ ಹೋದಂಥ ಸಂದರ್ಭದಲ್ಲಿ, ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಎಲ್ಲೆಲ್ಲಿ ಹಣದ ಕೊರತೆ ಇದೆ, ಅದನ್ನು ಫುಲ್‌ಫಿಲ್ ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಕಡಿಮೆ ಹಣ ಇದ್ದರೆ, ಎಷ್ಟು ಹಣದ ಅವಶ್ಯಕತೆ ಇದೆಯೋ . . . ಮೊನ್ನೆ cheque bounce ಆಗಿದೆ ಎಂದು ಪತ್ರಿಕೆಯಲ್ಲಿ ದೊಡ್ಡದಾಗಿ ವರದಿಯಾಗಿತ್ತು. ಇಷ್ಟೆಲ್ಲಾ ಹಣವನ್ನು ಬಿಡುಗಡೆ ಮಾಡಿದರೂ ಪತ್ರಿಕೆಯಲ್ಲಿ ಈ ರೀತಿ ವರದಿಯಾಗಿದೆ ಎಂದು ಆ ವಿಚಾರದಿಂದ ನನಗೆ ಬಹಳ ನೋವಾಯಿತು. ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ, ಏತಕ್ಕೆ ಆ ರೀತಿಯಾಗಿದೆ ಎಂದು ಕೇಳಿದೆ. ಆವತ್ತು ಸಹ 68.00 ಲಕ್ಷ ರೂಪಾಯಿಗಳಷ್ಟು ಹಣ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಇತ್ತು. ಬ್ಯಾಂಕ್‌ನವರು ಮಾಡಿದ ತಪ್ಪಿನಿಂದ ಆ ರೀತಿ ಆಗಿತ್ತು. ಅದಕ್ಕೆ ನಾನು ಜಿಲ್ಲಾಧಿಕಾರಿಗಳಿಗೆ ನೋಟೀಸ್ ಜಾರಿಗೊಳಿಸಲು ಹೇಳಿದೆ. ನಂತರ ಜಿಲ್ಲಾಧಿಕಾರಿಗಳು ನೋಟೀಸ್ ಜಾರಿಗೊಳಿಸಿ, ಇರತಕ್ಕಂಥ ಹಣದ ಬಗ್ಗೆ ಮಾರನೇ ದಿನ ಪತ್ರಿಕೆಯವರಿಗೆ ತಿಳಿಸಿದರು. ಅಲ್ಲಿಯೇ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭದಲ್ಲಿ ಚೆಕ್ ನೀಡಲಾಗುತ್ತಿತ್ತು, ನಂತರ ಚೆಕ್ ನೀಡುವ ಪದ್ಧತಿಯನ್ನು ರದ್ದುಗೊಳಿಸಿ, RTGS (Real Time Gross Settlement) ಮೂಲಕ ಹಣವನ್ನು ನೀಡಲು ತಿಳಿಸಿದ್ದೇನೆ. ಎಲ್ಲೆಲ್ಲಿ ಈ ರೀತಿಯ ಸಮಸ್ಯೆಗಳಿದೆ, ಜಿಲ್ಲಾಧಿಕಾರಿಗಳಿಗೆ ಯಾವುದೇ ಸಮಸ್ಯೆ ಆಗದ ರೀತಿಯಲ್ಲಿ ನಾನು ನೋಡಿಕೊಂಡಿದ್ದೇನೆ. ಈಗಾಗಲೇ ಪ್ರತಿ ಕುಟುಂಬಕ್ಕೆ 10,000 ರೂಪಾಯಿಗಳನ್ನು ಏನು ನೀಡಲಾಗುತ್ತಿತ್ತು, ಆ ಹಣವೂ ಸಹ 203.00 ಕೋಟಿ ರೂಪಾಯಿಗಳಷ್ಟು ಆಗಿದೆ. ಅದೇ ರೀತಿ ಬಾಡಿಗೆ ಏನು ನೀಡಲಾಗುತ್ತಿತ್ತು, ಅದರ ಹಣವನ್ನು ಸಹ ನೀಡುವಂತೆ ಹೇಳಿದ್ದೇನೆ. ಯಾರ್‍ಯಾರು individual ಶೆಡ್ ನಿರ್ಮಾಣ ಮಾಡಿಕೊಳ್ಳುತ್ತೇವೆ ಎಂದು ಹಣ ಕೇಳಿದ್ದಾರೆ ಅಂಥವರಿಗೆ 8.38 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕೆಲವು ಕಡೆಗಳಲ್ಲಿ ಜಿಲ್ಲಾಧಿಕಾರಿಗಳೇ ಶೆಡ್ ನಿರ್ಮಿಸಿದ್ದು, ಇದಕ್ಕಾಗಿ 3.18 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಒಟ್ಟು 14.58 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆಗೊಳಿಸಿದ್ದೇವೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆಯ ಸಚಿವರಾದ ಗೋವಿಂದ ಕಾರಜೋಳರವರು ಸದನದಲ್ಲಿದ್ದಾರೆ, ಈಗಾಗಲೇ ಒಟ್ಟು 1747 ಕಾಮಗಾರಿಗಳನ್ನು ಕೈಗೊಂಡು, ಸೇತುವೆಗಳು, ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಈಗಾಗಲೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಮಾನ್ಯ ಎಸ್.ಸುರೇಶ್‌ಕುಮಾರ್ ಸಹ ಶಾಲೆ ಪ್ರಾರಂಭವಾಗುವುದರೊಳಗೆ ಯಾವ್ಯಾವ ಮಕ್ಕಳು ಪುಸ್ತಕ, ಬಟ್ಟೆಗಳನ್ನು ಕಳೆದುಕೊಂಡಿದ್ದಾರೆ, ಅದನ್ನು ನೀಡುವಂಥ ಕೆಲಸವನ್ನು ಮಾಡುತ್ತಿದ್ದಾರೆ.

**ಶ್ರೀ ಸಂದೇಶ್ ನಾಗರಾಜ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾರ್ಕ್ಸ್ ಕಾರ್ಡ್ ಕಳೆದುಕೊಂಡಿರುವವರಿಗೆ, ಅದನ್ನು ಒದಗಿಸಬೇಕು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಆ ಕೆಲಸವನ್ನು ಮಾಡುತ್ತಾರೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರವಾಹದಿಂದಾಗಿ ಸಂತಸ್ತರ Identity Cards ಗಳು ಮಳೆಯ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ಆದ್ದರಿಂದ ಅಧಿಕಾರಿಗಳು ಅಂತಹ ಜಾಗಗಳಲ್ಲಿ ಮಾನವೀಯತೆಯನ್ನಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಕೆಲವು ಕಡೆ ಸತ್ತು ಹೋಗಿರತಕ್ಕಂಥ ತಂದೆ-ತಾಯಿಗಳ ಭಾವಚಿತ್ರವೂ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ಜೊತೆಗೆ ಏನು ದಾಖಲೆಗಳನ್ನು ಒದಗಿಸಬೇಕೋ, ಆ ದಾಖಲೆಗಳಲ್ಲಿ proof ಸಿಗುವುದಿಲ್ಲ. ಅಂತಹ ಪ್ರಕರಣಗಳಲ್ಲಿ ವಿಶೇಷವಾಗಿ ಇದಕ್ಕೆ ಬೇಕಾದ ಅಗತ್ಯ ಕ್ರಮಗಳನ್ನು ಅಧಿಕಾರಿಗಳು ಕೈಗೊಳ್ಳಬೇಕು. ನಾನು ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಮದುರ್ಗದ ಸೂರ್ಯಭಾನು ಎಂಬ ಹಳ್ಳಿಗೆ ಖುದ್ದಾಗಿ ಭೇಟಿ ನೀಡಿದಂಥ ಸಂದರ್ಭದಲ್ಲಿ 85 ವರ್ಷದ ಮಹಿಳೆಯೊಬ್ಬರು ದಾಖಲೆಗಳನ್ನೆಲ್ಲಾ ಕಳೆದುಕೊಂಡಿದ್ದಾರೆ. ಅಂಥವರು ಏನು ಮಾಡಬೇಕು? ಅವರ ಮನೆಯೂ ಕುಸಿದಿದ್ದು, ಪರಿಹಾರ ಬೇಕೆಂದರೆ ಏನು ಮಾಡಬೇಕು? ಇದಕ್ಕೆ ಸರ್ಕಾರ ಏನು ಮಾಡಬೇಕೆಂಬುದರ ಬಗ್ಗೆ ಅಧಿಕಾರಿಗಳು ಸಲಹೆ ನೀಡಬೇಕು. ಮಾನವೀಯತೆಯನ್ನಿಟ್ಟುಕೊಳ್ಳಬೇಕು. ನಾವು ಹುಟ್ಟಿದಾಗ ಜಾತಕ ನೋಡುತ್ತೇವೆ, ಮಧ್ಯದಲ್ಲಿ ನಾಟಕ ಮಾಡುತ್ತೇವೆ, ಸತ್ತಾಗ ಸೂತಕ ನೋಡುತ್ತೇವೆ. ಇದೇ ಜೀವನ. ಆದರೂ ಕೂಡಾ ವಿಶೇಷವಾಗಿ ಇಂತಹ ಪ್ರಕರಣಗಳಲ್ಲಿ ಏನಾದರೂ ವ್ಯವಸ್ಥೆ ಮಾಡುವಂಥ ಕೆಲಸ ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮೊದಲು ಮಾನ್ಯ ಸಚಿವರು ಮಾತನ್ನು ಮುಗಿಸಲಿ, ನಂತರ ನಾವು ಸ್ಪಷ್ಟೀಕರಣವನ್ನು ಕೇಳುತ್ತೇವೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅವರು ಜಾತಕ ಇರುವವರಿಗೂ ದಾಖಲೆ ನೀಡುತ್ತಾರೆ, ಸೂತಕ ಇರುವವರಿಗೂ ದಾಖಲೆ ನೀಡುತ್ತಾರೆ, ಜಾತಕ ಇಲ್ಲದವರಿಗೂ ದಾಖಲೆ ನೀಡುತ್ತಾರೆ. ಏಕೆಂದರೆ, ಕೆಲವರು ಜಾತಕ ಬರೆಸಿರುವುದಿಲ್ಲ. ಹಿಂದಿನ ಕಾಲದವರು ಜಾತಕ ಬರೆಸಿರುವುದಿಲ್ಲ, ಹಾಗೆಯೇ ಕೆಲವರಿಗೆ ಜಾತಕದಲ್ಲಿ ನಂಬಿಕೆಯೂ ಇರುವುದಿಲ್ಲ. ಆದ್ದರಿಂದ ಮಾನ್ಯ ಟಿ.ಎ.ಶರವಣನವರಿಗೆ ಜಾತಕದಲ್ಲಿ ನಂಬಿಕೆ ಇದೆ, ಅವರಿಗೂ ದಾಖಲೆ ಸಿಗುತ್ತದೆ. ಜಾತಕದಲ್ಲಿ ನಂಬಿಕೆ ಇಲ್ಲದವರಿಗೂ ದಾಖಲೆ ಸಿಗುತ್ತದೆ. "ನಾಟಕ ಮಾಡುತ್ತೇವೆ" ಎನ್ನುವ ಪದ ಸರಿ ಇಲ್ಲವೆಂದು ಅನ್ನಿಸುತ್ತದೆ. ಈಗಾಗಲೇ ಕೇಂದ್ರ ಸರ್ಕಾರದವರು 1200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಶ್ರೀ ಪ್ರಕಾಶ್‌ರವರ ನೇತೃತ್ವದಲ್ಲಿ ಕೇಂದ್ರದ ತಂಡ ಕರ್ನಾಟಕಕ್ಕೆ ಬಂದಿದ್ದು, ಈಗಾಗಲೇ ಆ ತಂಡದವರು... ಸಾಮಾನ್ಯವಾಗಿ ನಾವು ಮನವಿಯನ್ನು ಸಲ್ಲಿಸಿದ ಮೇಲೆ ಅವರು ಬರುವ ಪದ್ಧತಿ ಇತ್ತು. ಆದರೆ, ಮುಂಚೆಯೇ ಬಂದು ಸಮೀಕ್ಷೆ ಮಾಡಿ, 1200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ 1,035 ಕೋಟಿ ರೂಪಾಯಿಗಳನ್ನು ರೈತರಿಗೆ ನೇರವಾಗಿ RTGS (Real Time Gross Settlement) ಮೂಲಕ ನೀಡುವಂಥ ಕೆಲಸ ಮಾಡಿದ್ದೇವೆ. ನಿನ್ನೆ ಸಹ ಹೇಳಿದ್ದೇನೆ. ಕಳೆದ ಬಾರಿಯ ಬರ ಪರಿಹಾರದ ಹಣ ಸಹ ಬಂದಿದೆ. ಆ ಹಣವನ್ನು ಸಹ RTGS ಮೂಲಕ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ನೀಡುವಂತಹ ಯೋಜನೆಗೆ ಚಾಲನೆ ನೀಡಿದ್ದಾರೆ.

(ಮುಂದು) . . .

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(202)/12.10.2019/1.50/ಎಸ್‌ಕೆ-ಬಿಎನ್‌ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು) (ಮುಂದು):-** ಮಾನ್ಯ ಮುಖ್ಯಮಂತ್ರಿಗಳು ಸ್ವಇಚ್ಛೆಯಿಂದ ಕೆಲವು ಘೋಷಣೆಗಳನ್ನು ಮಾಡಿದ್ದಾರೆ. NDRF (National Disaster Response Force) Norms ಪ್ರಕಾರ ಮಳೆ ಆಶ್ರಿತ ಖುಷ್ಕಿ ಬೆಳೆಗೆ ಸುಮಾರು 6,800 ರೂಪಾಯಿಗಳನ್ನು ಮಾತ್ರ ಪರಿಹಾರ ಕೊಡುವುದರ ಬಗ್ಗೆ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಆದರೆ ಅದನ್ನು 16,800 ರೂಪಾಯಿಗಳಿಗೆ ಕೊಡಬೇಕೆಂದು ಸರ್ಕಾರ ಆದೇಶ ಮಾಡಿದೆ. ನೀರಾವರಿ ಬೆಳೆ ಸುಮಾರು 13,500 ರೂಪಾಯಿಗಳಿರುವುದನ್ನು ಸುಮಾರು 23,500 ರೂಪಾಯಿಗಳಿಗೆ ಮಾಡಿದ್ದೇವೆ. ತೆಂಗು, ಮಾವು, ಅಡಿಕೆ, ಕಾಫಿ, ಇತ್ಯಾದಿ ಬೆಳೆಗಳಿಗೆ ಸುಮಾರು 18,000 ರೂಪಾಯಿಗಳು ಇರುವುದನ್ನು ಸುಮಾರು 28,000 ರೂಪಾಯಿಗಳಿಗೆ ಮಾಡಿದ್ದೇವೆ.

**ಶ್ರೀ ಎಸ್. ವೀಣಾ ಅಚ್ಚಯ್ಯ (ವಿಧಾನಸಭಾ ಕ್ಷೇತ್ರ):-** ಕಾಫಿ ಬೆಳೆಗೆ ಸ್ವಲ್ಪ ಜಾಸ್ತಿ ಪರಿಹಾರ ಕೊಡಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ರೇಷ್ಮೆ ಮತ್ತು ಹಿಪ್ಪುನೇರಳೆ ಇದೆಯಲ್ಲಾ, ಮಾನ್ಯ ಶ್ರೀಕಂಠೇಗೌಡರ ಪ್ರದೇಶದಲ್ಲಿಯೇ ಜಾಸ್ತಿ ಇದೆ. ಅವರಿಗೆ ಸುಮಾರು 4,800 ರೂಪಾಯಿಗಳ ಪರಿಹಾರದ ಬದಲು 14,800 ರೂಪಾಯಿಗಳಿಗೆ ಹೆಚ್ಚಿಗೆ ಮಾಡಿದ್ದೇವೆ.

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸುಮಾರು 14,800 ರೂಪಾಯಿಗಳ ಪರಿಹಾರವನ್ನು ಎಕರೆಗೋ ಅಥವಾ ಹೆಕ್ಟೇರ್ ಕೋಡುತ್ತೀರೋ?

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಇದು ಹೆಕ್ಟೇರ್‌ಗೆ ಮಾತ್ರ ಕೊಡುತ್ತೇವೆ. ಪ್ರತಿ ಹೆಕ್ಟೇರ್‌ಗೆ ಎರಡೂವರೆ ಎಕರೆ ಬರುತ್ತದೆ. ರೇಷ್ಮೆ ಬೆಳೆಗೆ ಸುಮಾರು 6,000 ರೂಪಾಯಿಗಳ ಇರುವುದನ್ನು ನಾವು 16,000 ರೂಪಾಯಿಗಳಿಗೆ ಮಾಡಿದ್ದೇವೆ. ಪ್ರವಾಹದಿಂದ ಹಾನಿಯಾದಂತಹ ಕೈಮಗ್ಗ ನೇಕಾರರಿಗೆ NDRF Norms ಪ್ರಕಾರ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ. ಆದರೆ ಅದಕ್ಕೆ ರಾಜ್ಯ ಸರ್ಕಾರ ಸುಮಾರು 25,000 ರೂಪಾಯಿಗಳನ್ನು ಕೊಡುವಂತಹ ತೀರ್ಮಾನವನ್ನು ಮಾಡಿದ್ದೇವೆ. ಸಣ್ಣ ಪೆಟ್ಟಿಗೆ ಇರುವಂತಹ ಕಿರಾಣಿ ಅಂಗಡಿಗಳಿಗೂ ಪರಿಹಾರವನ್ನು ಕೊಡುತ್ತಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್ ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಸುಮಾರು 25,000 ರೂಪಾಯಿಗಳನ್ನು ಕೊಡುತ್ತಿರುವುದು ಕೈಮಗ್ಗ ಅಥವಾ ವಿದ್ಯುತ್ ಚಾಲಿತ ಮಗ್ಗಕ್ಕೋ?

**ಶ್ರೀ ಆರ್.ಅಶೋಕ್:-** ವಿದ್ಯುತ್ ಚಾಲಿತ ಮಗ್ಗಕ್ಕೆ ಮಾತ್ರ ಕೊಡುತ್ತೇವೆ.

**ಶ್ರೀ ಎಸ್.ಆರ್ ಪಾಟೀಲ್:-** ವಿದ್ಯುತ್‌ಚಾಲಿತ ಮಗ್ಗ ಮಾತ್ರ ಕೊಡುತ್ತೀದ್ದೀರಾ. ಆದರೆ ಕೈಮಗ್ಗಕ್ಕೆ ಪರಿಹಾರ ಏನಿದೆ? ಆದರೆ ಇದರಲ್ಲಿ ಎರಡು ನಮೂನೆಗಳಿವೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ತಾವು ಎರಡು ನಿಮಿಷ ಕಾಲಾವಕಾಶ ಕೊಡಿ. ಅದರ ಬಗ್ಗೆ ನಾನು ಮುಂದೆ ಹೇಳುತ್ತೇನೆ. ಹಳ್ಳಿಗಳಲ್ಲಿ ಸಣ್ಣ-ಪುಟ್ಟ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡಿರುತ್ತಾರೆ. ಪ್ರವಾಹ ಬಂದು, ಪೆಟ್ಟಿಗೆ ಅಂಗಡಿಗಳು ಸಮೇತ ಕೊಚ್ಚಿಕೊಂಡು ಹೋಗಿರುತ್ತದೆ. ಆದರೆ NDRF Norms ಪ್ರಕಾರ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ. ನಾವು ಅವರಿಗೂ ಕೂಡ 25,000 ರೂಪಾಯಿಗಳ ಪರಿಹಾರವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ನನಗೆ ಅನಿಸುವುದೇನೆಂದರೆ, ಇಷ್ಟು ಹಣವನ್ನು ಹೆಚ್ಚುವರಿಯಾಗಿ ಕೊಡುತ್ತಿದ್ದೇವೆ. ನಾನು ಕಳೆದ ಬಾರಿ ಹೇಳಿದೆ; ಮೊದಲು ಮನೆ ಸಂಪೂರ್ಣ ಹಾಳಾದರೆ ಒಂದು ಲಕ್ಷ ರೂಪಾಯಿ ಕೊಡುವುದನ್ನು ಈಗ ಐದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಹಾಗಾಗಿ ಒಟ್ಟು 2800 ಕೋಟಿ ರೂಪಾಯಿಗಳು ಹೆಚ್ಚುವರಿಯಾಗಿ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತೀರ್ಮಾನವನ್ನು ಮಾಡಿದ್ದಾರೆ.

**ಶ್ರೀ ಹೆಚ್. ಎಂ. ರಮೇಶ್ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಮನೆ ಕಟ್ಟಿಕೊಳ್ಳುವುದಕ್ಕೆ ಹೆಚ್ಚು ಹಣ ಕೊಡುವಂತೆ ನಿನ್ನೆ ನಾವು ಆಗ್ರಹ ಮಾಡಿದ್ದೇವೆ. ಅದರ ಬಗ್ಗೆ ತಾವು ಏನು ಹೇಳಲಿಲ್ಲ. ಈಗ ತಾವು ಮನೆ ಕಟ್ಟಿಕೊಳ್ಳುವುದಕ್ಕೆ ಹಣವನ್ನು ಕೊಟ್ಟಿರುವುದು. ಆ ಹಣ ಸಾಕಾಗುವುದಿಲ್ಲ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಎಸ್.ಆರ್. ಪಾಟೀಲ್‌ರವರು ಆಲಮಟ್ಟಿ ಜಲಾಶಯದ ಎತ್ತರವನ್ನು ಎತ್ತರಿಸಬೇಕೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಈಗಾಗಲೇ ಒಂದು ಹೇಳಿಕೆಯನ್ನು ಕೂಡ ಕೊಟ್ಟಿದ್ದಾರೆ. ಕಾಳಜಿ ಕೇಂದ್ರದಿಂದ ಶಾಲಾ ಮಕ್ಕಳಿಗೂ ಮಧ್ಯಾಹ್ನದ ಊಟವನ್ನು ಕೊಡುತ್ತಿದ್ದಾರೆ. ಮಧ್ಯಾಹ್ನದ ಬಿಸಿಯೂಟವನ್ನು ಮಕ್ಕಳಿಗೆ ಏನು ಕೊಡುತ್ತಿದ್ದಾರೆ, ಆ ತರಹದೇನು ಮಾಡಬಾರದು ಎಂದು ನಾನು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರವಾಹ ಪೀಡಿತ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಳ್ಳಿಗಳನ್ನು ಸ್ಥಳಾಂತರ ಮಾಡುವುದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ಅದರ ಬಗ್ಗೆಯೂ ತೀರ್ಮಾನವನ್ನು ಮಾಡಿದ್ದೇವೆ. ಅದಕ್ಕೆ 30X40 ಸೈಟ್ಸ್‌ಗಳನ್ನು ಬೇರೆ ಕಡೆ, ಅಂದರೆ ಎತ್ತರದ ಪ್ರದೇಶಗಳಿಗೆ, ಯಾರ‍್ಯಾರು ಒಪ್ಪಿಗೆಯನ್ನು ಕೊಡುತ್ತಾರೋ, ಅಂತಹವರನ್ನು ಶಿಫ್ಟ್ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ದರದಲ್ಲಿ ಬೆಳೆ ಹಾನಿ ಪರಿಹಾರದ ಮೊತ್ತ ಕಡಿಮೆಯಿದೆ, ಅದನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಐದು ವರ್ಷಕ್ಕೊಮ್ಮೆ ರಿವ್ಯೂ ಆಗುತ್ತಿದೆ. ನಾವು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ. ಅದನ್ನು ಹೆಚ್ಚು ಮಾಡಬೇಕೆಂಬ ಮಾತನ್ನು ಹೇಳಿದ್ದೀರಿ. ಮಾನ್ಯ ಐವನ್ ಡಿ'ಸೋಜಾರವರು ಹೇಳಿರುವಂತೆ ಮನೆ ಹಾನಿ ಪ್ರಕರಣಕ್ಕೆ ಪರ್ಯಾಯವಾಗಿ ಮನೆ ಒದಗಿಸುವಂತಹ ಆ ರೀತಿಯ ವ್ಯವಸ್ಥೆ ಇಲ್ಲ. ಮನೆಗಳನ್ನು ಕಟ್ಟಿಕೊಡುವಾಗ ಬಹಳಷ್ಟು ಸಮಸ್ಯೆಗಳಾಗಿತ್ತು. ಮನೆ ಕಳಪೆಯಾಗಿದೆ. ಬಾಗಿಲು-ಕಿಟಕಿ, ವಿದ್ಯುತ್ ಸರಿಯಿಲ್ಲ. ಈ ರೀತಿ ಎಲ್ಲಾ ದೂರು ಬಂದಿದ್ದರಿಂದ, ಈ ಸಾರಿ ಸರ್ಕಾರದವರು ಯಾವುದೇ ಮನೆಗಳನ್ನು ಕಟ್ಟಿಕೊಡುವುದಿಲ್ಲ. ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನು ಮುಂಗಡವಾಗಿ ಕೊಡುತ್ತೇವೆ. ಈ ಹಿಂದೆ ಮನೆಗಳನ್ನು ಕಟ್ಟಿಕೊಂಡ ನಂತರ ಹಣವನ್ನು ಕೊಡುತ್ತಿದ್ದರು. ಈಗಾಗಲೇ ಪ್ರತಿಯೊಬ್ಬರ ಖಾತೆಗೆ ಒಂದು ಲಕ್ಷ ರೂಪಾಯಿ ಕೊಡುತ್ತಿದ್ದೇವೆ. ನನಗೆ ಅನಿಸುವುದೇನೆಂದರೆ, ಹತ್ತು ದಿನದೊಳಗಡೆ ಪ್ರತಿಯೊಬ್ಬರ ಖಾತೆಗೆ ಒಂದೊಂದು ಲಕ್ಷ ರೂಪಾಯಿ ಹಣ ಜಮಾವಾಗುತ್ತದೆ. ಈಗಾಗಲೇ ಶೇಕಡ ಅರವತ್ತರಷ್ಟು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನು ಕೊಟ್ಟಿದ್ದೇವೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಕಂತಿನ ಮೂಲಕ ಕೊಡುತ್ತೀರಾ ಹೇಗೆ?

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮೊದಲ ಕಂತಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಅವರು ಫೌಂಡೇಶನ್ ಹಾಕಿದ ನಂತರ ಕಂತಿನಲ್ಲಿ ರೂಪದಲ್ಲಿ ಹಣವನ್ನು ಕೊಡುತ್ತೇವೆ. ಅದು ನಿಮಗೂ ಗೊತ್ತಿದೆ.

**ಶ್ರೀ ಐವನ್ ಡಿ'ಸೋಜಾ:-** ಹಣವನ್ನು stage-wise ಕೊಡುತ್ತೀರಾ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ನಾವು ಹಣವನ್ನು stage-wise ಕೊಡುತ್ತೇವೆ. ನಾವು ಹಳ್ಳಿಯವರಿಗೆ ಒಂದೇ ಸಾರಿ ಹಣವನ್ನು ಕೊಟ್ಟು ಬಿಟ್ಟರೆ, ಯಾರೋ ನೆಂಟರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂದುಬಿಟ್ಟು, ಮದುವೆ ಇದೆ ಸಾಲ ಕೊಡಿ ಎಂದು ಹಣವನ್ನು ತೆಗೆದುಕೊಂಡು ಹೋಗಿ ಬಿಟ್ಟರೆ, ಆ ಹಣವೂ ಹೋಗಿ ಬಿಡುತ್ತದೆ. ಆದ್ದರಿಂದ ನಾವು ಕೊಡುವ ಹಣದಿಂದ ಮನೆಗಳನ್ನು ಕಟ್ಟಿಕೊಳ್ಳಬೇಕು.

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ. ತಾವು ಹಣವನ್ನು ಮುಂಗಡವಾಗಿ ಕೊಟ್ಟು ಬಿಡುತ್ತೇವೆಂದು ಹೇಳಿದ್ದಾರೆ. ಮನೆ ಫೌಂಡೇಶನ್ ಹಾಕಿದಾಗ ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಾ. Lintel level ಗೆ ಬಂದಾಗ ಹಣವನ್ನು ಬಿಡುಗಡೆ ಮಾಡುತ್ತೀರಾ ಹಾಗೂ ರೂಫಿಂಗ್ ಹಂತಕ್ಕೆ ಬಂದಾಗ ಹಂತ ಹಂತವಾಗಿ ಹಣವನ್ನು ಬಿಡುಗಡೆ ಮಾಡುತ್ತೀರಾ. ಅದು ಏನಾಗುತ್ತದೆ ಎಂದರೆ ಐದು ಲಕ್ಷ ರೂಪಾಯಿಗೆ ಮನೆಯನ್ನು ಕಟ್ಟಲು ಸಾಧ್ಯವಿಲ್ಲ ಎನ್ನುವುದು ನಿಮಗೂ ಗೊತ್ತಿದೆ. ಮನೆಯ ಫೌಂಡೇಶನ್ ಹಾಕುವುದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. Lintel level ಅಥವಾ ರೂಫ್ ಲೆವೆಲ್‌ಗೆ ಬರುತ್ತದೆ. ಶೀಟ್ ಅಥವಾ ರೂಫ್ ಹಾಕುವುದಕ್ಕೆ ಐದು ಲಕ್ಷ ರೂಪಾಯಿಗಳಲ್ಲಿ ಆಗುವುದಿಲ್ಲ. ಆ ಮನೆ ಅರ್ಧಕ್ಕೆ ನಿಂತು ಹೋಗಿ ಬಿಡುತ್ತದೆ. ಸರ್ಕಾರ ಪರಿಹಾರ ಕೊಟ್ಟರೂ ಕೂಡ ಅದು ಸಾರ್ಥಕವಾಗುವುದಿಲ್ಲ. ದಯವಿಟ್ಟು ಸರ್ಕಾರ ಇದರ ಕಡೆ ಗಮನಹರಿಸಬೇಕು.

**ಶ್ರೀ ಆರ್. ಅಶೋಕ್:-** ಮಾನ್ಯ ನಾರಾಯಣ ಸ್ವಾಮಿಯವರು ಕೇಳಿದಂತಹ ಪ್ರಶ್ನೆಗೆ ನಾನು ಹೇಳುವುದೇನೆಂದರೆ, NDRF Norms ಪ್ರಕಾರ 95,000 ರೂಪಾಯಿಗಳು ಮಾತ್ರ ಪರಿಹಾರ ಕೊಡುವುದಕ್ಕೆ ಬರುತ್ತದೆ. ಈಗ ಮಹಾರಾಷ್ಟ್ರ ಸರ್ಕಾರ 95,000 ರೂಪಾಯಿಗಳನ್ನು ಮಾತ್ರ ಘೋಷಣೆ ಮಾಡಿದೆ. ಆದರೆ, ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಉಳಿದ 4,05,000 ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಡುತ್ತಿದೆ. ಅವರು ಅದರಲ್ಲಿ ಮನೆಯನ್ನು ಕಟ್ಟಿಕೊಳ್ಳಬಹುದು. ಅವರು ಮನೆಯನ್ನು ಇನ್ನು ಹೆಚ್ಚುವರಿಯಾಗಿ ಹಣ ಸೇರಿಸಿಕೊಂಡು ಕಟ್ಟಿಕೊಳ್ಳುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ನಾವು ಅಷ್ಟೊಂದು ಹಣವನ್ನು ಬಿಡುಗಡೆ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಸುಮಾರು 4,05,000 ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಡುತ್ತಿದ್ದೇವೆ.

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟಂತಹ ಪಂಚಾಯ್ತಿಗಳಿಗೆ ತಾವು ಒಂದು ನಿರ್ದೇಶನವನ್ನು ಕೊಟ್ಟರೆ, ನರೇಗಾದಿಂದಲೂ ಮನೆ ಕಟ್ಟುವವರಿಗೆ ಒಂದು ಲಕ್ಷ ರೂಪಾಯಿಗಳ ನೆರವನ್ನು ಮಾಡಬಹುದು. ಏಕೆಂದರೆ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟುವಂತಹವರಿಗೆ ನರೇಗಾದಲ್ಲಿ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಅದೇ ರೀತಿಯಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೆರೆ ಹಾವಳಿಯಿಂದಾಗಿ ಮನೆಗಳು ಹಾನಿಯಾಗಿವೆ. ಮನೆ ಕಟ್ಟುಕೊಳ್ಳುವುದಕ್ಕೆ ಈ ಹಣದ ಜೊತೆ ಅದನ್ನು ಮಾಡಬಹುದು. ದಯವಿಟ್ಟು, ಈ ಸಲಹೆಯನ್ನು ಸರ್ಕಾರ ಸ್ವೀಕಾರ ಮಾಡಿ ಒಂದು ಆದೇಶವನ್ನು ಮಾಡಬೇಕು.

**ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮನೆಗಳ ವಿಚಾರ ಬಂದಾಗ, ಸರ್ಕಾರವು ಈಗ ಐದು ಲಕ್ಷ ರೂಪಾಯಿಗಳ ಪರಿಹಾರನ್ನು ಘೋಷಣೆ ಮಾಡಿದೆ. ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರು ಹೇಳಿದ ಹಾಗೆ, ನಮ್ಮ ರಾಜ್ಯದಲ್ಲಿರುವ ಒಂದು ಕಡೆ ತಾವು ಹತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಈಗ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅದರ ಬಗ್ಗೆ ಸರ್ಕಾರ ನಿರ್ಧಾರ ಮಾಡಿ. ದಯವಿಟ್ಟು ದೊಡ್ಡ ಮನಸ್ಸು ಮಾಡಿ ಪ್ರತಿ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಡುವಂತಹ ವ್ಯವಸ್ಥೆ ಮಾಡಿ ಎಂದು ಹೇಳುತ್ತಿದ್ದೇನೆ.

**ಶ್ರೀ ಆರ್. ಅಶೋಕ್:-** ತಾವೆಲ್ಲಾ ಪ್ರವಾಹದ ಬಗ್ಗೆ ಮಾತನಾಡಿದ್ದಾರೆ. ಕೆಲವು ಮಾನ್ಯ ಸದಸ್ಯರು ಬರದ ಬಗ್ಗೆಯೂ ಕೂಡ ಮಾತನಾಡಿದ್ದಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರೇ ಬೆಳೆ ವಿಮೆ ಬಗ್ಗೆ ಹೇಳಲಿಲ್ಲ.

**ಶ್ರೀ ಆರ್. ಅಶೋಕ್:-** ನಾನು ಇದರ ಬಗ್ಗೆ ಹೇಳಬೇಕೆಂದುಕೊಂಡಿದ್ದೇನೆ. ಆದರೆ ಸಮಯಾವಕಾಶ ಬಹಳ ಕಡಿಮೆ ಇದೆ.

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಂಪೂರ್ಣವಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವಂತಹ ವಿವರಣೆಯನ್ನು ನೋಡಿದರೆ, ನೆರೆಯ ಬಗ್ಗೆ ಬಹಳ ಗಂಭೀರವಾಗಿ ಹೇಳಿದ್ದಾರೆ. ಆದರೆ, ಇವತ್ತು ಇಷ್ಟೊಂದು ಗಂಭೀರವಾದಂತಹ ವಿಷಯವನ್ನು ಹೇಳಿರುವಂತಹ ಮಾನ್ಯ ಸಚಿವರು, is it not severe natural calamity? ಈ severe natural calamity ಇರುವಾಗ, Disaster Management Act ನ ಪ್ರಕಾರ ನಮಗೆ ಭಾರತ ಸರ್ಕಾರ ಕೊಟ್ಟಿರುವಂತಹ ಪ್ರಾವಿಜನ್, ಇದನ್ನು National Calamity ಎಂದು ಘೋಷಣೆ ಮಾಡತಕ್ಕಂತಹದ್ದಕ್ಕೆ ಎಲ್ಲಾ ಅವಕಾಶವಿದೆ. ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎರಡು ರಾಜ್ಯಗಳಲ್ಲಿ ಆಗಿರುವಂತಹದ್ದು. ಈ ಕಾಯಿದೆಯಲ್ಲಿ ಒಂದು ಪ್ರಾವಿಜನ್ ಇದೆ. As per the recommendations of the 14th Finance Commission, any notified calamity of a severe nature will qualify for assistance from National Disaster Response Fund (NDRF). ಇವತ್ತು ತಾವು ಈ ಒಂದು magnitude ಇರುವಂತಹ ನೋಟಿಫೈ ಮಾಡುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಹಾಕುತ್ತಾ ಇರುವಂತೆ ಕಾಣುತ್ತಿದೆ. ಇದನ್ನು ತಾವು ಮಾಡುತ್ತಿಲ್ಲ. ಹಣಕಾಸಿನ ಕೊರತೆಯಿದೆ ಎಂದು ಹೇಳುತ್ತಿದ್ದಾರೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದರ ಬಗ್ಗೆ ರಾಜ್ಯ ಸರ್ಕಾರ ಅದನ್ನು ಮಾಡುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಿಲ್ಲವೆಂದು ನೇರವಾಗಿ ಹೇಳಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಬೇಗ ಮುಗಿಸಲಿ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಬರದ ಬಗ್ಗೆ ಪ್ರಶ್ನೆ ಕೇಳಿದ್ದಾರೆ.

(ಮುಂದು)

(203) 12.10.2019 2.00 ಟಿಸಿಹೆಚ್-ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಉತ್ತರ ಕರ್ನಾಟಕದ ನೆರೆ ಸಂತ್ರಸ್ತರ ಬಗ್ಗೆ ಸಾಕಷ್ಟು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಜಾನುವಾರುಗಳು ಸಾಕಷ್ಟು ಸಂಖ್ಯೆಯಲ್ಲಿ ಸತ್ತಿರುವ ಬಗ್ಗೆ ವರದಿಗಳನ್ನು ಕೂಡ ಕೊಟ್ಟಿದ್ದಾರೆ. ನಾವು ಬೆಳಗಾವಿಯನ್ನು 'ಕುಂದಾನಗರಿ' ಎಂದು ಕರೆಯುತ್ತೇವೆ. ಬೆಳಗಾವಿಯಲ್ಲಿ ಹೈನುಗಾರಿಕೆ ಹೆಚ್ಚು ಇದೆ. ಅಲ್ಲಿ ಗೌಳಿ ಜನಾಂಗದವರು ವಾಸ ಮಾಡುತ್ತಾರೆ. ಈ ಹಿಂದೆ ಸರ್ಕಾರ ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಬೇಕು ಎಂದು ಉದ್ದೇಶಿದ ಸಂದರ್ಭದಲ್ಲಿ ಅದಕ್ಕೆ ಮಾನ್ಯ ರಾಷ್ಟ್ರಪತಿಯವರ ಅಂಕಿತ ಕೂಡ ಆಗಿತ್ತು. ಆದರೆ ಅದು ಇದುವರೆಗೂ ಕಾರ್ಯಗತ ಆಗಿಲ್ಲ. ಸರ್ಕಾರದಿಂದ ಅಲ್ಲಿ ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಟ್ಟಿಗಳನ್ನು ಯಾವ ರೀತಿಯಾಗಿ ಸರ್ವೇ ಮಾಡಿ ಕಂದಾಯ ಗ್ರಾಮಗಳನ್ನಾಗಿ ಮಾಡಲಾಗಿದೆ, ಅದೇ ರೀತಿ ರಾಜ್ಯಾದ್ಯಂತ . . .

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಶ್ರೀಮತಿ ಜಯಮ್ಮನವರು ಕೇಳಿರತಕ್ಕಂಥ ಪ್ರಶ್ನೆ ಸರಿ ಇದೆ. ಈಗ ಬಂಜಾರ ಹಟ್ಟಿ, ಗೊಲ್ಲರಹಟ್ಟಿ ಎಂದು ಏನಿದೆ ಇವುಗಳನ್ನು ಗ್ರಾಮಗಳನ್ನಾಗಿ ಮಾಡುವ ದೃಷ್ಟಿಯಿಂದ, ಈಗಾಗಲೇ ಸರ್ಕಾರ ಅದರ ಬಗ್ಗೆ ಚಿಂತನೆ ಮಾಡುತ್ತಿದೆ. ಕಂದಾಯ ಇಲಾಖೆಯಲ್ಲೂ ಕೂಡ ಅದರ ಬಗ್ಗೆ ಈಗಾಗಲೇ ಮಾತನಾಡಿದ್ದೇವೆ, ಅದನ್ನು ಕೂಡ ನಾವು ಪರಿಗಣಿಸುತ್ತೇವೆ. ಈಗಾಗಲೇ ಅದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಏನೇನು ಮಾಡಬಹುದೆಂದು ಮಾಡಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಕೊನೆಯದಾಗಿ, ಬರದ ಬಗ್ಗೆ ಬಹಳ ಪ್ರಶ್ನೆಗಳನ್ನು ಕೇಳಿದ್ದಾರೆ. ಈಗಾಗಲೇ ನಮ್ಮ ಕಂದಾಯ ಇಲಾಖೆಯಲ್ಲಿ ಬರದ ಬಗ್ಗೆ ಒಂದು ಸಭೆ ಕೂಡ ನಡೆದಿದೆ. 49 ತಾಲ್ಲೂಕುಗಳಲ್ಲಿ ಬರದ ಛಾಯೆ ಇದೆಯೆಂದು ನಾವು ಈಗಾಗಲೇ ವರದಿ ತೆಗೆದುಕೊಂಡಿದ್ದೇವೆ. ಆ ವರದಿಯಲ್ಲಿ ಶೇಕಡಾವಾರು ಎಷ್ಟು rainfall ಆಗಿದೆ ಎಂದು ವರದಿ ತೆಗೆದುಕೊಳ್ಳಲಾಗುವುದು. 49 ತಾಲ್ಲೂಕುಗಳನ್ನು ಬರದ ತಾಲ್ಲೂಕುಗಳು ಎಂದು declare ಮಾಡುವುದಕ್ಕೆ ಈಗಾಗಲೇ ನಮ್ಮ ಮುಂದೆ ಪ್ರಸ್ತಾವನೆ ಕೂಡ ಬಂದಿದೆ. ಇನ್ನೊಂದು 2-3 ದಿನಗಳಲ್ಲಿ ಅದರ ಬಗ್ಗೆ ತೀರ್ಮಾನ ಮಾಡುತ್ತೇವೆ. ಇಷ್ಟು ಪ್ರವಾಹವಾದಂತಹ ಸಂದರ್ಭದಲ್ಲಿ... ಈಗಾಗಲೇ ಕೇಂದ್ರ ಸರ್ಕಾರದಿಂದ 1035 ಕೋಟಿ ರೂಪಾಯಿಗಳು ಬಂದಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದು crop insurance ಬಗ್ಗೆ. . .

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿ ಮುಗಿಸಿಬಿಡುತ್ತೇನೆ. ಸರ್ಕಾರ ಮತ್ತು ಇನ್‌ಶೂರೆನ್ಸ್ ಕಂಪನಿಗಳ ಜೊತೆ ಏನೇನು ಮಾತುಕತೆ ಆಗಿದೆ ಮತ್ತು ನಾವು ಯಾವಾಗ ಪತ್ರ ಬರೆದಿದ್ದೇವೆ ಎನ್ನುವುದರ ಬಗ್ಗೆ ದಿನಾಂಕ ಸಹಿತ ಸಂಪೂರ್ಣ ಮಾಹಿತಿಯನ್ನು ಮಾನ್ಯ ಮಾಧುಸ್ವಾಮಿಯವರು ಹೇಳುತ್ತಾರೆ.

ಒಟ್ಟಾರೆಯಾಗಿ, ಕಳೆದ ಎರಡು ದಿನಗಳಿಂದಲೂ ಕೂಡ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ನನ್ನ ಎಲ್ಲಾ ಸ್ನೇಹಿತರು ಬಹಳಷ್ಟು ವಿಚಾರಗಳ ಬಗ್ಗೆ, ಪ್ರವಾಹದಲ್ಲಿ ಆಗಿರತಕ್ಕಂಥ ಸಮಸ್ಯೆಗಳ ಬಗ್ಗೆ, ಇವತ್ತಿನ ದಿವಸ ಈ ರಾಜ್ಯದಲ್ಲಿ ಆಗಿರತಕ್ಕಂಥ ಅನಾಹುತವನ್ನು ಯಾವ ರೀತಿ ಎದುರಿಸಬೇಕು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನೂ ಕೆಲವು ಸದಸ್ಯರುಗಳಿಂದ ಟೀಕೆಗಳು ಏನು ಬಂದಿವೆ, ಅದನ್ನು ನಮ್ಮ ಸರ್ಕಾರ ಕೆಲಸ ಮಾಡುವುದಕ್ಕೆ ಅವರು ಕೊಟ್ಟಂತಹ ಸಲಹೆ ಎಂದು ನಾವು ತೆಗೆದುಕೊಂಡಿದ್ದೇವೆ. ನಾವೆಲ್ಲಾ ಚುನಾಯಿತ ಜನಪ್ರತಿನಿಧಿಗಳು ಈ ಸಂದರ್ಭದಲ್ಲಿ ರಾಜಕಾರಣ ಮಾಡುವುದಕ್ಕಿಂತ ಹೆಚ್ಚಾಗಿ ನೊಂದಿರುವ ಜನರ ಜೊತೆಯಲ್ಲಿ ಇರೋಣ. ಎಷ್ಟೇ ಹಣ ಖರ್ಚಾದರೂ ಕೂಡ ಇದಕ್ಕೆ ಯಾವುದೇ ರೀತಿ ಸಮಸ್ಯೆ ಆಗದ ರೀತಿಯಲ್ಲಿ, ನೊಂದಂತಹ ಜನಗಳ ಜೊತೆ ನಾವು ಇದ್ದೇವೆ. ಈ ಸಂದರ್ಭದಲ್ಲಿ ಮಾಧ್ಯಮದಲ್ಲಿ ನಾನು ನೋಡುತ್ತಿರುತ್ತೇನೆ, ಬರ ಬಂದರೆ, ಪ್ರವಾಹ ಬಂದರೆ ದುಡ್ಡು ಹೊಡೆಯುವಂಥವರಿಗೆ ಯೋಚನೆ ಮಾಡುವುದಕ್ಕೆ ವ್ಯವಸ್ಥೆ ಇದೆ ಎಂದು ಎಲ್ಲರೂ ಟೀಕೆ ಮಾಡುತ್ತಾರೆ. ಆದರೆ, ನಾನು ಹೇಳುತ್ತಿದ್ದೇನೆ, ಅದರ ಬಗ್ಗೆ ಒಂದು ಚೂರು ಹೆಚ್ಚುಕಡಿಮೆ ಕಂಡುಬಂದರೂ ಆ ಅಧಿಕಾರಿಯನ್ನು ಆ ಸ್ಥಳದಲ್ಲಿ ಇರುವುದಕ್ಕೆ ಬಿಡುವುದಿಲ್ಲ. ಅವರು ದೊಡ್ಡ ಅಧಿಕಾರಿಯಾಗಲಿ ಅಥವಾ ಸಣ್ಣ ಅಧಿಕಾರಿಯಾಗಲಿ ಯಾವುದೇ ಕಾರಣಕ್ಕೂ ಅಲ್ಲಿ ಇರುವುದಕ್ಕೆ ಬಿಡುವುದಿಲ್ಲ. ಅದರಲ್ಲಿ ಯಾವುದೇ ರೀತಿ ಅವ್ಯವಹಾರ ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಅದಕ್ಕೋಸ್ಕರವೇ RTGS (Real Time Gross Settlement) ನ ಮುಖಾಂತರ ಹಣವನ್ನು ಅವರಿಗೆ ಕಳುಹಿಸುವಂಥ ವ್ಯವಸ್ಥೆಯನ್ನು ನಾನು ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಏನಾದರೂ ನಾವು 10,000/- ರೂಪಾಯಿಗಳಷ್ಟು ಪರಿಹಾರ ಕೊಟ್ಟಿರತಕ್ಕಂಥದ್ದರಲ್ಲಿ ಯಾರಾದರೂ ಬಿಟ್ಟುಹೋಗಿದ್ದರೆ, ಮಾನ್ಯ ಸದಸ್ಯರು ದಯವಿಟ್ಟು ತಿಳಿಸಿ. ನಾವು ಅವರಿಗೂ ಕೂಡ ಕೊಡುವುದಕ್ಕೆ ಸಿದ್ಧರಿದ್ದೇವೆ. ಒಂದುವೇಳೆ, ಯಾರನ್ನಾದರೂ ಕೈಬಿಟ್ಟಿದ್ದು ಅಥವಾ ಅವರಿಗೆ ತಲುಪಿಲ್ಲವೆಂದರೆ ಅಥವಾ ಅವ್ಯವಹಾರ ಆಗಿದೆ ಎಂದು ನಮಗೆ ತಿಳಿಸಿದರೆ, ಆ ಬಗ್ಗೆ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡುತ್ತೇವೆ. ಇದರ ಜೊತೆಗೆ ಮಾನ್ಯ ಸದಸ್ಯರೆಲ್ಲಾ ಪ್ರವಾಹ ಬಂದಂಥ ಸಂದರ್ಭದಲ್ಲಿ ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

**ಡಾ॥ ಜಯಮಾಲ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನದು ಒಂದೇ ಒಂದು ಪ್ರಶ್ನೆ ಇದೆ. ಮಾನ್ಯ ಸಚಿವರೇ, ಈ ಬೆಳೆ ನಾಶ ಆಗಿರುವುದಕ್ಕೆ ಹಾಗೂ ಮನೆಗಳು ಹಾಳಾಗಿರುವುದಕ್ಕೆ ಪರಿಹಾರಗಳನ್ನು ಕೊಟ್ಟಿದ್ದೀರಿ. ಆದರೆ, ಭೂಮಿಯ ಮಣ್ಣು ಸಿಮೆಂಟ್ ರೀತಿ ಆಗಿದ್ದು, ಬೆಳೆಗಳೆಲ್ಲಾ ನಾಶವಾಗಿ ಹೋಗಿದೆ; ಸುಮಾರು 12 ದಿನಗಳ ಕಾಲ ನೀರು ತುಂಬಿಕೊಂಡು, ಅಲ್ಲಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಿಯು ಯಾವುದೇ ಕೆಲಸಕ್ಕೆ ಬಾರದಂತೆ ಆಗಿದೆ. ಅವರು 2-3 ವರ್ಷಗಳ ಕಾಲ ಹೇಗೆ ಬದುಕಬೇಕು, ನೀವು ಅವರಿಗೆ ಏನು ಪರಿಹಾರ ಕೊಡುತ್ತೀರಿ?

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಕಂದಾಯ ಸಚಿವರು ಸರ್ಕಾರದ ಪರವಾಗಿ ಸುದೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಕೆಲವೊಂದು ತೃಪ್ತಿಯಾಗುವಂಥ ವಿಚಾರಗಳನ್ನೂ ಕೂಡ ವ್ಯಕ್ತಮಾಡಿದ್ದಾರೆ. ನಾನು ಮಾತನಾಡುವಂಥ ಸಂದರ್ಭದಲ್ಲಿ, ಒಳ್ಳೆಯ ಕೆಲಸ ಮಾಡಿರುವುದಕ್ಕೆ ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳಿದ್ದೇನೆ. ಈಗಾಗಲೇ ಮಾನ್ಯ ಕಂದಾಯ ಸಚಿವರು ಹೇಳಿದರು. ಅಧಿಕಾರಿಗಳ ಬಗ್ಗೆ ನಾನು ನಿನ್ನೆ ಮಾತನಾಡಿದೆ, ಇವತ್ತು ಕೂಡ ಹೇಳುತ್ತೇನೆ: By and large, ಈ ನೆರೆ ಹಾವಳಿಯಲ್ಲಿ ಕೆಲಸ ಮಾಡಿರುವಂಥ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಹಿಡಿದು, ಕೊನೆಯ ಹಂತದ ಸಿಬ್ಬಂದಿಯವರೆಗೂ ಕೂಡ ಅವರು ಅದರಲ್ಲಿ involve ಆಗಿ ಬಹಳ ಪ್ರಾಮಾಣಿಕವಾಗಿ ಬದ್ಧತೆಯಿಂದ ಮತ್ತು ನಿಷ್ಠೆಯಿಂದ ತಮ್ಮ ಮನೆ, ಹೆಂಡತಿ-ಮಕ್ಕಳನ್ನು ಬಿಟ್ಟು ಅವರು ಕೆಲಸ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರಿಗೆ ಅಭಿನಂದಿಸಬೇಕಾಗುತ್ತದೆ. All have done a wonderful job. ಮಾನ್ಯ ಸಚಿವರು ಹೇಳಿದರು, ಬಹಳ ಕಡೆ ಬರ. . .

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಅದೇ ರೀತಿ ಬಹಳಷ್ಟು ಜನ ಸ್ವಯಂಪ್ರೇರಿತರಾಗಿ ಬಂದು ಸಹಾಯ ಮಾಡಿದ್ದಾರೆ. ಯಾರ್ಯಾರು ಸ್ವಯಂ ಪ್ರೇರಿತರಾಗಿ ಸಹಾಯ ಮಾಡಿದ್ದಾರೆ; ದುಡ್ಡು ಕೊಟ್ಟಿದ್ದಾರೆ, ಬಟ್ಟೆ ಕೊಟ್ಟಿದ್ದಾರೆ, ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಹಣ ಕೊಟ್ಟಿದ್ದಾರೆ ಅವರಿಗೂ ಕೂಡ ನಾನು ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಪರವಾಗಿ ಧನ್ಯವಾದಗಳನ್ನು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರೇ, ಅದರ ಬಗ್ಗೆ ನಾನು ನಂತರ ಹೇಳುತ್ತೇನೆ. ನೆರೆ ಬಂದು ಕಷ್ಟದಲ್ಲಿ ಇರತಕ್ಕಂಥ ಸಂದರ್ಭದಲ್ಲಿ ಗ್ರಾಮದಲ್ಲಿ ಇರತಕ್ಕಂಥವರು ನೇರವಾಗಿ ಅಲ್ಲಿಗೆ ಧಾವಿಸಿ ಬಂದು ರಕ್ಷಣಾ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. NDRF (National Disaster Response Force), SDRF (State Disaster Response Force), ಡಿಫೆನ್ಸ್ ಟೀಂ ಆಗಲಿ ಅಥವಾ ವಾಯುಪಡೆಯವರಾಗಲಿ ಅವರೆಲ್ಲರೂ ರಕ್ಷಣೆ ಮಾಡಲು ಕೈಜೋಡಿಸಿದ್ದಾರೆ. ಅದರ ಜೊತೆಗೆ ನನಗೆ ತಿಳಿದಿರುವಂತೆ, ಕಷ್ಟದಲ್ಲಿರತಕ್ಕಂಥ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಂಗಳೂರಿನಿಂದ ಅನೇಕ ಜನಪ್ರತಿನಿಧಿಗಳು ಎರಡು ಲೋಡ್, ಮೂರು ಲೋಡ್, ನಾಲ್ಕು ಲೋಡ್, ಐದು ಲೋಡ್ ಮತ್ತು ಹತ್ತು ಲೋಡ್ ದವಸ ಧಾನ್ಯಗಳನ್ನು ಕೊಟ್ಟಿದ್ದಾರೆ. ಬಟ್ಟೆಬರೆಗಳನ್ನು ಕೊಟ್ಟಿದ್ದಾರೆ. ಪ್ರತಿನಿತ್ಯ ಉಪಯೋಗ ಮಾಡತಕ್ಕಂಥ ವಸ್ತುಗಳನ್ನು ಕಳುಹಿಸಿದ್ದಾರೆ. ನಿಜವಾಗಿಯೂ ಸರ್ಕಾರಕ್ಕಿಂತ, ಎಷ್ಟೋ ಪಟ್ಟು ಹೆಚ್ಚು ದಾನಿಗಳು ಹೃದಯ ಶ್ರೀಮಂತಿಕೆಯಿಂದ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮದಿಂದ ಜಾತಿ, ಮತ, ಪಂತ, ಪಂಗಡ ಇವೆಲ್ಲವುಗಳನ್ನೂ ಮೀರಿ ನಮಗೆ ಸಹಾಯ ಮಾಡಿದ್ದಾರೆ. ಮಾಧ್ಯಮದವರು ಕೂಡ ಚೆನ್ನಾಗಿ ಕೆಲಸ ಮಾಡಿ ಸರ್ಕಾರಕ್ಕೆ ಚುರುಕು ಮುಟ್ಟಿಸುವುದರ ಜೊತೆಗೆ, ಜನಪ್ರತಿನಿಧಿಗಳೆಲ್ಲಾ ಪಕ್ಷಾತೀತವಾಗಿ ಪ್ರವಾಹ ಪರಿಸ್ಥಿತಿಯನ್ನು ನಿಗ್ರಹಿಸುವಲ್ಲಿ ಭಾಗಿಯಾಗಿ ಬಹಳ ಅದ್ಭುತವಾದಂಥ ಸೇವೆಯನ್ನು ಮಾಡಿದ್ದಾರೆ. ಇವತ್ತು ನಾನು ಪ್ರತಿ ಪಕ್ಷ ಸ್ಥಾನದಲ್ಲಿ ನಿಂತುಕೊಂಡು ಹೇಳುವುದೇನೆಂದರೆ, ಸಹಾಯ ಮಾಡಿರುವ ಎಲ್ಲರಿಗೂ ಅವರ ಹೃದಯ ಶ್ರೀಮಂತಿಕೆಗೆ ಮತ್ತು ಕರ್ತವ್ಯವನ್ನು ಸರಿಯಾಗಿ ನಿಭಾಯಿಸಿದ್ದಕ್ಕಾಗಿ ನಾನು ಎಲ್ಲರಿಗೂ ಹೃದಯ ಪೂರ್ವಕವಾದಂತಹ ಕೃತಜ್ಞತೆ ಮತ್ತು ಅಭಿನಂದನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನೇಕಾರರ ಸಲುವಾಗಿ ಬಾಗಲಕೋಟೆಗೆ ಬಂದಿದ್ದಾಗ ನಾವು ಏನು ಕೇಳಿದೆವೆಂದರೆ, ಬಹುತರವಾಗಿ ರಾಜ್ಯದಲ್ಲಿ 1/3 ರಷ್ಟು ನೇಕಾರರು ನಮ್ಮ ಜಿಲ್ಲೆಯವರೇ ಇದ್ದಾರೆ. ಮಾನ್ಯ ಕೆ.ಸಿ.ಕೊಂಡಯ್ಯನವರೇ ಇದನ್ನು ಸ್ಪಷ್ಟಪಡಿಸಬೇಕು. ಅಲ್ಲಿ ನೆರೆ ಬಂದು ಮಗ್ಗಗಳು ನೀರಿನಲ್ಲಿ ತೇಲಿಕೊಂಡು ಹೋಗಿವೆ. ಕಚ್ಚಾವಸ್ತುಗಳೆಲ್ಲಾ ನೀರಿನಲ್ಲಿ ಮುಳುಗಿವೆ. ವಿದ್ಯುತ್‌ಚಾಲಿತ ಮಗ್ಗಗಳಿಗೆ (Power Loom) 25 ಸಾವಿರ ರೂಪಾಯಿಗಳಷ್ಟು ಪರಿಹಾರ ಕೊಡಲಾಗುವುದೆಂದು ಘೋಷಣೆ ಮಾಡಲಾಗಿದೆ. ಕೈಮಗ್ಗ ಮತ್ತು ಕುಣಿ ಮಗ್ಗಗಳು ನಮ್ಮ ಭಾಗದಲ್ಲಿ ಬಹಳಷ್ಟು ಇವೆ. ಆದರೆ, ಅವರಿಗೆ ಮಾತ್ರ ಯಾವುದೇ ರೀತಿಯ ಪರಿಹಾರ ಸಿಕ್ಕಿಲ್ಲ. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರು ವಿದ್ಯುತ್‌ಚಾಲಿತ ಮಗ್ಗಗಳಿಗೆ 25 ಸಾವಿರ ರೂಪಾಯಿಗಳಷ್ಟು ಪರಿಹಾರ ನೀಡಲು ಸ್ಪಂದಿಸಿದ್ದಾರೆ. ಅಷ್ಟೇ ಅಲ್ಲದೇ ಬಹಳಷ್ಟು ಅಧಿಕಾರಿಗಳು ಕಾನೂನಿನ ಬಗ್ಗೆ ಹೇಳಿದ್ದಾರೆ. ಕೈಮಗ್ಗಗಳು ಮತ್ತು ಕುಣಿಮಗ್ಗಗಳಿವೆಯೆಲ್ಲಾ, ಅವರಿಗೂ ಕೂಡ ಸೂಕ್ತ ಪರಿಹಾರ ಘೋಷಣೆ ಮಾಡಬೇಕು. ಏಕೆಂದರೆ, ಅವರೇ ಬಹಳ ಸಂಖ್ಯೆಯಲ್ಲಿದ್ದಾರೆ.

**(ಮುಂದು...)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(204)12.10.2019/2.10/ಎಂ.ಎಂ-ಕೆ.ಎಸ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್. ಅಶೋಕ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡಿದ್ದೇನೆ, Power loom and Handloom ಎರಡಕ್ಕೂ 25,000 ರೂಪಾಯಿಗಳನ್ನು ಕೊಡುತ್ತೇವೆ. ಕೇಂದ್ರಸರ್ಕಾರದ ನಾರ್ಮ್ಸ್ ಪ್ರಕಾರ ಪವರ್ ಲೂಮ್‌ಗಿಲ್ಲ, ಹ್ಯಾಂಡ್‌ಲೂಮ್‌ಗೆ ಕೇವಲ 8,000 ರೂಪಾಯಿ ಇದೆ. ಪವರ್ ಲೂಮ್ ಮತ್ತು ಹ್ಯಾಂಡ್‌ಲೂಮ್ ಎರಡಕ್ಕೂ 25,000 ರೂಪಾಯಿಗಳನ್ನು ಕೊಡಲು ಮುಖ್ಯಮಂತ್ರಿಗಳು ಒಪ್ಪಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ:-** ಮಾನ್ಯ ಸಚಿವರಿಗೆ ಧನ್ಯವಾದಗಳು. ನೇಕಾರರ ಪರವಾಗಿ ಮುಖ್ಯಮಂತ್ರಿಯವರು ಒಮ್ಮೆ ಹೇಳಿದರು;

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ):-** Money Bill pass ಆಗುವುದಕ್ಕೆ ನಮಗೆ ಸಹಕಾರ ಕೊಡಿ.

**ಶ್ರೀ ಎಸ್.ಆರ್. ಪಾಟೀಲ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ರಾಷ್ಟ್ರೀಯ ಪಕ್ಷದವರು, Money Bill ಅನ್ನು pass ಮಾಡಿಕೊಡುವುದು ನಮ್ಮ ಆದ್ಯ ಕರ್ತವ್ಯ. ನಾವು ಅದಕ್ಕೆ ಅಡ್ಡ ಬರುವುದಿಲ್ಲ. ಇಲ್ಲಿ ನಮ್ಮ ಕಾಂಗ್ರೆಸ್ ಪಕ್ಷದವರೇ 38 ಮಂದಿ ಇದ್ದೇವೆ. ನಮ್ಮದು ದೈತ್ಯ majority ಇದೆ, ನಮಗೆ ಪ್ರಜ್ಞೆ ಇದೆ. ನಾವು ರಾಷ್ಟ್ರೀಯ ಪಕ್ಷ. Money Bill ಅನ್ನು defeat ಮಾಡಿದರೆ ನಮಗೇ ಕೆಟ್ಟ ಹೆಸರು ಬರುತ್ತದೆ. ನಾವು ಅಂತಹ ಕೆಲಸಕ್ಕೆ ಹೋಗುವುದಿಲ್ಲ. ನಾವು ಶತಮಾನಗಳ ಇತಿಹಾಸ ಇರುವ ಒಂದು ರಾಷ್ಟ್ರೀಯ ಪಕ್ಷ. ಜಾತ್ಯಾತೀತ, Secular Party ನಮ್ಮದು. ಇಡೀ ರಾಷ್ಟ್ರದ ಜನತೆಗೆ ಕಲ್ಯಾಣ ಮಾಡುವಂತಹ ಪಕ್ಷ ನಮ್ಮದು. ನಾವು ಬಹಳಷ್ಟು ವರ್ಷಗಳ ಕಾಲ ಆಡಳಿತದಲ್ಲಿ ಇದ್ದವರು.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಮೇಜು ಕುಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಇಡೀ ರಾಷ್ಟ್ರದ ಜನತೆಗೆ ಕಲ್ಯಾಣ ಮಾಡುವಂತಹ ಪಕ್ಷ ನಮ್ಮದು. ನಾವು ಬಹಳಷ್ಟು ವರ್ಷಗಳ ಕಾಲ ಆಡಳಿತದಲ್ಲಿ ಇದ್ದವರು. ಇದರ ಬಗ್ಗೆ ಬಹಳಷ್ಟು ನುರಿತುಕೊಂಡವರು ಮತ್ತು ಅರಿತುಕೊಂಡವರಾಗಿದ್ದೇವೆ. ರಾಜ್ಯದ ಮೇಲೆ ಏನು ದುಷ್ಪರಿಣಾಮ ಆಗುತ್ತಿದೆ ಎನ್ನುವುದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Treasury benchನಲ್ಲಿ ಕುಳಿತಿರುವವರಿಗಿಂತ ಹೆಚ್ಚು ಕಾಳಜಿ ನಮಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ತಾವು ಬೆಳೆಗಳಿಗೆ ಕೆಲವು ನಾರ್ಮ್ಸ್‌ಗಳನ್ನು ಹೇಳಿದಿರಿ. ಇವತ್ತು ಮಳೆಯಾಶ್ರಿತ ಬೆಳೆಗಳಿಗೆ 6,800 ರೂಪಾಯಿ ಇದ್ದುದನ್ನು 16,800 ರೂಪಾಯಿ ಮಾಡಿದ್ದೀರಿ, ನೀರಾವರಿ ಬೆಳೆಗಳಿಗೆ ಹೆಕ್ಟೇರ್‌ಗೆ 13,500 ರೂಪಾಯಿ ಇದ್ದುದನ್ನು 23,500 ರೂಪಾಯಿಗೆ, Plantation crops ಗೆ 18,000 ರೂಪಾಯಿ ಇದ್ದುದನ್ನು 25,000 ರೂಪಾಯಿಗಳಿಗೆ ಹೆಚ್ಚಳ ಮಾಡಿದ್ದೀರಿ. ಹೀಗೆ ಮಾಡುವುದರಿಂದ ಮಳೆಯಾಶ್ರಿತ ಇದ್ದವರಿಗೆ ಪ್ರತಿ ಎಕರೆಗೆ ಆರೂವರೆ ಸಾವಿರ ರೂಪಾಯಿ ಸಿಗುತ್ತದೆ. ಮಳೆಯಾಶ್ರಿತ ಹಾಗೂ ನೀರಾವರಿ ಬೆಳೆಗಳಿಗೆ 10,000 ರೂಪಾಯಿಗಳಷ್ಟು ಹೆಚ್ಚಿಸಲಾಗಿದೆ. ಉಪಮುಖ್ಯಮಂತ್ರಿಯವರಾದ ಶ್ರೀ ಗೋವಿಂದ ಕಾರಜೋಳರವರು ನಮ್ಮ ಜಿಲ್ಲೆಯವರಾಗಿದ್ದು ಅವರ ಕ್ಷೇತ್ರದಿಂದ ಒಂದು ಕಬ್ಬಿನ ಗಳವನ್ನೂ ಕೊಡುವುದಿಲ್ಲ, ಪೂರ್ತಿ ಮುಳುಗಿದೆ. ನಾವೆಲ್ಲಾ ಕಬ್ಬು ಬೆಳೆಗಾರರು. ನೀವು ಇತಿಮಿತಿಯಲ್ಲಿ ಕೆಲಸ ಮಾಡಿದ್ದೀರಿ. ನಿಮಗೊಂದು ಪ್ರಶ್ನೆ ಕೇಳಿದ್ದೆ. 30 ಜಿಲ್ಲೆಗಳಲ್ಲಿ 22 ಜಿಲ್ಲೆಗಳು 103 ತಾಲ್ಲೂಕು ಬಹುತರವಾಗಿ ಅಂದರೆ ರಾಜ್ಯದ ¾ ಅಂಶ ನೀರಿನಲ್ಲಿ ಮುಳುಗಿದೆ. ಇಂಥಹದ್ದು 1914ರಲ್ಲಿ ಬ್ರಿಟಿಷರು ನಮ್ಮನ್ನು ಆಳುವಂತಹ ಸಂದರ್ಭದಲ್ಲಿ, Colonial Government ಇದ್ದಾಗ ದೊಡ್ಡ ಮಹಾಪೂರವಾಗಿತ್ತು, ಅದನ್ನು ಹೇಳಲು ಈಗ ನಮ್ಮ ಹಿರಿಯರು ಯಾರು ಉಳಿದಿಲ್ಲ. ಆದರೆ ಅವರು marking stone ಬಿಟ್ಟು ಹೋಗಿದ್ದಾರೆ. ದಿನಾಂಕ 08-08-1914 ಎಂದು ಜಮಖಂಡಿ ತಾಲ್ಲೂಕಿನಲ್ಲಿ ಕಲ್ಲುಗಳನ್ನು ನೆಡಿಸಿದ್ದಾರೆ. ಇದೆಲ್ಲಾ ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ಆಗಿದೆ, ಅದನ್ನು ದಾಟಿ ನೀರು ಬಂದಿದೆ. ಶತಮಾನದಲ್ಲಿ ಕಂಡರಿಯದ, ಕೇಳರಿಯದ, ಊಹಿಸಿಕೊಳ್ಳಲಾರದ, ಊಹೆಗೆ ಮೀರಿ ಮಹಾರಾಷ್ಟ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಮಳೆಯಾಗಿ ಮಲಪ್ರಭ, ಕೃಷ್ಣ, ದೂಧಗಂಗಾ, ವೇದಗಂಗಾ, ಮಾರ್ಕಂಡೇಯ ಎಲ್ಲಾ ನದಿಗಳು ತುಂಬಿ ಹರಿದು ನಿರೀಕ್ಷೆ ಮೀರಿ 5 ಲಕ್ಷ ಕ್ಯುಸೆಕ್ಸ್ ನೀರಿನ ಬದಲಾಗಿ 9 ಲಕ್ಷ ಕ್ಯುಸೆಕ್ಸ್ ನೀರು ಬಂದು ದೊಡ್ಡ ಪ್ರಮಾಣದ ಹಾನಿ ಆಗಿದೆ, ಬೆಳೆಗಳು ಸರ್ವನಾಶವಾಗಿವೆ. ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಘಟನೆ ನಡೆದಾಗ ನಾವು ಒಂದು ಬೇಡಿಕೆ ಇಟ್ಟಿದ್ದೆವು. ಮಾನ್ಯ ಸದಸ್ಯರಾದ ರಮೇಶ್‌ರವರು ಹೇಳಿದ ಹಾಗೆ ನಾನೂ ಹೇಳಿದ್ದೆ ಇದನ್ನು "ರಾಷ್ಟ್ರೀಯ ವಿಪತ್ತು" ಎಂದು ಘೋಷಣೆ ಮಾಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಪಕ್ಷಾತೀತವಾಗಿ ನಾವೆಲ್ಲರೂ ಒಪ್ಪುತ್ತೇವೆ, ಇದನ್ನು resolution ಮಾಡಿ ಕಳುಹಿಸಲಿಲ್ಲ, ಒಂದು ಠರಾವು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೆ ನಮಗೆ ಸಹಾಯವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಇದನ್ನು National Calamity ಎಂದು ಘೋಷಣೆ ಮಾಡಬೇಕು. ನನ್ನ 45 ವರ್ಷಗಳ ಸಾರ್ವಜನಿಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬದುಕಿನಲ್ಲಿ, 7 ದಶಕಗಳ ನನ್ನ ಜೀವಿತಾವಧಿಯಲ್ಲಿ ಕೂಡ ನಾನು ಇಂಥಹದ್ದನ್ನು ಕೇಳಿಲ್ಲ. ಅಷ್ಟು ದೊಡ್ಡ ಪ್ರಮಾಣದಲ್ಲಿ ನೆರೆ ಹಾವಳಿ ಆಗಿದೆ. ಉತ್ತರ ಕರ್ನಾಟಕದ 13 ಜಿಲ್ಲೆಗಳಲ್ಲಿ ಬೀದರ್ ಜಿಲ್ಲೆಯೊಂದನ್ನು ಹೊರತುಪಡಿಸಿ ಉಳಿದ 12 ಜಿಲ್ಲೆಗಳು ನೀರಿನಲ್ಲಿ ಮುಳುಗಿವೆ. ಕರ್ನಾಟಕದ ಉಳಿದ 17 ಜಿಲ್ಲೆಗಳಲ್ಲಿ 10 ಜಿಲ್ಲೆಗಳು ನೀರಿನಲ್ಲಿ ಮುಳುಗಿವೆ. ಬಹುತೇಕ ಕರ್ನಾಟಕವೇ ಸಂಪೂರ್ಣ ಮುಳುಗಿದೆ ಎಂದರೆ ತಪ್ಪಾಗುವುದಿಲ್ಲ. ಲಕ್ಷಾಂತರ ಮನೆಗಳು ಕೊಚ್ಚಿಕೊಂಡು ಹೋಗಿವೆ, 25-30 ಲಕ್ಷ ಎಕ್ಕರೆ ಭೂಮಿಯಲ್ಲಿರುವಂತಹ ಬೆಳೆಗಳು ಸರ್ವನಾಶವಾಗಿವೆ. ಲಕ್ಷಾಂತರ ಜನರು ಮನೆ, ಮಠ, ಆಸ್ತಿ-ಪಾಸ್ತಿ ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ, ತಲೆಯ ಮೇಲೆ ಗಡಿಗೆಯನ್ನು ಹೊತ್ತುಕೊಂಡು ಬೀದಿಗೆ ಬಂದಿದ್ದಾರೆ. ರಾತ್ರಿ 12 ಗಂಟೆಗೆ ಮನೆಯೊಳಗೆ ನೀರು ಬಂದಿದೆ, ಮನೆಯಲ್ಲಿದ್ದ essential commodities ಆದಂತಹ ದವಸ-ಧಾನ್ಯ, ಪಾತ್ರೆ-ಪಗಡೆಗಳೆಲ್ಲಾ ತೇಲಿಕೊಂಡು ಹೋಗಿವೆ, ಒಕ್ಕಲುತನದ ಉಪಕರಣಗಳು, ರೈತರ ಪಂಪ್‌ಸೆಟ್‌ಗಳು ತೇಲಿಕೊಂಡು ಹೋಗಿವೆ. ಇಷ್ಟು ದೊಡ್ಡ ಪ್ರಮಾಣದ ಹಾನಿ ಉಂಟಾಗಿದೆ. ಜನರು ಮನೆಯಿಂದ ಹೊರಗೆ ಬಂದರೆ ಸಾಕಾಗಿತ್ತು, ಹೆಣ್ಣುಮಕ್ಕಳು ಉಟ್ಟ ಸೀರೆಯಲ್ಲಿ ಹೊರಗೆ ಬಂದಿದ್ದಾರೆ, ಪುರುಷರು ಅಂಗಿಯಲ್ಲಿಯೇ ಮನೆಯಿಂದ ಹೊರಗೆ ಬಂದಿದ್ದಾರೆ, ಮತ್ತೊಂದು ಬಟ್ಟೆ ಹಾಕಿಕೊಂಡು ಬರಲಾಗದೇ, ಮೊದಲು ಜೀವ ಉಳಿದರೆ ಸಾಕೆಂದು ಹೇಗಿದ್ದರೋ ಹಾಗೆ ಹೊರಗೆ ಬಂದಿದ್ದಾರೆ, ಅದನ್ನು ಸ್ವತಃ ನಾನು ನೋಡಿದ್ದೇನೆ ಅದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾದಾಗ ಇದೊಂದು 'National Calamity' 'ರಾಷ್ಟ್ರೀಯ ವಿಪತ್ತು' ಎಂದು ಇದನ್ನು ಘೋಷಣೆ ಮಾಡುವುದಕ್ಕೆ ಅನುಕೂಲವಾಗಲಿ ಎಂದು ತಮಗೆ ಮನವಿ ಮಾಡಿಕೊಳ್ಳುತ್ತೇನೆ. 35,000 ಕೋಟಿ ರೂ.ಗಳಷ್ಟು ಹಾನಿಯಾಗಿ 1200 ಕೋಟಿ ಮಾತ್ರ ಬಂದಿದೆ. ಇದನ್ನು National calamity ಅಂದರೆ ರಾಷ್ಟ್ರೀಯ ವಿಪತ್ತು ಎಂದು ಘೋಷಣೆ ಮಾಡಿದರೆ ಹೆಚ್ಚಿನ ಹಣ ಬರುತ್ತದೆ. ಅವರು 10,000 ಕೋಟಿ ರೂಪಾಯಿ ಕೊಡಬಹುದು, ನೀವು 10,000 ಕೋಟಿ ರೂಪಾಯಿ ಹಾಕಿದರೆ 20,000 ಕೋಟಿ ರೂಪಾಯಿ ಆಗುತ್ತದೆ, ಅದನ್ನು ನೆರೆಯಲ್ಲಿ ಸಿಲುಕಿಕೊಂಡಿರುವವರ ರಕ್ಷಣೆಗೆ ಉಪಯೋಗ ಮಾಡಿದರೆ ಮಾನ್ಯ ಮುಖ್ಯಮಂತ್ರಿಯವರೇ, ನನಗೆ ತಮ್ಮ ಮೇಲೆ ಗೌರವವಿದೆ, ಹಿರಿಯರಾಗಿದ್ದೀರಿ ಮತ್ತು ಶ್ರೀ ಎಸ್.ನಿಜಲಿಂಗಪ್ಪನವರು 4ನೇ ಬಾರಿ ಮುಖ್ಯಮಂತ್ರಿಯಾಗಿದ್ದ ದಾಖಲೆಯನ್ನು ತಾವು ಸರಿಗಟ್ಟಿದ್ದೀರಿ. ತಮ್ಮ ಮೇಲೆ ನನಗೆ ವಿಶೇಷವಾದ ಗೌರವವಿದೆ. ತಾವೇನು ಹಾಗೇ ಬಂದು ಕುರ್ಚಿಯ ಮೇಲೆ ಕುಳಿತಿಲ್ಲ, ಹೋರಾಟದಿಂದ ಬಂದವರು. ನಿಮ್ಮ ಕಾಲಕ್ಕೆ ಇದು ಆಗಲಿ ಎಂಬುದು ನನ್ನ ಅಪೇಕ್ಷೆ. ರಾಜ್ಯದ ಜನರು ತಮ್ಮನ್ನು ನೆನಪಿಸಿಕೊಳ್ಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು ಸತ್ತು ಹೋದರೆ ಜನರು ಅವರ ಮಕ್ಕಳಿಗೆ ಕರ್ನಾಟಕ ರಾಜ್ಯದಲ್ಲಿ 'ಯಡಿಯೂರಪ್ಪ' ಎಂಬ ಮುಖ್ಯಮಂತ್ರಿಯವರಿದ್ದರು, ಅವರು ಅದ್ಭುತವಾದ ಕೆಲಸ ಮಾಡಿ ಹೋದರು ಎಂದು ಹೇಳುತ್ತಾರೆ, ನಂತರ ಹುಟ್ಟಿದ ಮಕ್ಕಳಿಗೆ ನಿಮ್ಮ ಹೆಸರಿಡುವ ಮಟ್ಟಕ್ಕೆ ಇದರಿಂದ ಹೆಸರು ಬರುತ್ತದೆ. ಅದಕ್ಕೇ ನಾನು ಹೇಳುವುದೇನೆಂದರೆ, ಕೇಂದ್ರ ಸರ್ಕಾರ 10,000 ಕೋಟಿ ರೂಪಾಯಿ ಕೊಡಲಿ ನೀವು 10,000 ಕೋಟಿ ರೂಪಾಯಿಯನ್ನು ರಾಜ್ಯ ಸರ್ಕಾರದಿಂದ ಹಾಕಿದರೆ ಅದ್ಭುತವಾದ ಕೆಲಸವಾಗುತ್ತದೆ. ಎರಡೂವರೆ ಲಕ್ಷ ಕೋಟಿ ರೂಪಾಯಿ ರಾಜ್ಯದ ಬಜೆಟ್ ಇದೆ. ಅದಕ್ಕೆ ಸೀಮಿತವಾಗಿ 'ರಾಷ್ಟ್ರೀಯ ವಿಪತ್ತು' ಎಂದು ಘೋಷಣೆ ಮಾಡುವುದಕ್ಕೆ ನಾವು ಒಂದು ಠರಾವು ಮಾಡಿ ಕಳುಹಿಸೋಣ ಎಂಬುದೊಂದು ನನ್ನ ಬೇಡಿಕೆ ಇದೆ. ಇದರಲ್ಲಿ ರಾಜಕಾರಣ ಮಾಡುವಂತಹ ರಾಜಕಾರಣಿ ನಾವಂತೂ ಅಲ್ಲ. ನಮ್ಮ ಭಾಗದವರು, ಜೆ.ಡಿ.ಎಸ್. ನವರು ಯಾರೂ ಇದರಲ್ಲಿ ರಾಜಕಾರಣ ಮಾಡುವುದಿಲ್ಲ. ನಾವ್ಯಾರೂ ಇದರಲ್ಲಿ ಭಾಗಿಯಾಗುವುದಿಲ್ಲ. *"ಬಣವೆಗೆ ಬೆಂಕಿ ಹಚ್ಚಿದಾಗ ಮೆಕ್ಕೆತೆನೆ ಬೇಯಿಸಿಕೊಂಡರು"* ಎನ್ನುತ್ತಾರಲ್ಲ ಅಂತಹ ಕೆಲಸ ಮಾಡುವವರು ನಾವಲ್ಲ. ನಾವು ನಿಮಗೆ ಸಹಾಯ ಮಾಡುತ್ತೇವೆ, ಸಲಹೆ ಸೂಚನೆಗಳನ್ನು ಕೊಡುತ್ತೇವೆ. ನೀವು ಮಾಡುವ ಕೆಲಸಕ್ಕೆ ಹೆಗಲಿಗೆ ಹೆಗಲು ಜೋಡಿಸುತ್ತೇವೆ, ನಿಮ್ಮ ಕೈಗಳಿಗೆ ಕೈ ಜೋಡಿಸಿ ಈ ನೆರೆ ಹಾವಳಿಯಿಂದ ನೊಂದು ಬೆಂದಿರುವ ಜನರಿಗೆ ಸಹಕಾರಿಯಾಗುವುದಕ್ಕೆ ನಾವು ಎಲ್ಲಾ ರೀತಿಯ ಸಹಕಾರ ಮಾಡುವಂತಹ ಹೃದಯ ಶ್ರೀಮಂತಿಕೆಯುಳ್ಳ ಶಾಸಕರಾಗಿದ್ದೇವೆ. ಜಾತ್ಯಾತೀತ ಜನತಾ ದಳದವರಿರಬಹುದು ಅಥವಾ ನಮ್ಮ ಪಕ್ಷದವರಿರಬಹುದು ಇದನ್ನು ದುರುಪಯೋಗ ಪಡಿಸಿಕೊಳ್ಳುವಂತಹ ಸಣ್ಣ ಮನಸ್ಸಿನವರು, ಕೀಳು ಮನಸಿನವರು, ಹೃದಯಹೀನರು ನಾವಲ್ಲ, ನಾವೆಲ್ಲರೂ ಹೃದಯ ಶ್ರೀಮಂತಿಕೆಯವರು. My words are not from the tip of my tongue; it is from the bottom of my heart. ಹೃದಯದ ಅಂತರಾಳದಿಂದ ಬಂದಂತಹ ಮಾತುಗಳನ್ನು ನಿಮಗೆ ಹೇಳುತ್ತಿದ್ದೇನೆ.

(ಮುಂದು . . .

(205) 12-10-2019 /2-20/ಕೆಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-** ಎರಡನೆಯದಾಗಿ, ಕಳೆದ ಸರ್ಕಾರದಲ್ಲಿ ಅಂದರೆ ಸಮ್ಮಿಶ್ರ ಸರ್ಕಾರದಲ್ಲಿ ಕೊಡಗು ಜಿಲ್ಲೆಯಲ್ಲಿ ನೆರೆ ಬಂದು ಮನೆಗಳು ಮುಳುಗಿ ನಾಶವಾದಾಗ ಪುಕ್ಕಟೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿವೇಶನವನ್ನು ಕೊಡಲಾಗಿದೆ. ಹಾಗೆಯೇ, ಪರಿಹಾರವಾಗಿ ಪ್ರತಿ ಮನೆಗೆ ಒಂಭತ್ತು ಲಕ್ಷದ ಎಂಭತ್ತೈದು ಸಾವಿರ ರೂಪಾಯಿಗಳನ್ನು ಪುಕ್ಕಟೆಯಾಗಿ ಕೊಡಲಾಗಿದೆ. ನಿವೇಶನದಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಆಗ ಇನ್ನು ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದಿರಲಿಲ್ಲ. ಈ ಸರ್ಕಾರದಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟರೆ, 15 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಂತಾಗುತ್ತದೆ. ಈ ಸರ್ಕಾರಕ್ಕೆ ಇನ್ನು ಒಳ್ಳೆಯ ಹೆಸರು ಬರುತ್ತದೆ. ಮೊದಲು 'ಎ' ಕ್ಯಾಟಗರಿ ಮನೆಗಳ ಜೊತೆಗೆ 'ಬಿ' ಕ್ಯಾಟಗರಿ ಮನೆಗಳನ್ನು ಒಟ್ಟಾಗಿ ಸೇರಿಸಿರಲಿಲ್ಲ. ಅಂದರೆ, ಶೇಕಡ 25 ರಿಂದ 75 ರಷ್ಟು ಅರ್ಧಂಬರ್ಧ ನಾಶವಾದ ಮನೆಗಳಿಗೆ ಮೊದಲು ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಲಾಗಿತ್ತು. ಆದರೆ, ಈಗ ಒಂದು ಲಕ್ಷ ರೂಪಾಯಿಗಳ ಬದಲು ಐದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. I welcome it. Wholeheartedly, I welcome your decision. ಈಗ 'ಎ' ಮತ್ತು 'ಬಿ' ಕ್ಯಾಟಗರಿ ಮನೆಗಳನ್ನು ಒಟ್ಟಿಗೆ ಸೇರಿಸಲಾಗಿದೆ. ನಂತರ 'ಸಿ' ಕ್ಯಾಟಗರಿ ಮನೆಗಳಿಗೆ ಅಂದರೆ ಶೇಕಡ 25 ರಿಂದ 50 ರಷ್ಟು ನಾಶವಾದ ಮನೆಗಳಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಲಾಗಿತ್ತು. ಈಗ 50 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಲಾಗಿದೆ. I welcome it. ನೀವು ಒಳ್ಳೆಯದನ್ನು ಮಾಡಿದರೆ, ನಾವು ಒಳ್ಳೆಯದನ್ನು ಮಾಡಿದ್ದಾರೆ ಎಂದು ಹೇಳುತ್ತೇವೆ. ನಾವು ವಿರೋಧ ಪಕ್ಷದಲ್ಲಿದ್ದು ಟೀಕೆ ಮಾಡುವುದಕ್ಕೆ ಮಾತ್ರ ಇರುವುದಿಲ್ಲ. ನಾವು ರಚನಾತ್ಮಕವಾದ ಟೀಕೆಯನ್ನು ಮಾಡುತ್ತೇವೆ. We will criticise constructively, not destructively. ಆ ದೃಷ್ಟಿಯಿಂದ ಸರ್ಕಾರವು ಒಂದು ಮನೆಗೆ ಐದು ಲಕ್ಷ ರೂಪಾಯಿಗಳ ಪರಿಹಾರ ಘೋಷಣೆ ಮಾಡಿದೆಯಲ್ಲವೇ, ಅದನ್ನು ಹತ್ತು ಲಕ್ಷ ರೂಪಾಯಿಗಳಿಗೆ ಏರಿಸಬೇಕೆಂದು ತಮ್ಮ ಮುಖಾಂತರ ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಸರ್ಕಾರವು ಪ್ರವಾಹ ಪೀಡಿತ ಜನರಿಗೆ 30X40 ನಿವೇಶನವನ್ನು ಕೊಡುತ್ತೇವೆಂದು ಹೇಳಲಾಗಿದೆಯಲ್ಲವೇ, ಅವರಿಗೆ 60X40 ನಿವೇಶನವನ್ನು ಕೊಡಿ. ರೈತರಿಗೆ ದನದ ಕೊಟ್ಟಿಗೆ ಬೇಕು, ಕೊಟ್ಟಿಗೆಯ ಕಸವನ್ನು ಹಾಕಲು ತಿಪ್ಪೆ ಗುಂಡಿಗೆ ಸ್ಥಳಬೇಕು, ಮೇವಿನ ಬಣವೆಗಾಗಿ ಸ್ಥಳ ಬೇಕು, ಜಾನುವಾರುಗಳನ್ನು ಬಿಟ್ಟು ಒಕ್ಕಲುತನವನ್ನು ಮಾಡುವುದಕ್ಕೆ ಆಗುವುದಿಲ್ಲ. ಕೊಡ್ಗಿ, ಕುಂಟೆ ಬೇಕಾಗುತ್ತದೆ, ಬೆಳೆಯ ಸಾಮಾನುಗಳನ್ನು ಇಟ್ಟುಕೊಳ್ಳುವುದಕ್ಕೆ ಸ್ಥಳ ಬೇಕಾಗುತ್ತದೆ. ನಮ್ಮ ಹಳ್ಳಿ ಭಾಷೆಯಲ್ಲಿ 'ದೊಡ್ಡಿ' ಎಂದು ಹೇಳುತ್ತಾರೆ. 2009ನೇ ಸಾಲಿನಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ದಾನಿಗಳಿಗೆ ಆಮಂತ್ರಣವನ್ನು ಕೊಟ್ಟಿದ್ದು, ಆಗ IT Personnel ಮತ್ತು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನಿತರ ದಾನಿಗಳು ದೊಡ್ಡ ಪ್ರಮಾಣದಲ್ಲಿ ಬಂದು ಮನೆಗಳನ್ನು ಕಟ್ಟಿಕೊಟ್ಟು ಹೋಗಿದ್ದರು. ಆದರೆ ಆ ಮನೆಗಳ ಬಾಗಿಲು ಮತ್ತು ಕಿಟಕಿ ಎಲ್ಲಾ ಕಿತ್ತು ಹೋಗಿದ್ದು, ಉಪಯೋಗಕ್ಕೆ ಬಾರದ ಸ್ಥಿತಿಯಲ್ಲಿದೆ. ಪ್ರವಾಹ ಪೀಡಿತ ಜನರಿಗೆ 30X40 ನಿವೇಶನದ ಬದಲು 60X40 ನಿವೇಶನವನ್ನು ಕೊಡಬೇಕು. ಬೆಂಗಳೂರು ನಗರದಲ್ಲಿ 30X40 ನಿವೇಶನದಲ್ಲಿ ಮನೆಯನ್ನು ಕಟ್ಟಿಸಿಕೊಂಡು ಬದುಕಬಹುದು. ಆದರೆ, ಅಲ್ಲಿ ಆ ರೀತಿಯಾಗುವುದಿಲ್ಲ. ರೈತರು ಜಾನುವಾರುಗಳನ್ನು ಬಿಟ್ಟು ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ನಮ್ಮ ಜೊತೆಯಲ್ಲಿ ಜಾನುವಾರುಗಳು ಇರಬೇಕು, ನಾವು ಬಂಡಿಯನ್ನು ಇಟ್ಟುಕೊಳ್ಳಬೇಕು. ಒಕ್ಕಲುತನದ ಉಪಕರಣಗಳನ್ನು ಇಟ್ಟುಕೊಳ್ಳಬೇಕು. ದನದ ಕೊಟ್ಟಿಗೆ ಮಾಡಿಕೊಳ್ಳಬೇಕು. ಪ್ರವಾಹ ಪೀಡಿತ ಜನರಿಗೆ 30X40 ನಿವೇಶನದ ಬದಲು 60X40 ನಿವೇಶನವನ್ನು ಕೊಟ್ಟರೆ ಉಪಯೋಗವಾಗುತ್ತದೆ. ಇಲ್ಲದಿದ್ದರೆ, ತಾವು 30X40 ನಿವೇಶನವನ್ನು ಕೊಟ್ಟರೂ ಏನು ಉಪಯೋಗವಾಗುವುದಿಲ್ಲ. ನಿಜವಾಗಿಯೂ, ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಮಾತನ್ನು ಹೇಳುತ್ತೇನೆ. ಪ್ರವಾಹ ಪೀಡಿತ ಜನರಿಗೆ 30X40 ನಿವೇಶನವನ್ನು ಕೊಟ್ಟಹಾಗೆ ಆಗುತ್ತದೆ. ಆದರೆ ಯಾವುದೇ ಉಪಯೋಗಕ್ಕೂ ಬರುವುದಿಲ್ಲ. ಈಗ ರೈತ ಮನೆಯಲ್ಲಿ ವಾಸ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಸರ್ಕಾರದ ಕಡೆಯಿಂದ ಲಕ್ಷಾಂತರ ಮನೆಗಳನ್ನು ಕಟ್ಟಲಾಗಿದ್ದು, ಅಲ್ಲಿ ಒಬ್ಬರೂ occupy ಆಗಿಲ್ಲ. ಆ ದೃಷ್ಟಿಯಿಂದ ನಿವೇಶನದ ವಿಸ್ತೀರ್ಣವನ್ನು ಹೆಚ್ಚಿಗೆ ಮಾಡಬೇಕು.

ಈಗ ನೆರೆ ಹಾವಳಿಯಿಂದ ಬಾಧಿತವಾದ ಗ್ರಾಮಗಳಿಗೆ Airforce, NDRF team, SDRF team ಮತ್ತು ಇಡೀ ರಾಜ್ಯದ ಜನರು ಹೃದಯ ಶ್ರೀಮಂತಿಕೆಯಿಂದ ದಾನವನ್ನು ಕೊಡುತ್ತಿದ್ದಾರೆ. ಇದೇ ರೀತಿ ವರ್ಷ ಪೂರ್ತಿ ನಡೆಯುತ್ತಿದ್ದರೆ ಇವರುಗಳ ಗತಿ ಏನಾಗಬೇಕು? That's why I tell you, once for all, kindly shift all the villages, which have been affected by the flood. ಶೇಕಡಾ 50 ರಷ್ಟಕ್ಕಿಂತ ಹೆಚ್ಚು ಪರಿಣಾಮಕ್ಕೆ ಒಳಗಾದ ಗ್ರಾಮಗಳನ್ನು ಸುರಕ್ಷಿತವಾದ ಎತ್ತರದ ಸ್ಥಳಕ್ಕೆ ಸ್ಥಳಾಂತರಿಸಬೇಕು. Rehabilitate ಮಾಡಬೇಕು. ಯೋಜನಾಬಾಧಿತ ಪ್ರದೇಶದಲ್ಲಿ ಕೆಲಸ ನಿರ್ವಹಿಸಿರುವವರಿಗೆ ಇಂತಹ ಜಲಾಶಯದಲ್ಲಿ water impound ಮಾಡುತ್ತಾರೆ, ಇಂತಹ ದಿನ ನಮ್ಮ ಊರಿಗೆ ಮತ್ತು ಮನೆಗೆ ನೀರು ಬರುತ್ತದೆ ಎಂದು ಮೊದಲೇ ಗೊತ್ತಿರುತ್ತದೆ. ರಾತ್ರಿ 12.00 ಗಂಟೆಗೆ ಎಲ್ಲಾ ಜನರು ಮಲಗಿದ್ದಾಗ ಮನೆಗೆ ನೀರು ಹರಿದು ಬಂದು ತುಂಬಿಕೊಂಡಿತ್ತು. ಆ ಮನೆಯ ಮಾಳಿಗೆಯ ಮೇಲೆ 10 ರಿಂದ 15 ಅಡಿ ನೀರು ಹರಿದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದು ಇಡೀ ಊರು ಮುಳುಗಿ ಹೋಗಿದೆ. ಹಾಗೆಯೇ ಊರು ದಾಟಿ ಆಚೆಗೆ ಒಂದರಿಂದ ಎರಡು ಕಿ.ಮೀ ನೀರು ನಿಂತಿದೆ. ಬೋಟಿನಲ್ಲಿ ಬಂದು ಎಲ್ಲಾ ಜನರನ್ನು ಕಾಪಾಡಿದ್ದಾರೆ. ಹಾಗೆಯೇ, ಹೆಲಿಕ್ಯಾಪ್ಟರ್ ಮುಖೇನ ಕೆಲವು ಸಂತ್ರಸ್ತರನ್ನು ರಕ್ಷಿಸಲಾಗಿದೆ. ಇದನ್ನು ವರ್ಷಪೂರ್ತಿ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಮೊನ್ನೆಯ ದಿವಸವೇ ಚರ್ಚೆ ಮಾಡಿದ್ದೇನೆ. ಮತ್ತೆ ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಇದರ ಆಳಕ್ಕೆ ಹೋಗದೆ, ಕೇವಲ ಸ್ಪಷ್ಟತೆಗೋಸ್ಕರ ಮಾತನಾಡುತ್ತೇನೆ. Kindly shift all the villages, which have been affected majorly. ಊರಿನ ಅಗಸಿ ಬಾಗಿಲುವರೆಗೆ ನೀರು ಬಂದಿದೆಯೆಂದರೆ, ಇನ್ನೊಂದು ಬಾರಿ flood ಬಂದರೆ, ನೀರು ಆವರಿಸಿಕೊಂಡರೆ, ಈಗಾಗಲೇ ನಾವು ಹಲವಾರು ಗ್ರಾಮಗಳನ್ನು ಕಳೆದುಕೊಂಡಿದ್ದೇವೆ. ಅಂತಹ ಎಲ್ಲಾ ಗ್ರಾಮಗಳನ್ನು ಸುರಕ್ಷಿತವಾದ ಎತ್ತರದ ಸ್ಥಳಕ್ಕೆ ಸ್ಥಳಾಂತರಿಸಬೇಕು. ಹಾಗೆಯೇ, ಪುನರ್‌ವಸತಿ ಕೇಂದ್ರಕ್ಕೆ ಕಳುಹಿಸಿ, rehabilitate ಮಾಡಿ,

ಇದರ ಬಗ್ಗೆ ಒಂದು ಚಾರಿತ್ರಿಕವಾದ ಮತ್ತು ಐತಿಹಾಸಿಕವಾದ ನಿರ್ಣಯ ಮಾನ್ಯ ಮುಖ್ಯಮಂತ್ರಿಯವರ ಕಾಲದಲ್ಲಿ ಆಗುತ್ತದೆ ಎಂದು ತಪ್ಪು ಪರವಾಗಿ ಹೇಳುತ್ತಿದ್ದೇನೆ. ನಾನು ಸಮ್ಮನೆ ಉತ್ತೇಜಿಸುವುದಕ್ಕೆ ಹೋಗುವುದಿಲ್ಲ. ನಾನು ಇದಕ್ಕೆ ರಾಜಕಾರಣವನ್ನು ಬೆರೆಸದೇ ಮಾತನಾಡುತ್ತಿದ್ದೇನೆ. ಇದರಲ್ಲಿ ರಾಜಕಾರಣ ಬೆರೆಸುವ ಉದ್ದೇಶವಿಲ್ಲ. ಸರ್ಕಾರವು ಎಲ್ಲಾ ಗ್ರಾಮಗಳನ್ನು ಸ್ಥಳಾಂತರಿಸಬೇಕು. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಈಗಾಗಲೇ ಈ ರೀತಿ ಮಾಡಲಾಗಿದೆ. ಆ ಯೋಜನೆಯನ್ನು ಅನುಸರಿಸಿ valuation ಮಾಡಿ 60X40 ನಿವೇಶನವನ್ನು ಕೊಡಬೇಕು. 2009ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರಾದ ಬಿ.ಎಸ್.ಯಡಿಯೂರಪ್ಪನವರು ಅಧಿಕಾರದಲ್ಲಿದ್ದಾಗ ಭೂಮಿಯನ್ನು ಈಗಾಗಲೇ ಖರೀದಿ ಮಾಡಲಾಗಿದೆ. ಆ ಸ್ಥಳಕ್ಕೆ ಎಲ್ಲ ಜನರನ್ನು ಸ್ಥಳಾಂತರ ಮಾಡಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ಎತ್ತರದ ಪ್ರದೇಶಕ್ಕೆ ಹೋಗಿ ವಾಸ ಮಾಡಲು ತಯಾರು ಇರುವವರಿಗೆ rehabilitation ಮಾಡಿಕೊಡುತ್ತೇವೆ ಎಂದು clear-cut ಆಗಿ ಮಾನ್ಯ ಸಚಿವರು ಹೇಳಿದ್ದಾರೆ. ನಾವು ನಿವೇಶನವನ್ನು ಉಚಿತವಾಗಿ ಕೊಟ್ಟು, ಐದು ಲಕ್ಷ ರೂಪಾಯಿಗಳ ಪರಿಹಾರ ಮೊತ್ತವನ್ನು ಸಹ ಕೊಡುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪ್ರವಾಹ ಪೀಡಿತ ಜನರು ಆ ಎತ್ತರವಾದ ಪ್ರದೇಶಕ್ಕೆ ಹೋಗುವುದಿಲ್ಲವೆಂದು ಹೇಳಿದ್ದಾರೆಯೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ಎತ್ತರವಾದ ಪ್ರದೇಶಕ್ಕೆ ಬಹಳ ಜನರು ಹೋಗಿಲ್ಲ. ಹೋಗುವವರಿಗೆ ನಿವೇಶನ ಕೊಡುತ್ತೇವೆಂದು ಹೇಳಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಮಾಧುಸ್ವಾಮಿಯವರೇ, ಸರ್ಕಾರದಿಂದ ಕೊಟ್ಟಿರುವ 10 ಸಾವಿರ ರೂಪಾಯಿಗಳನ್ನು ಕೇಳುವವರೇ ದಿಕ್ಕಿಲ್ಲ. ಆ ರೀತಿ ಹೇಳುವುದಕ್ಕೆ ಹೋಗಬೇಡಿ. I am telling this in your own interest. ಎತ್ತರವಾದ ಪ್ರದೇಶಕ್ಕೆ ಯಾರು ಹೋಗುವುದಕ್ಕೆ ತಯಾರಿಲ್ಲವೆಂದರೆ ಹೇಗೆ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಕಾರ್ಪೋರೇಟ್‌ರವರು ಕಟ್ಟಿದ 8 ಸಾವಿರ ಮನೆಗಳು ಹಾಗೆಯೇ ಖಾಲಿ ಬಿದ್ದಿವೆ ಎಂಬುದು ತಮಗೂ ಗೊತ್ತಿದೆ. ಅದಕ್ಕೆ ನಾವು ಏನು ಮಾಡುವುದಕ್ಕೆ ಆಗುತ್ತದೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಮಾಧುಸ್ವಾಮಿಯವರೇ, ಎತ್ತರವಾದ ಪ್ರದೇಶಕ್ಕೆ ಅವರನ್ನು ಕಳುಹಿಸಬೇಕು. ಮತ್ತೆ ಅವರುಗಳು ಪ್ರವಾಹವಾದ ಪ್ರದೇಶದಲ್ಲಿಯೇ ಉಳಿದು, ಮತ್ತೆ ಆ ಸ್ಥಳ ಮುಳುಗಿದರೆ ತಮಗೆ ತಲೆನೋವಾಗಿ ಪರಿಣಮಿಸುತ್ತದೆ. ಯಾವುದೇ ಸರ್ಕಾರ ಬಂದರೂ ಕೂಡ once again that headache will come. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮಾತನಾಡುವಾಗ ಆ ಮನೆಗಳನ್ನು ಕೆಡವಿ ಹಾಕಿ ಎಂದು ಹೇಳಿದರು. Rehabilitate ಮಾಡಿ, ಮನೆಗಳನ್ನು ಕಟ್ಟಿಸಿ, ಎತ್ತರದ ಪ್ರದೇಶಕ್ಕೆ ಗ್ರಾಮಗಳನ್ನು ಸ್ಥಳಾಂತರ ಮಾಡಿ,

ಇನ್ನು ಬೆಳೆ ನಾಶಕ್ಕೆ ಸಂಬಂಧಿಸಿದಂತೆ, ಈಗಾಗಲೇ ಹೇಳಿರುವ ಅಂಶಗಳನ್ನು ಪುನರಾವರ್ತಿಸುವುದಿಲ್ಲ. ದಯಮಾಡಿ, ಉಪ ಮುಖ್ಯಮಂತ್ರಿಯವರಿಗೆ ಕಬ್ಬು ಬೆಳೆಗಾರರ ಒಡನಾಟದಲ್ಲಿ ಇದ್ದು, ಬಹುತೇಕ ಕಬ್ಬು ಬೆಳೆಗಾರರು ಅವರನ್ನು ತುಂಬಾ ಸಲ ಆಯ್ಕೆ ಮಾಡಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಯವರೇ, ತಮ್ಮನ್ನು ಮುಧೋಳ ಕ್ಷೇತ್ರದಲ್ಲಿ ಎಷ್ಟು ಬಾರಿ ಆಯ್ಕೆ ಮಾಡಿದ್ದಾರೆ? ತಮಗೆ ಕ್ಷೇತ್ರದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಇನ್ನೂ ಸಹ ಏನೂ ಮಾಡಿಲ್ಲ. ಒಂದು ಎಕರೆ ಕಬ್ಬು ಬೆಳೆಗೆ ಒಂದು ಲಕ್ಷ ರೂಪಾಯಿಗಳ ಆದಾಯ ಬರುತ್ತದೆ. ಈ ವರ್ಷ ಸಕ್ಕರೆ ಕಾರ್ಖಾನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಾರಂಭವಾಗುವುದಿಲ್ಲ. ಕಬ್ಬು ಬೆಳೆ ಎಲ್ಲಾ ಮುಳುಗಿ ಹೋಗಿದ್ದು, ಹಾಗೆಯೇ ಎಲ್ಲಾ ಒಣಗಿ ಹೋಗಿವೆ, ಎಲ್ಲಾ ತಿಪ್ಪೆಗೆ ಹಾಕುವಂತಹ ಪರಿಸ್ಥಿತಿ ಬಂದಿದೆ. ಕಬ್ಬನ್ನು ಕಟಾವು ಮಾಡಿ, ದಂಡಿಗೆ ಹಾಕುವುದಕ್ಕೆ ಹತ್ತು ಸಾವಿರ ರೂಪಾಯಿಗಳ ಖರ್ಚು ಬಂದಿದೆ. ಇಂತಹ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಈಗಿನ Fair and Remunerative price ಪ್ರಕಾರ ಕೊಡಬೇಕು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಪ್ರಸ್ತಾಪ ಮಾಡುತ್ತಿರುವ ವಿಷಯವನ್ನು ಕೇಳಿಸಿಕೊಳ್ಳುವುದಕ್ಕೆ ಸದನದಲ್ಲಿ ಮಾನ್ಯ ಸಚಿವರು ಹಾಜರಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಹಾಜರಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಬ್ಬು ಬೆಳೆಗಾರರು ಒಂದು ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ನಾನು ಅಷ್ಟು ಮೊತ್ತವನ್ನು ಕೊಡಬೇಕೆಂದು ಹೇಳುವುದಿಲ್ಲ. NDRF, SDRF guidelines ಎಲ್ಲಾ ಬದಿಗಿಟ್ಟು ಪ್ರಥಮ ಬಾರಿ ಈ ರಾಜ್ಯದ ಇಚ್ಛಾಶಕ್ತಿ . . .

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸಚಿವರಲ್ಲಿ clarification ಅನ್ನು ಕೇಳುತ್ತಿದ್ದಾರೆ. ಆದರೆ ಸದನದಲ್ಲಿ ಮಾನ್ಯ ಸಚಿವರೇ ಹಾಜರಿರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಐವನ್ ಡಿ'ಸೋಜಾರವರೇ, ಸದನದಲ್ಲಿ ಈ ನಾಡಿನ ಯಜಮಾನರಾದ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹಾಜರಿದ್ದಾರೆ. ತಾವು ಮಧ್ಯದಲ್ಲಿ ಬಂದು ಹುಳಿ ಹಿಂಡಬೇಡಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗಾಗಲೇ ತಾವು ತುಂಬಾ ವಿಚಾರದ ಬಗ್ಗೆ ಮಾತನಾಡಿದ್ದೀರಿ. ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ತುಂಬಾ ಮಾತನಾಡಿಲ್ಲ. ಇದು ನಮ್ಮ ಬದುಕಿನ ಸಮಸ್ಯೆಯಾಗಿದೆ. ನಾನು ಹೊರಗಡೆ ಹೋದರೆ ನಮ್ಮ ಪರಿಸ್ಥಿತಿ ತುಂಬಾ ಚಿಂತಾಜನಕವಾಗುತ್ತದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಎರಡನೇ ಬಾರಿ ತಾವು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಗೆ ಹೋಗದೇ ಇರುವಂತಹ ಪರಿಸ್ಥಿತಿ ಉಂಟಾಗಿದೆ. ಅಲ್ಲಿಗೆ ಹೋದರೆ ನೀವು ವಿರೋಧ ಪಕ್ಷದ ನಾಯಕರಾಗಿದ್ದೀರಿ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿದ್ದೀರಿ ನಮಗೆ ಏನು ಮಾಡಿದ್ದೀರಿ, ತಾವು ಬಾಯಿಯಲ್ಲಿ 'ಉಂಡಿ'ಯನ್ನು ಇಟ್ಟುಕೊಂಡಿದ್ದೀರಾ ಎಂದು ನನ್ನ ಕ್ಷೇತ್ರದ ಜನರು ಕೇಳುತ್ತಾರೆ.

(ಮುಂದು)

**(206) 12/10/2019/2:30/ಎಸ್‌ಪಿಆರ್/ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಈಗ ವಿರೋಧ ಪಕ್ಷದ ಸದಸ್ಯನಾಗಿ ನಮ್ಮ ಸಮಸ್ಯೆಗಳ ಬಗ್ಗೆ ಸದನದಲ್ಲಿ ಏನೂ ಮಾತನಾಡಿಲ್ಲ ಎಂಬುದಾಗಿ ನಮ್ಮ ಕ್ಷೇತ್ರದ ಜನರು ನನ್ನನ್ನು ಕೇಳುತ್ತಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಿನ್ನೆಯ ದಿವಸ ಸದನದಲ್ಲಿ ಮಾನ್ಯ ಮಂತ್ರಿಗಳು ಉಪಸ್ಥಿತರಿಲ್ಲದ ಕಾರಣಕ್ಕಾಗಿ ಭಾಷಣವನ್ನು ಮಾಡಿದ್ದೀರಿ. ಆದರೆ ಇವತ್ತಿನ ದಿವಸ ಸದನದಲ್ಲಿ ಮಾನ್ಯ ಮಂತ್ರಿಗಳು ಉಪಸ್ಥಿತರಿದ್ದಾರೆ ಎನ್ನುವ ಕಾರಣಕ್ಕಾಗಿ ಭಾಷಣವನ್ನು ಮಾಡುತ್ತಿದ್ದೀರಿ. ನೀವು ಎರಡು ಬಾರಿ ಭಾಷಣವನ್ನು ಮಾಡುತ್ತಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉಪಸ್ಥಿತರಿದ್ದಾರೆ. ಆದರೆ ಕಂದಾಯ ಸಚಿವರು ಹಾಜರಿಲ್ಲ. ಯಾರೇ ಮಂತ್ರಿಗಳು ಹಾಜರಿರಲಿ ಅಥವಾ ಬಿಡಲಿ, ಅಂತಿಮವಾಗಿ ರಾಜ್ಯದ ಮುಖ್ಯ ಮಂತ್ರಿಗಳು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ನಾವು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ವಿಷಯವನ್ನು ಇನ್ನೂ ಹೆಚ್ಚು ಸ್ಪಾರ್ಕ್ ಮಾಡುವಂತಹ ಆಸಾಮಿಯಾಗಿದ್ದಾರೆ. ಕಬ್ಬು ವಾಣಿಜ್ಯ ಬೆಳೆಯಾಗಿದ್ದು, ಬಹಳ ನಷ್ಟವನ್ನು ಹೊಂದಿದೆ. ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳನ್ನು ಸಕ್ಕರೆಯ ನಾಡು ಎಂದು ಕರೆಯುತ್ತಾರೆ. ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಬೆಳಗಾವಿ ಜಿಲ್ಲೆಯನ್ನು ಪ್ರತಿನಿಧಿಸುತ್ತಾರೆ. ಆ ಭಾಗದ ರೈತರ ಕಬ್ಬಿನ ಬೆಳೆಯು ಸಂಪೂರ್ಣವಾಗಿ ನಾಶವಾಗಿದೆ. ಆದಕಾರಣ ಸರ್ಕಾರವು ಕಬ್ಬಿನ ಪ್ರತಿ ಎಕರೆಗೆ ಕನಿಷ್ಠ 50 ಸಾವಿರ ರೂಪಾಯಿಗಳಷ್ಟು ಪರಿಹಾರ ಧನವನ್ನು ಘೋಷಿಸಬೇಕೆಂದು ಕೇಳುತ್ತೇನೆ. ಇನ್ನುಳಿದ ಬೆಳೆಗೆ cost to cost ಎಂಬುದಾಗಿ ಪರಿಹಾರ ಧನ ನೀಡಬೇಕು. Kindly forget about NDRF, SDRF and all other government guidelines. After the independence, for the first time make it an history in the history of Karnataka by declaring the compensation. ಇಂತಹ ಪರಿಸ್ಥಿತಿಯಲ್ಲಿ ನಾನೊಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಅದಕ್ಕೆ ಸರ್ಕಾರವು ಅನ್ಯಥಾ ಭಾವಿಸಬಾರದು. ಈ ಹಿಂದೆ ಕಾಂಗ್ರೆಸ್ ಪಕ್ಷವು ಆಡಳಿತದಲ್ಲಿದ್ದಾಗ, ಶ್ರೀ ಸಿದ್ದರಾಮಯ್ಯನವರು ಪ್ರತಿ ಟನ್ ಕಬ್ಬಿಗೆ 2,500 ರೂಪಾಯಿಗಳನ್ನು ಘೋಷಣೆ ಮಾಡಿದರು. ಆ ಸಂದರ್ಭದಲ್ಲಿ ಪ್ರತಿ ಟನ್ ಕಬ್ಬಿಗೆ ಸಕ್ಕರೆ ಕಾರ್ಖಾನೆಯವರು 2,150 ರೂಪಾಯಿಗಳನ್ನು ನೀಡಿದರು. ಆಗ ಪ್ರತಿ ಟನ್‌ಗೆ ಇನ್ನುಳಿದ 350 ರೂಪಾಯಿಗಳಂತೆ ಒಟ್ಟು 1,800 ಕೋಟಿ ರೂಪಾಯಿಗಳನ್ನು ನಮ್ಮ ಪಕ್ಷದ ಸರ್ಕಾರವು ನೀಡಿತ್ತು. ಇವತ್ತಿನ ದಿವಸ ಕಬ್ಬಿನ ಬೆಳೆ ಸಂಪೂರ್ಣವಾಗಿ ಮುಳುಗಿ ಹೋಗಿದೆ. ಅಂದಿನ ದಿನಗಳಲ್ಲಿ ನೆರೆ ಪರಿಹಾರ ಘೋಷಣೆ ಮಾಡಲು ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್. ಸಂಸ್ಥೆಗಳ ಯಾವುದೇ ನಿಯಮಾವಳಿಗಳು ಅಸ್ತಿತ್ವದಲ್ಲಿರಲಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಹೇಳಿಕೆಗೆ ಪೂರಕವಾಗಿ ನಾನು ಕೆಲವೊಂದು ಅಂಶಗಳನ್ನು ಹೇಳಲಿಚ್ಛಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಆಡಳಿತ ಪಕ್ಷದ ಸದಸ್ಯರು ಅಡಚಣೆ ಮಾಡುವುದು ಬೇಡ. ನಾನು ಶೀಘ್ರದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಯಾವುದೇ ನಿಯಮಾವಳಿಗಳು ಇರದ ಅಂದಿನ ಕಾಲದಲ್ಲಿ ಸರ್ಕಾರವು ಪ್ರತಿ ಟನ್ ಕಬ್ಬಿಗೆ 350 ರೂಪಾಯಿಗಳನ್ನು ನೀಡಿತ್ತು. ಆಗ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಅಧಿವೇಶನವು ನಡೆಯದ ರೀತಿಯಲ್ಲಿ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಡಿಯ್ಯೂರಪ್ಪನವರ ನೇತೃತ್ವದಲ್ಲಿ ದೊಡ್ಡ ಪ್ರಮಾಣದಲ್ಲಿ ಹೋರಾಟವು ನಡೆಯಿತು. ಪ್ರತಿ ಟನ್‌ಗೆ 350 ರೂಪಾಯಿಗಳಂತೆ ಒಟ್ಟಾರೆಯಾಗಿ 1,800 ಕೋಟಿ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಿಂದ ಬಿಡುಗಡೆ ಮಾಡಲಾಯಿತು. ಆಗ ಕಬ್ಬಿನ ಬೆಳೆಯು ಮುಳುಗಡೆ ಆಗಿರಲಿಲ್ಲ. ಸಕ್ಕರೆ ಕಾರ್ಖಾನೆಯವರು ಪ್ರತಿ ಟನ್ ಕಬ್ಬಿಗೆ 2,150 ರೂಪಾಯಿಗಳನ್ನು ನೀಡಿದ್ದರು. ಘೋಷಣೆ ಮಾಡಿದ ಹಣಕ್ಕೆ ಕಡಿಮೆಯಾದ ಹಣವನ್ನು ಸರ್ಕಾರದ ಬೊಕ್ಕಸದಿಂದ ನೀಡಲಾಗಿತ್ತು. ಕಬ್ಬಿನ ಬೆಳೆಗಾರರು ಸಂಕಟ ಪಡುವುದನ್ನು ನೋಡಿದರೆ, ನನ್ನ ಮನಸ್ಸಿಗೆ ಬಹಳ ನೋವುಂಟಾಗುತ್ತದೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೈಮುಗಿದು ಬೇಡಿಕೊಳ್ಳುವುದೇನೆಂದರೆ, ಪ್ರತಿ ಎಕರೆ ಕಬ್ಬಿನ ಬೆಳೆಗೆ 50 ಸಾವಿರ ರೂಪಾಯಿಗಳ ಪರಿಹಾರ ಧನವನ್ನು ಘೋಷಿಸಬೇಕೆಂದು ಕೋರುತ್ತೇನೆ. ನಾಶಗೊಂಡ ಇನ್ನುಳಿದ ಬೆಳೆಗೆ cost to cost ಪರಿಹಾರ ಧನ ನೀಡಿ. ಅಂದರೆ, ಒಂದು ಎಕರೆಗೆ ಎಷ್ಟು ನಷ್ಟವುಂಟಾಗಿದೆಯೋ ಅದನ್ನು ಅಂದಾಜಿಸಿ, ಅಷ್ಟು ಮೊತ್ತವನ್ನು ನೀಡಿ. ಅದರಲ್ಲಿ plantation crops, ನೀರಾವರಿ ಬೆಳೆ, ಮಳೆ ಆಶ್ರಿತ ಬೆಳೆ ಎಲ್ಲವೂ ಒಳಗೊಂಡಿದೆ. ನೆರೆ ಹಾವಳಿಯಿಂದಾಗಿ ಉಂಟಾದ ನಷ್ಟಕ್ಕೆ ಒಂದು ಎಕರೆ ಕಬ್ಬಿನ ಬೆಳೆಗೆ 50 ಸಾವಿರ ರೂಪಾಯಿಗಳನ್ನು ಹಾಗೂ ಇನುಳಿದ ಬೆಳೆಗಳಿಗೆ ಎಷ್ಟು ಪ್ರಮಾಣದ ಹಾನಿಯುಂಟಾಗಿದೆ, ಅಷ್ಟು ಮೊತ್ತವನ್ನು ಘೋಷಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೋರುತ್ತೇನೆ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ಅಂಗಡಿ ಮುಂಗಟ್ಟುಗಳ ಹಾನಿ ಇತ್ಯಾದಿ ಯಾವ್ಯಾವ ಹಾನಿಗಳ ಬಗ್ಗೆ ಪ್ರಸ್ತಾಪ ಮಾಡಿಲ್ಲವೋ, ಅವುಗಳಿಗೆಲ್ಲವೂ ಸಹ ಪರಿಹಾರ ಧನವನ್ನು ಘೋಷಿಸಲಾಗಿದೆ. ಇವರ ಎಲ್ಲಾ ಬೇಡಿಕೆಗಳನ್ನು ಸರ್ಕಾರವು ಈಗಾಗಲೇ ಈಡೇರಿಸಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ಕಾರ ತೆಗೆದುಕೊಂಡಿರುವ ಕ್ರಮವನ್ನು ನಾನು ಸ್ವಾಗತಿಸುತ್ತೇನೆ. ಅನಧಿಕೃತ ಕಟ್ಟಡಗಳ ಹಾಗೂ ಅಂಗಡಿ ಮುಂಗಟ್ಟುಗಳ ಹಾನಿಗೆ ಪರಿಹಾರ ಧನವನ್ನು ಘೋಷಿಸಲಾಗಿದೆ. ನೇಕಾರರು ಬಳಸುವ ವಿದ್ಯುತ್ ಚಾಲಿತ ಮಗ್ಗ ಹಾಗೂ ಕೈಮಗ್ಗ ಇವುಗಳಿಗೂ ಸಹ ಪ್ರೋತ್ಸಾಹ ಧನವನ್ನು ನೀಡಲಾಗಿದೆ. ನೆರೆ ಹಾವಳಿಯಿಂದುಂಟಾದ ಹಾನಿಗಳಿಗೆ ನೀಡುವ ಪರಿಹಾರ ಧನವನ್ನೂ ಸಹ ಹೆಚ್ಚಿಗೆ ಮಾಡಲಾಗಿದೆ. ಸರ್ಕಾರದ ಎಲ್ಲಾ ಕ್ರಮಗಳನ್ನು ನಾವು ಟೀಕಿಸುವುದಿಲ್ಲ. ಸರ್ಕಾರವು ಮಾಡಿರುವ ಒಳ್ಳೆಯ ಕೆಲಸಗಳನ್ನು ನಾವು ನಮ್ಮ ಪಕ್ಷದ ವೇದಿಕೆಯಿಂದ ಶ್ಲಾಘಿಸುತ್ತೇವೆ. ಇದರಲ್ಲಿ ನಮಗೆ ಯಾವುದೇ ರೀತಿಯಾದ hesitation ಇಲ್ಲ. ನೆರೆ ಹಾವಳಿಯನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

'ರಾಷ್ಟ್ರೀಯ ವಿಪತ್ತು' ಎಂಬುದಾಗಿ ಘೋಷಿಸಲು ಠರಾವು ಮಂಡಿಸಬೇಕೆಂದು ನಾನು ಒತ್ತಾಯಿಸುತ್ತೇನೆ. ನೆರೆ ಹಾವಳಿಯಿಂದಾಗಿ ನಾಶಗೊಂಡ ಪ್ರತಿ ಮನೆಗಳಿಗೆ 5 ಲಕ್ಷ ರೂಪಾಯಿಗಳ ಬದಲಿಗೆ, 10 ಲಕ್ಷ ರೂಪಾಯಿಗಳನ್ನು ಘೋಷಿಸಬೇಕೆಂದು ಕೇಳುತ್ತೇನೆ. ಕಳೆದ ಬಾರಿ ಕೊಡಗು ಜಿಲ್ಲೆಯಲ್ಲಿ ಪ್ರವಾಹದಿಂದಾಗಿ ನಾಶಗೊಂಡ ಮನೆಗಳಿಗೆ 9 ಲಕ್ಷ 85 ಸಾವಿರ ರೂಪಾಯಿಗಳನ್ನು ನೀಡಲಾಗಿತ್ತು. ಈಗ ಸದರಿ ಮೊತ್ತಕ್ಕೆ 15 ಸಾವಿರ ರೂಪಾಯಿಗಳನ್ನು ಹೆಚ್ಚು ಮಾಡಿ ಒಟ್ಟಾರೆಯಾಗಿ 10 ಲಕ್ಷ ರೂಪಾಯಿಗಳನ್ನು ನೀಡಬೇಕೆಂದು ಕೋರುತ್ತೇನೆ. ನೆರೆ ಹಾವಳಿಯಿಂದ ಬಾಧಿತ ಗ್ರಾಮಗಳನ್ನು ಎತ್ತರವಾದ ಸುರಕ್ಷಿತ ಸ್ಥಳಗಳಿಗೆ ಖಾಯಂ ಆಗಿ ಸ್ಥಳಾಂತರಿಸಬೇಕೆಂದು ಕೋರುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯ ರೀತ್ಯ rehabilitation packageನ್ನು ಅನುಸರಿಸಬೇಕು. ನೆರೆ ಹಾವಳಿಯಿಂದ ಬೆಳೆ ನಾಶವಾಗಿದ್ದು, ಅವುಗಳಿಗೆ ಪರಿಹಾರವನ್ನು ಘೋಷಣೆ ಮಾಡುವಾಗ ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್.ನ ನಿಯಮಾವಳಿಗಳನ್ನು ಅನುಸರಿಸುವುದು ಬೇಡ. ಏಕೆಂದರೆ, ಅವುಗಳೆಲ್ಲವೂ ಹಳೆಯ ನಿಯಮಗಳಾಗಿವೆ. ಒಂದು ವೇಳೆ ಸದರಿ ಸಂಸ್ಥೆಗಳ ನಿಯಮಾವಳಿಗಳನ್ವಯ ಪರಿಹಾರ ಧನವನ್ನು ಘೋಷಿಸಿದರೆ, ಸದರಿ ಮೊತ್ತದಿಂದ ರೈತರಿಗೆ ಚಹಾ ಕುಡಿಯಲೂ ಸಹ ಸಾಕಾಗುವುದಿಲ್ಲ. ಅಂದರೆ ಅಷ್ಟು ಕಡಿಮೆ ಮೊತ್ತ ಅದಾಗಿರುತ್ತದೆ. ಬಾಗಲಕೋಟೆಯಲ್ಲಿನ ಗ್ರಾಮಗಳಿಂದ ಜಿಲ್ಲಾ ಕೇಂದ್ರಕ್ಕೆ ಬಂದರೆ, ಘೋಷಣೆ ಮಾಡಿದ ಪರಿಹಾರ ಮೊತ್ತವು ಅವರ ದೈನಂದಿನ ಖರ್ಚಿಗೂ ಸಹ ಸಾಕಾಗುವುದಿಲ್ಲ. Kindly forget about NDRF, SDRF and all other government guidelines. After the independence for the first time in the history of Karnataka, take a decision to award minimum compensation of Rs.50,000/- per acre for sugarcane. ಒಂದು ಎಕರೆ ಕಬ್ಬಿನ ಬೆಳೆಗೆ ನಾವು ಒಂದು ಲಕ್ಷ ರೂಪಾಯಿಗಳನ್ನು ಕೇಳುತ್ತಿಲ್ಲ. ಅದರ ಬದಲಾಗಿ 50 ಸಾವಿರ ರೂಪಾಯಿಗಳನ್ನು ಘೋಷಣೆ ಮಾಡಿ. ನಾವು ಈ ಹಿಂದೆ ಅಧಿಕಾರದಲ್ಲಿದ್ದು ಆಡಳಿತ ನಡೆಸಿದ್ದೇವೆ. ಅಲ್ಲಿನ ಎಲ್ಲಾ ಸಂಗತಿಗಳು ನಮಗೆ ತಿಳಿದಿವೆ. ಒಂದು ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡಿದರೆ, ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತದೆ. ಇನ್ನುಳಿದ ಬೆಳೆಗಳಿಗೆ ಎಷ್ಟು ಮೊತ್ತ ನಾಶವಾಗಿದೆ, ಅಷ್ಟು ಮೊತ್ತದ ಪರಿಹಾರವನ್ನು ಸರ್ಕಾರವು ಭರಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಬೇಡಿಕೆಗಳಿಗೆ 'ತಥಾಸ್ತು' ಎಂದು ಹೇಳುತ್ತಾರೆಂದು ನಾನು ವಿಶ್ವಾಸವನ್ನಿಟ್ಟುಕೊಂಡಿದ್ದೇನೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನನಗೆ ಒಂದು ವಿಚಾರದಲ್ಲಿ ಸರ್ಕಾರದಿಂದ ಸ್ಪಷ್ಟತೆ ಬೇಕಾಗಿತ್ತು.

**ಸಭಾಪತಿಯವರು:-** ಮಾನ್ಯ ಇಟಗಿಯವರೇ, ನಿಮಗೆ ನಂತರದಲ್ಲಿ ಮಾತನಾಡಲು ಅವಕಾಶವನ್ನು ನೀಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಸಭೆಯ ನಾಯಕರು ಮಾತನಾಡಿದ ರೀತಿಯಲ್ಲಿಯೇ ಮಾತನಾಡಿದರು. ನಾವು ಯಾವ ವಿಚಾರವನ್ನು ಸರ್ಕಾರಕ್ಕೆ ಕೇಳುವುದು ಬಾಕಿ ಉಳಿಯಲಿಲ್ಲ. ನಾವು ಯಾವುದೇ ವಿಚಾರವನ್ನು ಕೇಳುವುದಕ್ಕೂ ಹೋಗುವುದಿಲ್ಲ. ಏಕೆಂದರೆ, ಸರ್ಕಾರವು ಎಲ್ಲಾ ರೀತಿಯ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡಿದೆ ಎಂದು ದೃಢೀಕರಣ ಕೊಡುವುದು ಬಿಟ್ಟರೆ ಬೇರೆ ಯಾವ ಸಂಗತಿಗಳು ಇಲ್ಲಿ ಇಲ್ಲ. ಸರ್ಕಾರವು ತೆಗೆದುಕೊಂಡಿರುವ ಪರಿಹಾರ ಕಾಮಗಾರಿಗಳ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಎಲ್ಲವನ್ನೂ ವಿವರಿಸಿ ಹೇಳಿದ್ದಾರೆ. ನಾಶವಾದ ಪ್ರತಿ ಮನೆಗೆ 5 ಲಕ್ಷ ರೂಪಾಯಿಗಳ ಬದಲಿಗೆ 10 ಲಕ್ಷ ರೂಪಾಯಿಗಳನ್ನು ಸರ್ಕಾರ ಘೋಷಿಸಬೇಕು. ದೊಡ್ಡ ರೈತರಿಗೆ ಅಂದರೆ 8-10 ಜಾನುವಾರುಗಳನ್ನು ಹೊಂದಿರುವವರಿಗೆ 60X40 ಅಡಿ ವಿಸ್ತೀರ್ಣದ ಮನೆಗಳಿಗೆ ಬದಲಾಗಿ 50X80 ಅಡಿ ವಿಸ್ತೀರ್ಣದ ಮನೆಗಳನ್ನು ಘೋಷಿಸಬೇಕು. ನೆರೆ ಸಂತ್ರಸ್ತರಿಗೆ ಸರ್ಕಾರವು ಎಲ್ಲಾ ರೀತಿಯಿಂದಲೂ ಸ್ಪಂದಿಸಿದೆ. ಇದನ್ನು ನಾನು ಅಭಿನಂದಿಸುತ್ತೇನೆ. ಕೇವಲ ಸರ್ಕಾರವನ್ನು ಟೀಕೆ ಮಾಡುವುದಕ್ಕಾಗಿಯೇ ನಾವು ವಿರೋಧ ಪಕ್ಷದಲ್ಲಿಲ್ಲ. ನೆರೆ ಹಾವಳಿಯ ಸಂದರ್ಭದಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂಬ ಬೇಧ ಎಲ್ಲಿಯೂ ಸಹ ಬರಲಿಲ್ಲ. ಬೆಂಗಳೂರು, ಮೈಸೂರು ನಗರಗಳನ್ನು ಒಳಗೊಂಡಂತೆ ರಾಜ್ಯದಾದ್ಯಂತ ಎಲ್ಲಾ ಕಡೆಗಳಿಂದಲೂ 10-20 ಲಾರಿಗಳ ಮುಖಾಂತರ ನೆರೆ ಸಂತ್ರಸ್ತರಿಗೆ ಎಲ್ಲಾ ರೀತಿಯ ನೆರವು ದೊರೆತಿದೆ. ಸಹಾಯ ಹಸ್ತ ತೋರಿದ ರಾಜ್ಯದ ಜನತೆಗೆ ನಾವು ಕೃತಜ್ಞತೆಯನ್ನು ಸಲ್ಲಿಸುವ ನಿರ್ಣಯವನ್ನು ಮಂಡಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೆರೆ ಹಾವಳಿಯ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು 27 ದಿನಗಳ ಕಾಲ ಅವಿರತವಾಗಿ ಕೆಲಸ ಮಾಡಿದ್ದಾರೆ. ಇದಕ್ಕಾಗಿ ನಾನು ಅವರನ್ನು ಮತ್ತೊಂದು ಬಾರಿ ಅಭಿನಂದಿಸುತ್ತೇನೆ. ಈ ಬಾರಿ ದೇಶದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ದೊಡ್ಡದಾದ ವಿಪತ್ತು ಬಂದಿದೆ. ಈ ಸಂದರ್ಭದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ಒಟ್ಟುಗೂಡಿ ಸರಿಸಮಾನರಾಗಿ ವಿಪತ್ತು ನಿರ್ವಹಣಾ ಕೆಲಸ ನಿರ್ವಹಿಸಿದ್ದಾರೆ ಎಂಬ ದೊಡ್ಡ ಹೆಗ್ಗಳಿಕೆಯನ್ನು ಹಾಗೂ ಮಾದರಿಯನ್ನು ನಾವು ಬೇರೆ ರಾಜ್ಯಗಳಿಗೆ ನೀಡಿದ್ದೇವೆ. ಈ ದೃಷ್ಟಿಯಿಂದ ನಾನು ಎಲ್ಲರನ್ನೂ ಅಭಿನಂದಿಸುತ್ತೇನೆ. ತೆಗೆದುಕೊಂಡಿರುವ ನೆರೆ ಪರಿಹಾರ ಕಾಮಗಾರಿಗಳಿಂದ ಸಮಾಧಾನವಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿರುವ ಬೇಡಿಕೆಗಳನ್ನು ಸಹ ಸರ್ಕಾರವು ಈಡೇರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಎರಡು ವಿಚಾರಗಳಲ್ಲಿ ಸರ್ಕಾರದಿಂದ ಸ್ಪಷ್ಟತೆ ಕೇಳಬಯಸುತ್ತೇನೆ. ಮೊನ್ನೆಯ ದಿನ ನಾನು ಮಾತನಾಡುವಾಗ ಈ ಬಗ್ಗೆ ಪ್ರಸ್ತಾಪಿಸಿದ್ದೆನು.

**ಸಭಾಪತಿಯವರು:-** ಮಾನ್ಯ ಇಟಗಿಯವರೇ, ನಿಮಗೆ ಮಾತನಾಡಲು ಅವಕಾಶವನ್ನು ನೀಡುತ್ತೇನೆ. ಅದಕ್ಕೂ ಮುನ್ನ ಒಂದು ವಿಷಯವನ್ನು ಹೇಳಬಯಸುತ್ತೇನೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಈಗಾಗಲೇ ಅಭಿನಂದನಾ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ. ಹೀಗಾಗಿ ಮತ್ತೊಂದು ಬಾರಿ ಅದನ್ನು ಮಂಡಿಸುವ ಅವಶ್ಯಕತೆ ಇಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಯಾವಾಗ ತೆಗೆದುಕೊಳ್ಳಲಾಗಿದೆ? ಒಂದು ವೇಳೆ ಮಂಡನೆ ಆಗಿದ್ದರೆ, ಅದಕ್ಕೆ ನನ್ನ ತಕರಾರು ಇಲ್ಲ. ನಿರ್ಣಯವನ್ನು ಸರಿಯಾಗಿ ಓದಿ ಹೇಳಬೇಕಾಗಿತ್ತು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಿರ್ಣಯವನ್ನು ಸರಿಯಾಗಿ ಓದಿಹೇಳಲಾಗಿದೆ. ಆ ಸಂದರ್ಭದಲ್ಲಿ ನೀವು ಗಲಾಟೆ ಮಾಡುತ್ತಿದ್ದಿರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, excuse for the same.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಕೇಳುವ ಪ್ರಶ್ನೆಗಳು ಬಹಳ ಪ್ರಮುಖವಾದವು. ನಾನು ಫಸಲ್ ಬಿಮಾ ಯೋಜನೆಯ ಬಗ್ಗೆ ಕೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ಕಾರವು ದಯಮಾಡಿ ಸಹಾನುಭೂತಿಯಿಂದ ನಾವು ಕೇಳಿದ ಎಲ್ಲಾ ಬೇಡಿಕೆಗಳನ್ನು 'ತಥಾಸ್ತು' ಎಂದು ಈಡೇರಿಸಿದರೆ, ನಮ್ಮ ಭಾಗದ ಎಲ್ಲಾ ಜನರು ಸರ್ಕಾರವನ್ನು ಪೂಜಿಸುತ್ತಾರೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನೆರೆ ಹಾವಳಿಯ ಸಂದರ್ಭದಲ್ಲಿ ವೈಯಕ್ತಿಕವಾಗಿ, ಸಂಘ ಸಂಸ್ಥೆಗಳು, ಕಂಪೆನಿಗಳು ಸಂತ್ರಸ್ತರಿಗೆ ದವಸ-ಧಾನ್ಯ, ಬಟ್ಟೆ-ಬರೆ, ಪಾತ್ರೆ, ಹಣ ಇತ್ಯಾದಿಗಳನ್ನು ಕೊಟ್ಟು ಸಹಾಯವನ್ನು ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಸಹಾಯ ಹಸ್ತ ಚಾಚಿ ಸ್ಪಂದಿಸಿದ ಎಲ್ಲಾ ದಾನಿಗಳಿಗೂ ಸರ್ಕಾರದ ವತಿಯಿಂದ ಅಭಿನಂದನೆಯನ್ನು ಸಲ್ಲಿಸುವ ನಿರ್ಣಯವನ್ನು ಈಗ ನಾನು ಈ ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಕೇಳಿರುವ ಸ್ಪಷ್ಟೀಕರಣಗಳಿಗೆ ಸರ್ಕಾರವು ಉತ್ತರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿನ ನಾನು ಮಾತನಾಡುತ್ತಿರುವಾಗ, ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಸರ್ಕಾರದ ವತಿಯಿಂದ ಸ್ಪಷ್ಟೀಕರಣ ನೀಡಲು ನಾನು ತಯಾರಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿನ ನಾನು Dam Management Monitoring Committee ಬಗ್ಗೆ ಸ್ಪಷ್ಟೀಕರಣವನ್ನು ಕೇಳಿದ್ದೆನು. ಆದರೆ ಇದರ ಬಗ್ಗೆ ಸರ್ಕಾರವು ಯಾವುದೇ ಉಲ್ಲೇಖ ಮಾಡಿಲ್ಲ. ಏಕೆಂದರೆ, 70% of flood was due to mismanagement of dam terrain. ಈ ವಿಚಾರದ ಬಗ್ಗೆ ಸರ್ಕಾರ ಯಾವುದೇ ಉಲ್ಲೇಖ ಮಾಡಿಲ್ಲ. ಒಂದೊಂದು ದಿನ 6 ಲಕ್ಷ ಕ್ಯೂಸೆಕ್ಸ್ ನೀರನ್ನು ಬಿಡುತ್ತಾರೆ, ಒಂದೊಂದು ದಿನ 2 ಲಕ್ಷ ಕ್ಯೂಸೆಕ್ಸ್ ನೀರನ್ನು ಬಿಡುತ್ತಾರೆ, ಒಂದೊಂದು ದಿನ 30,000 ಕ್ಯೂಸೆಕ್ಸ್ ನೀರನ್ನು ಬಿಡುತ್ತಾರೆ. ಇಂತಹ ವ್ಯವಸ್ಥೆಯನ್ನು ಸರಿಪಡಿಸಬೇಕಾದರೆ ಮತ್ತು ಪ್ರವಾಹ ಬರುವುದನ್ನು ತಡೆಗಟ್ಟಲು ಈ ಮೂರು ರಾಜ್ಯಗಳವರು ಒಬ್ಬರಿಗೊಬ್ಬರು ಸಹಕಾರದಿಂದ ಕೆಲಸ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ. ಉತ್ತರ ಕರ್ನಾಟಕದ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಈ ಬಾರಿ ನೆರೆ ಹಾವಳಿಯಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಾನಿಯುಂಟಾಗಲು ಬ್ಯಾರೇಜ್‌ಗಳ ಅಸಮರ್ಪಕ ನಿರ್ವಹಣೆಯೇ ಕಾರಣವಾಗಿದೆ. ಈ ಹಿಂದೆ 2009 ನೇ ಇಸವಿಯಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಪ್ರವಾಹ ಬಂದಿತ್ತು, ಆಗ ಏಳೂವರೆ ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಂದಿದ್ದರೂ ಇಷ್ಟು ಪ್ರಮಾಣದ ಹಾನಿಯಾಗಿರಲಿಲ್ಲ. ಅದಕ್ಕೆ ಹೋಲಿಸಿದರೆ, ಈ ಬಾರಿ ಅಂದಾಜು ಆರೂವರೆ ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಂದು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಾನಿಯುಂಟಾಗಿದೆ. It is just because of mismanagement of dams. ಇದರ ಬಗ್ಗೆ ಅತ್ಯಂತ ಗಂಭೀರವಾದ ಚಿಂತನೆಯನ್ನು ಮಾಡಬೇಕಾಗಿದೆ ಎಂದು ನಾನು ಈಗಾಗಲೇ ಈ ವಿಚಾರವನ್ನು ಪ್ರಸ್ತಾಪಿಸಿದ ಸಂದರ್ಭದಲ್ಲಿ ಹೇಳಿದ್ದೆ. ಆದರೆ, ಈ ವಿಷಯದ ಬಗ್ಗೆ ಸರ್ಕಾರವು ಯಾವುದೇ ರೀತಿಯ ಉಲ್ಲೇಖವನ್ನು ಮಾಡಿರುವುದಿಲ್ಲ.

(ಮುಂದು)

(207)/12-10-2019/2-40/ಎಲ್‌ಎಂ/ಎಂಡಿ

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-** ನನ್ನ ವಿನಂತಿ ಎಂದರೆ, ಆಂಧ್ರ, ತೆಲಂಗಾಣ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ಸೇರಿಸಿ ಒಂದು Dam Monitoring

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Committee ಮಾಡಬೇಕು. ಈ ಸಮಿತಿಯವರು ಯಾವಾಗ ಎಲ್ಲಿ ಎಷ್ಟು ಮಳೆಯಾಗುತ್ತದೆ, ಕೊಂಕಣ ಪ್ರದೇಶದಲ್ಲಿ ಎಷ್ಟು ಮಳೆಯಾಗುತ್ತದೆ, ಯಾವಾಗ ಎಷ್ಟು ನೀರು ಬಿಡಬೇಕು ಎನ್ನುವುದನ್ನು ನೋಡಿಕೊಳ್ಳಬೇಕು. ಇದು ಅತ್ಯಂತ ಅವಶ್ಯಕವಾಗಿ ಆಗಬೇಕಾಗಿರುವ ಸಂಗತಿಯಾಗಿದೆ. ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಎರಡನೆಯದಾಗಿ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ಒಂದು clause ಇದೆ, ಇಂತಹ ನೆರೆ ಪರಿಸ್ಥಿತಿ ಬಂದಾಗ ಇದರಲ್ಲಿಯ ಹಣವನ್ನು ರಾಜ್ಯ ಸರ್ಕಾರ ಉಪಯೋಗಿಸಿಕೊಂಡಿದ್ದರೆ, ಈಗಾಗಲೇ ರೈತರಿಗೆ 2000 ದಿಂದ 3000 ಕೋಟಿ ರೂ.ಗಳ ಹಣ ಬರುತ್ತಿತ್ತು. ಈಗ ತಡವಾದರೂ ಸಹ ರಾಜ್ಯ ಸರ್ಕಾರ ಅದರ ಬಗ್ಗೆ ಗಮನಹರಿಸಬೇಕು. ವಿಮಾ ಕಂಪನಿಗಳವರ ಜೊತೆಯಲ್ಲಿ ಮಾತನಾಡಿ, ಎಷ್ಟು ಕೊಡಿಸಲು ಸಾಧ್ಯವೋ ಅಷ್ಟು ವಿಮೆ ಹಣವನ್ನು ಕೊಡಿಸಬೇಕು ಎನ್ನುವುದು ನನ್ನ ವಿನಂತಿ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, Mid-Season Adversity Insurance ಬಗ್ಗೆ ಅವರು ಹೇಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಪ್ರಯತ್ನವನ್ನೇ ಮಾಡಲಿಲ್ಲ ಎನ್ನುವ ಚರ್ಚೆ ನಿಮ್ಮ ಪಕ್ಷದಿಂದ ಆ ಮನೆಯಲ್ಲಿಯೂ ಬಂತು ಈ ಮನೆಯಲ್ಲಿಯೂ ಬಂತು. ಆದರೆ 8-8-2019ರಲ್ಲಿಯೇ ಜಂಟಿ ಸಮೀಕ್ಷೆ ಮಾಡಿ ಚರ್ಚೆ ಮಾಡಿ ತೀರ್ಮಾನ ಮಾಡಿದ್ದಾರೆ. 10-8-2019ಕ್ಕೆ ಒಂದು ಸಭೆಯನ್ನು ಮಾಡಿ 80 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಪ್ರದೇಶಗಳೆಂದು ತೀರ್ಮಾನ ಮಾಡಿ 16-8-2019ರ ಸರ್ಕಾರಿ ಆದೇಶದಲ್ಲಿ 21 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದ್ದೇವೆ. ನಂತರ 14-8-2019ರಲ್ಲಿ *MNCFC (*Mahalanobis National Crop Forecast Centre) ಯಲ್ಲಿ ಪ್ರವಾಹಪೀಡಿತ ಬೆಳೆ ಸಮೀಕ್ಷೆ ಕೈಗೊಳ್ಳುವ ಕುರಿತು ಮಾಹಿತಿ ಒಳಗೊಂಡ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅನುಷ್ಠಾನ ವಿಮಾ ಸಂಸ್ಥೆಗೆ ಜಿಲ್ಲಾಡಳಿತದವರ ಜೊತೆಯಲ್ಲಿ ಜಂಟಿ ಸಮೀಕ್ಷೆ ಮಾಡಿ ಪರಿಹಾರ ಇತ್ಯರ್ಥ ಮಾಡಿ ಎಂದು ಅವರಿಗೆ ಸೂಚನೆ ನೀಡಲಾಗಿದೆ. 30-8-2019ಕ್ಕೆ ಬೆಳೆ ನಷ್ಟ ಸಮೀಕ್ಷೆ ವರದಿ ಗದಗ, ಬಾಗಲಕೋಟೆ ಜಿಲ್ಲೆಗಳಿಂದ ಬಂದಿದೆ. ಇದು ಆದ ಮೇಲೆ ಎಲ್ಲಾ ಅನುಷ್ಠಾನ ವಿಮಾ ಸಂಸ್ಥೆಗಳ ಸಭೆ ಕರೆದು 9-9-2019ಕ್ಕೆ ಬೆಳೆ ಸಮೀಕ್ಷೆ ವರದಿಗೆ ಅನುಮೋದನೆ ನೀಡಬೇಕಾಗಿತ್ತು, ಆದರೆ ಕೊಪ್ಪಳ, ಬಳ್ಳಾರಿ, ಧಾರವಾಡ, ಬೆಳಗಾವಿ ವಿಮಾ ಸಂಸ್ಥೆಯವರು ವಿರೋಧ ಮಾಡಿದರು, ರಾಜ್ಯಮಟ್ಟದ ಕುಂದುಕೊರತೆಗಳ ಸಮಿತಿಯಲ್ಲಿ ಚರ್ಚೆಮಾಡಿ ಅಂತಿಗೊಳಿಸಬಹುದು ಎನ್ನುವ ತೀರ್ಮಾನವಾಯಿತು. 27-9-2019ಕ್ಕೆ ರಾಜ್ಯಮಟ್ಟದ ಸಮಿತಿ ಕರೆದು ಎಲ್ಲವನ್ನು ಇತ್ಯರ್ಥಗೊಳಿಸಿ, ಉಳಿದ ಜಿಲ್ಲೆಗಳು ಜಂಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮೀಕ್ಷಾ ಸಮಿತಿಯ ವರದಿ ಇಲ್ಲದಿದ್ದರೂ ಸಹ ಸದರಿ ಮಾಹಿತಿಯನ್ನು ಪರಿಗಣಿಸಲು ತೀರ್ಮಾನಿಸಲಾಯಿತು. 9-10-2019ಕ್ಕೆ ಮಧ್ಯಂತರ ವಿಮಾ ಪರಿಹಾರ ನೀಡಲು ಸರ್ಕಾರ ಆದೇಶ ಹೊರಡಿಸಿದೆ. 25% ಈಗ ಕೊಡುತ್ತಾರೆ. ಉಳಿದಿರುವುದನ್ನು ನಂತರ ಕೊಡಲಾಗುತ್ತದೆ ಎನ್ನುವ ತೀರ್ಮಾನವಾಗಿದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಿ Mid-Season Adversity ನಲ್ಲಿ ಸರ್ಕಾರ ಪ್ರಯತ್ನ ಮಾಡಿರುವುದಿಲ್ಲ ಎನ್ನುವ ಭಾವನೆ ಬರುವುದು ಬೇಡ. ಮಾನ್ಯ ಸದಸ್ಯರು Inter-state Dam Monitoring Committee ಆಗಬೇಕು ಎಂದು ಹೇಳಿದ್ದಾರೆ. ಈ ಸಾರಿ ನೀರು ಬಿಟ್ಟಮೇಲೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಗೋವಾ ಮುಖ್ಯಮಂತ್ರಿಗಳ ಜೊತೆಯಲ್ಲಿ ಮುಂದೆ ಈ ರೀತಿ ನೆರೆ ಪ್ರವಾಹ ಬರದಂತೆ ಹೇಗೆ ನಿರ್ವಹಣೆ ಮಾಡಬೇಕು ಎನ್ನುವುದನ್ನು ಚರ್ಚೆ ಮಾಡಿದ್ದಾರೆ. ಈ ರೀತಿಯ ಚರ್ಚೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಲು ತೀರ್ಮಾನ ಮಾಡಲಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಆಂಧ್ರ ಮತ್ತು ತೆಲಂಗಾಣದವರನ್ನು ಈ ಸಮಿತಿಯಲ್ಲಿ ಸೇರಿಸಿಕೊಳ್ಳಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ನೆರೆ ಪ್ರವಾಹವನ್ನು "ರಾಷ್ಟ್ರೀಯ ವಿಪತ್ತು" ಎಂದು ಘೋಷಣೆ ಮಾಡಬೇಕೆಂದು ಹೇಳಿದ್ದಾರೆ. ಆದರೆ ಅದಕ್ಕೆ ದೊಡ್ಡ procedure ಆಗಬೇಕು. ಅದರ ಎಲ್ಲಾ ingredients ನ್ನು ನಾವು meet ಮಾಡಬೇಕು. ಎಲ್ಲವನ್ನು ಚರ್ಚೆ ಮಾಡದೆ ನಾವು resolution ನ್ನು ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ಅದನ್ನು ಕೈಬಿಡಬೇಕು. ರಾಷ್ಟ್ರೀಯ ವಿಪತ್ತು ಎಂದು ಘೋಷಣೆ ಮಾಡಲು ನೋಟಿಸ್ ಇಲ್ಲದೆ, ಅದರ procedures follow ಮಾಡದೇ, ingredients ಏನೇನಿದೆ ಎನ್ನುವುದನ್ನು ನೋಡದೆ, ನಾವು ಸದನದಲ್ಲಿ ನಿರ್ಣಯ ತೆಗೆದುಕೊಳ್ಳಲು ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಇಂತಹ ಮಹತ್ವದ ಸಂಗತಿ ಬಂದಾಗ you must be prepared.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾಡಲು ಆಗುವುದಿಲ್ಲ ಅಂದರೆ ಏನು? ತಾವು ಅದಕ್ಕೆ ತಯಾರಾಗಿ ಬರಬೇಕು.

**ಶ್ರೀ ಟಿ.ಎ.ಶರವಣ:-** ರಾಷ್ಟ್ರೀಯ ವಿಪತ್ತು ಎಂದು ಘೋಷಣೆ ಮಾಡಲು ನೀವು ತಯಾರಾಗಿಲ್ಲವೆಂದರೆ ಅದರ ಅರ್ಥವೇನು?

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:-** ರಾಷ್ಟ್ರೀಯ ವಿಪತ್ತು ಅಂದರೆ ಏನು ಎನ್ನುವುದನ್ನು ಮೊದಲು ಹೇಳಿ, You tell us the ingredients.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** 36,000 ಕೋಟಿ ರೂ.ಗಳ ನಷ್ಟವಾಗಿದೆ, ಸರ್ಕಾರ ಕೊಟ್ಟಿರುವುದು 3000 ಕೋಟಿ ರೂಪಾಯಿಗಳು ಮಾತ್ರ. ಹಣ ಎಲ್ಲಿದೆ?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ನಾವು ಕೇಳಿರುವ ಮನೆ ಬಿದ್ದಿರುವುದಕ್ಕೆ 5 ಲಕ್ಷ ರೂ.ಗಳ ಪರಿಹಾರವನ್ನು 10 ಲಕ್ಷ ರೂ.ಗಳಿಗೆ ಏರಿಸುವುದರ ಬಗ್ಗೆ, crop compensation ಬಗ್ಗೆ ನನಗೆ ಉತ್ತರವನ್ನು ಕೊಡಿ.

**ಡಾ: ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು, ಅರ್ಧ ಕರ್ನಾಟಕ ಬರದಿಂದ ಮತ್ತು ಅರ್ಧ ಕರ್ನಾಟಕ ಪ್ರವಾಹದಿಂದ ತತ್ತರಿಸಿದ್ದು, ಕಳೆದ 10 ವರ್ಷಗಳಿಂದ ಇದನ್ನು ಅನುಭವಿಸುತ್ತಿದ್ದೇವೆ. ಕೇಂದ್ರ ಸರ್ಕಾರ ಈಗಾಗಲೇ ಅತ್ಯಂತ ಮಹತ್ವಾಕಾಂಕ್ಷಿ ಗಂಗಾ-ಕಾವೇರಿ ನದಿ ಜೋಡಣೆಗೆ ಐದೂವರೆ ಲಕ್ಷ ಕೋಟಿ ರೂ.ಗಳನ್ನು ಮೀಸಲಿಟ್ಟಿದೆ. ಮಾತ್ರವಲ್ಲ 2015ರಲ್ಲಿ ಕೇಂದ್ರ ಜಲಸಂಪನ್ಮೂಲ ಸಚಿವರಾದ ಮಾನ್ಯ ನಿತೀನ್ ಗಡ್ಕರಿಯವರ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ರಚನೆಯಾಗಿದೆ. ಈ ಯೋಜನೆ ಜಾರಿಗೆ ಬಂದರೆ..

(ಗೊಂದಲ)

**ಶ್ರೀ ನಸೀರ್ ಅಹ್ಮದ್:-** ಐದೂವರೆ ಲಕ್ಷ ಕೋಟಿ ರೂ.ಗಳನ್ನು ಕೇಂದ್ರ ಬಜೆಟ್‌ನಲ್ಲಿ ಇಟ್ಟಿದ್ದಾರೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಡಾ: ತೇಜಸ್ವಿನಿ ಗೌಡ:-** ಈ ಪ್ರವಾಹ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ತುಂಬಾ ಕೆಲಸವನ್ನು ಮಾಡಿದ್ದಾರೆ. ಮಾಡುತ್ತಿದ್ದಾರೆ. ಅದು ದಾಖಲಾಗಬೇಕು.

(ಗೊಂದಲ)

ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷಿ ಯೋಜನೆ ಬಗ್ಗೆ ನಿಮಗೆ...

(ಗೊಂದಲ)

**Sri S.R.PATIL:-** It should not be diluted.

ಡಾ:ತೇಜಸ್ವಿನಿ ಗೌಡ:- ಈ ಯೋಜನೆಯನ್ನು ಜಾರಿಗೆ ತಂದರೆ ಪ್ರವಾಹ ನಿರ್ವಹಣೆಗೆ ಅನುಕೂಲವಾಗುತ್ತದೆ. ಇದರಲ್ಲಿ ಮಾನ್ಯ ಯಡಿಯೂರಪ್ಪನವರು lead ತೆಗೆದುಕೊಳ್ಳಬೇಕು ಎಂದು ಹೇಳಬಯಸುತ್ತೇನೆ.

(ಗೊಂದಲ)

ನನ್ನ ಹಕ್ಕನ್ನು ಮೊಟಕುಗೊಳಿಸಲು ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಕೆಲಸದ ಬಗ್ಗೆ ಹೇಳುತ್ತಿದ್ದೇನೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಸುದೀರ್ಘವಾದ ಉತ್ತರವನ್ನು ಮಾನ್ಯ ಕಂದಾಯ ಸಚಿವರು ನೀಡಿದ್ದಾರೆ. ನಾನು ಒಂದೆರಡು ವಿಷಯದಲ್ಲಿ clarifications ಕೇಳಬಯಸುತ್ತೇನೆ. ಇತಿಹಾಸದಲ್ಲಿಯೇ ಕಂಡರಿಯದಷ್ಟು ಭೂಮಿಯ ಕುಸಿತ ಉಂಟಾಗಿದೆ, ಭೂಮಿಯ ಕೊರೆತ ಉಂಟಾಗಿದೆ. ಇದಕ್ಕಾಗಿಯೇ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅದಕ್ಕಾಗಿ ಭೂಮಿ ಕುಸಿತಕ್ಕೆ, ಕೊರತೆಗೆ ಒಳಗಾದ ರೈತನಿಗೆ ಬದಲಿ ಭೂಮಿಯನ್ನು ಕೊಡಿ ಎಂದು ನಾನು ಮೊನ್ನೆ ಆಗ್ರಹ ಮಾಡಿದೆ. ಮತ್ತೆ ಸರಿಪಡಿಸಲು ಸಾಧ್ಯವಾಗದ ಹಾಗೆ ಭೂಮಿ ಹಾಳಾಗಿದೆ. ಹಾಳಾಗಿರುವ ಕೃಷಿ ಭೂಮಿಯಷ್ಟೇ ಭೂಮಿಯನ್ನು ರೈತನಿಗೆ ಕೊಡುತ್ತೀರಾ ಎನ್ನುವುದನ್ನು ಸರ್ಕಾರ ದಯಮಾಡಿ ಪ್ರಕಟಗೊಳಿಸಬೇಕು. ಎರಡನೆಯದಾಗಿ, 5,000ಕ್ಕಿಂತ ಹೆಚ್ಚು ಶಾಲಾ ಕಟ್ಟಡಗಳು ಬಿದ್ದು ಹೋಗಿವೆ. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಕ್ಕಳಿಗೆ ಎಲ್ಲಿ ಕಟ್ಟಡಗಳು ಲಭ್ಯವಿದೆ ಅಲ್ಲಿ ವಸತಿ ಶಾಲೆಗಳನ್ನು ನಿರ್ಮಾಣ ಮಾಡಬೇಕು. ಇನ್ನು ಎರಡು ವರ್ಷ ಮಕ್ಕಳು ಎಲ್ಲಿ ಓದಬೇಕು? ಆ ಮಕ್ಕಳಿಗೆ ಜಾಗವನ್ನು ಎಲ್ಲಿ ತೋರಿಸುತ್ತೀರಿ?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಇಲ್ಲಿ ನೆರೆ-ಪ್ರವಾಹದ ಬಗ್ಗೆ ಚರ್ಚೆ ನಡೆದಿದೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸಾವಿರಾರು ಮಕ್ಕಳು ರಸ್ತೆಯಲ್ಲಿ, ಕಾಳಜಿ ಕೇಂದ್ರಗಳಲ್ಲಿ ಇದ್ದಾರೆ. ಅವರನ್ನು ನಾವು ಶಾಲೆಗೆ ಕಳುಹಿಸಬೇಕಲ್ಲಾ. ಶಾಲಾ ಮಕ್ಕಳು ಎಲ್ಲಿ ಹೋಗಬೇಕು? ಮಕ್ಕಳು ಎಲ್ಲಿ ಕಲಿಯಬೇಕು?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ನಮ್ಮ ಬೇಡಿಕೆಗಳ ಬಗ್ಗೆ ಸರ್ಕಾರ ಉತ್ತರ ಹೇಳಬೆಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಕಂದಾಯ ಸಚಿವರು ಎಲ್ಲದಕ್ಕೂ ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಉತ್ತರವನ್ನು ಕೊಡಲೇಬೇಕಾಗುತ್ತದೆ. ಹಾಗೆ ಈ ಕೆಲಸವನ್ನು ಮಾಡಬೇಕಾಗುತ್ತದೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಕಂದಾಯ ಸಚಿವರು ನಮ್ಮ ಬೇಡಿಕೆಗಳ ಬಗ್ಗೆ ಉತ್ತರವನ್ನು ಕೊಡಬೇಕು.

**ಶ್ರೀ ಟಿ.ಎ.ಶರವಣ:-** ಮಾನ್ಯ ಕಂದಾಯ ಸಚಿವರು ಉತ್ತರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇವೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಸರ್ಕಾರವು ನಮ್ಮ ಬೇಡಿಕೆಗಳ ಬಗ್ಗೆ ಉತ್ತರವನ್ನು ಹೇಳಬೇಕು.

(ಗೊಂದಲ)

**ಶ್ರೀ ಐವನ ಡಿ'ಸೋಜಾ:-** ನಮಗೂ ಮಾತನಾಡಲು ಅವಕಾಶವನ್ನು ಕೊಡಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ನಮ್ಮ ಬೇಡಿಕೆಗಳಾದ, ಈ ನೆರೆ ಪ್ರವಾಹವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಣೆ ಮಾಡಿ ಠರಾವು ಮಾಡಬೇಕು. ಪ್ರವಾಹದಿಂದ ಮನೆಯನ್ನು ಕಳೆದುಕೊಂಡವರಿಗೆ 5 ಲಕ್ಷ ರೂ.ಗಳಿಂದ 10 ಲಕ್ಷ ರೂ. ಗಳಷ್ಟು ಪರಿಹಾರವನ್ನು ಕೊಡಬೇಕು. ನೆರೆ ಪ್ರವಾಹದಿಂದ ಬಾಧಿತವಾದ ಸ್ಥಳಗಳನ್ನು ಸುರಕ್ಷಿತವಾದ, ಎತ್ತರದ ಸ್ಥಳಗಳಿಗೆ ಸಂಪೂರ್ಣವಾಗಿ ಸ್ಥಳಾಂತರಿಸಬೇಕು. ಮತ್ತು ಕಬ್ಬಿಗೆ ಪ್ರತಿ ಎಕರೆಗೆ 50,000 ರೂ.ಗಳ ಪರಿಹಾರವನ್ನು ಕೊಡಬೇಕು. ಅದು 1 ಲಕ್ಷ ರೂ.ಗಳ ಬೆಳೆ ಇದ್ದರೂ 50,000 ರೂ.ಗಳನ್ನು ಕೊಡಿ ಎಂದು ಕೇಳುತ್ತಿದ್ದೇವೆ. ಇನ್ನುಳಿದ plantation crops, ಮಳೆ ಆಶ್ರಿತ ಬೆಳೆಗಳಿರಬಹುದು, ನೀರಾವರಿ ಬೆಳೆ ಇರಬಹುದು ಇವು ಎಷ್ಟು ಹಾನಿಯಾಗಿದೆ, ಅದಕ್ಕೆ ತಾವು ಏನು ಪರಿಹಾರ ನಿಗದಿ ಮಾಡಿದ್ದೀರಿ, ಅದಕ್ಕಿಂತ ಸ್ವಲ್ಪ ಜಾಸ್ತಿ ಪರಿಹಾರವನ್ನು ಕೊಟ್ಟುಬಿಡಿ ಸಾಕು.

(ಮುಂದು)

(208) 12-10-2019 (02-50) ಬಿಎಸ್‌ಡಿ-ಎಂಡಿ

**ಶ್ರೀ ಎಸ್.ಆರ್.ಪಾಟೀಲ್ (ಮುಂದು)**

ಇವುಗಳಿಗೆ ಪರಿಹಾರವನ್ನು ಕೊಡಬೇಕು, ಇದರ ಬಗ್ಗೆ ಉತ್ತರ ಕೊಡಬೇಕು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳಲ್ಲಿ 2 memorandum ಗಳನ್ನು ಕೊಟ್ಟಿದ್ದು, ಅವು final memorandum ಅಥವಾ preliminary memorandum ಎಂದು ತಿಳಿಸಬೇಕು. ಕೊಟ್ಟಿರುವ ಅಂಕಿ-ಅಂಶಗಳು ಅಂತಿಮವೇ? ಏಕೆಂದರೆ ಆಗಸ್ಟ್ ತಿಂಗಳಿನಲ್ಲಿ ಕೇಂದ್ರ ಸರ್ಕಾರಕ್ಕೆ ಕೊಟ್ಟ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

memorandum ನಲ್ಲಿ ರೂ.38,451 ಕೋಟಿ ಎಂದು ತಿಳಿಸಿದ್ದು, ಸೆಪ್ಟಂಬರ್ ತಿಂಗಳ memorandum ನಲ್ಲಿ ರೂ.35,160 ಕೋಟಿ ಎಂದು ತಿಳಿಸಿದ್ದು, ಸುಮಾರು ರೂ.3,000 ಕೋಟಿಗಳ ವ್ಯತ್ಯಾಸ ಇದೆ. ಆದ್ದರಿಂದ ಇದು ಅಂತಿಮವೇ?

ಇನ್ನು ಎರಡನೆಯದಾಗಿ, *Inter-Ministerial Central Team* ಕರ್ನಾಟಕಕ್ಕೆ ಭೇಟಿ ನೀಡಿ, ಛಿಝಟಜಟಿಣ ಮಾಡಿದ ನಂತರ ಶಿಫಾರಸ್ಸು ಮಾಡಿದ್ದಾರೆ. ರಾಜ್ಯ ಸರ್ಕಾರದಿಂದ ಹಲವಾರು clarifications, certificates and reconciliation figures ಗಳೆಲ್ಲವನ್ನು ಕೇಳಿದ್ದು, ಇವುಗಳನ್ನು ನೀಡಲಾಗಿದೆಯೇ? ಇವುಗಳನ್ನು ನೀಡಿದ್ದರೆ ಅವರ ಶಿಫಾರಸ್ಸುಗಳು Home Minister ಗೆ ಅಥವಾ Cabinet Sub Committee ಗೆ ತಲುಪಿವೆಯೇ? ಅವರ ಶಿಫಾರಸ್ಸು ತಲುಪಿದ್ದರೆ ಎಷ್ಟು ಹಣಕ್ಕೆ ಶಿಫಾರಸ್ಸು ಮಾಡಿದ್ದಾರೆ? ಕೇಂದ್ರ ಸರ್ಕಾರದಿಂದ ಎಷ್ಟು ಹಣವನ್ನು ನಾವು ನಿರೀಕ್ಷೆ ಮಾಡಬಹುದು.

ಇನ್ನು ಮೂರನೆಯದಾಗಿ ನಿನ್ನೆ ನಾನು ಮನವಿ ಮಾಡಿದಂತೆ ನೆರೆ ಹಾವಳಿಯನ್ನು ರಾಷ್ಟ್ರೀಯ ವಿಪತ್ತಿನಡಿ..... ಅದಕ್ಕೇನು ಪ್ರೊಸೀಜರ್ ಇಲ್ಲ, ನಾವು demand ಮಾಡೋಣ. Severe Natural Disaster Calamity ಎಂಬ ಪದ ಇದೆ. ಆದರೆ ಅದು Disaster Management Act ನಲ್ಲಿ ಇಲ್ಲ. ಆದರೆ ನಾವು ಒಂದು ನಿರ್ಣಯ ಮಾಡಿ ಬೇಡಿಕೆ ಇಡೋಣ. ಮಾನ್ಯ ಮುಖ್ಯಮಂತ್ರಿಗಳು ಸರ್ವ ಪಕ್ಷಗಳ ನಿಯೋಗವನ್ನು ಕೇಂದ್ರ ಸರ್ಕಾರದ ಬಳಿಗೆ ತೆಗೆದುಕೊಂಡು ಹೋಗಬೇಕೆಂದು ನಿನ್ನೆ ಒತ್ತಾಯ ಮಾಡಿದ್ದೇವೆ. ನಿರ್ಣಯ ಸರ್ಕಾರದ hands strengthen ಆಗುತ್ತದೆ. ದಯವಿಟ್ಟು ಈ ಮೂರು clarifications ಗೆ ಉತ್ತರವನ್ನು ಬಯಸುತ್ತೇನೆ.

**Sri S.R.PATIL:-** Mr.Chairman Sir, Important issue is going to be diluted. Let me expect answer from the Government.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನನಗೆ ಒಂದು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:-** ನಿಮ್ಮ ನಾಯಕರು ವಿಷಯ ಜುಟಣಾಣಜ ಆಗುತ್ತಿದೆ, ಸರ್ಕಾರವು ಉತ್ತರ ಕೊಡಬೇಕೆಂದು ಹೇಳುತ್ತಿದ್ದಾರೆ.



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri S.R.PATIL:-** Sir, I have already demanded that, it should be treated as a National Calamity. Whether this Government is prepared to pass a resolution in this regard and send it to the Central Government. Let the Government reply on that point only.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರು ನೆರೆ ಹಾವಳಿಯಿಂದ ಶಾಲೆಗಳು ಹಾಳಾಗಿರುವುದರ ಬಗ್ಗೆ ಪ್ರಸ್ತಾಪಿಸಿದ್ದು, ಅವರಷ್ಟೇ ಕಾಳಜಿ ನಮಗೂ ಇದೆ. ಈಗಾಗಲೇ ಶಾಲೆಗಳನ್ನು ಎಲ್ಲೆಲ್ಲಿ shift ಮಾಡಬೇಕೋ, ಅಲ್ಲಿಗೆ ಮಾಡಿದ್ದೇವೆ, ದೇವಸ್ಥಾನ ಇರಬಹುದು, ಛತ್ರಗಳು ಇರಬಹುದು, ಅಲ್ಲಿಗೆ shift ಮಾಡಿ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಯಾವುದೇ ರೀತಿ ತೊಂದರೆಯಾಗದಂತೆ ವ್ಯವಸ್ಥೆ ಮಾಡಿದ್ದೇನೆ. ಅಂಕಪಟ್ಟಿ ಕಳೆದು ಹೋಗಿದ್ದರೆ ಅಥವಾ ನೀರಿನಲ್ಲಿ ಕೊಚ್ಚಿಹೋಗಿದ್ದರೆ ಕೂಡಲೇ ಜಿಲ್ಲಾಧಿಕಾರಿಗಳು co-ordinate ಮಾಡಿ ತಕ್ಷಣವೇ ಅಂಕಪಟ್ಟಿ ಕೊಡುವಂತೆ ನಿನ್ನೆಯೂ ಹೇಳಿದ್ದೇನೆ.

ಇನ್ನು ಎರಡನೆಯದಾಗಿ ಅಂಕಿ ಅಂಶಗಳಲ್ಲಿ ಫೈನಲ್ ಯಾವುದು ಎಂದು ಕೇಳಿದ್ದು, ಕೊನೆಯದಾಗಿ ನಾವು ನೀಡಿರುವ ರೂ.35,160 ಕೋಟಿಗಳು ಅಂತಿಮವಾಗಿದೆ. ಮಾನ್ಯ ಸದಸ್ಯರು ಪ್ರವಾಹ ಬಂದ ಸಮಯದಲ್ಲಿ ಹೊಲಗಳಲ್ಲಿ ಮಣ್ಣು ಕೊಚ್ಚಿಕೊಂಡು ಹೋಗಿದೆ, ಕೆಲವು ಕಡೆ ಒಂದೆರಡು ಅಡಿ silt ಬಂದಿದೆ ಎಂದು ಹೇಳಿದರು. ಅದಕ್ಕೂ ರೂ.12,200/-ಗಳನ್ನು ಪರಿಹಾರವಾಗಿ ಕೊಡುತ್ತೇವೆ. ಮಲೆನಾಡು ಪ್ರದೇಶ ಅಥವಾ ಇನ್ನಿತರ ಕಡೆ land sliding ಆಗಿರುವಲ್ಲಿ per hectare ರೂ.35,500/-ಗಳನ್ನು ಪರಿಹಾರವಾಗಿ ಕೊಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಗಹನವಾದ ವಿಚಾರಗಳನ್ನು ಪ್ರಸ್ತಾಪಿಸಿದ್ದು, ಬಿದ್ದುಹೋಗಿರುವ ಮನೆಗಳು low-lying area ಗಳಲ್ಲಿ ಇದ್ದು, ಹೊಸ ಮನೆಗಳನ್ನು ಶಾಶ್ವತವಾಗಿ ಮಾಡಬೇಕೆಂದು ಹೇಳಿದ್ದಾರೆ. ಸರ್ಕಾರವೂ ಅವರ ಜೊತೆಯಲ್ಲಿ ಎತ್ತರದ ಪ್ರದೇಶಗಳಲ್ಲಿ ಉಚಿತ ನಿವೇಶನ ನೀಡಿ ರೂ.5 ಲಕ್ಷಗಳಲ್ಲಿ ಮನೆ ಕಟ್ಟಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ರಾಷ್ಟ್ರೀಯ ವಿಪತ್ತು ಘೋಷಣೆ ಮಾಡುವುದರ ಬಗ್ಗೆ ಪ್ರಸ್ತಾಪಿಸಿದ್ದು, ಆ ಕಡೆಯವರು ನಮಗಿಂತ ಹೆಚ್ಚು ಅವಧಿ ಸರ್ಕಾರ ನಡೆಸಿದ್ದಾರೆ. ಅದಕ್ಕೆ ನೀತಿ-ನಿಯಮಾವಳಿಗಳಿದ್ದು, ಏಕಾಏಕಿ ಮಾಡುವುದಕ್ಕೆ ಅಸಾಧ್ಯವಾದ್ದರಿಂದ ಮಾಡುವುದಕ್ಕೆ ಆಗುವುದಿಲ್ಲ. ಒಟ್ಟಾರೆ ವಿರೋಧ ಪಕ್ಷದವರು ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಯವರು ಇಡೀ ದೇಶಕ್ಕೆ ಮಾದರಿಯಾಗಬೇಕೆಂದು ಹೇಳಿದ್ದಾರೆ. ಈಗಾಗಲೇ ಮಾನ್ಯ ಯಡಿಯೂರಪ್ಪನವರು ಇಡೀ ದೇಶಕ್ಕೆ ಮಾದರಿಯಾಗುವಂತಹ ಪ್ಯಾಕೇಜ್ ಅನ್ನು ಎಲ್ಲರಿಗೂ ಕೊಟ್ಟಿದ್ದಾರೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು)**

ನಾನೂ ಕೂಡ ಕಂದಾಯ ಸಚಿವನಾಗಿ ಕಡಿಮೆ ಹಣವನ್ನು ಕೇಳಿದ್ದೆನು. ಮೊದಲು ಎ, ಬಿ, ಸಿ ವರ್ಗ ಎಂದು ಇತ್ತು. ಮೊದಲು ರೂ.1 ಲಕ್ಷ ಘೋಷಣೆ ಮಾಡಿದ್ದು, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ರೂ.1 ಲಕ್ಷವನ್ನು ರೂ.2 ಲಕ್ಷಕ್ಕೆ ಹೆಚ್ಚುಗೊಳಿಸಿ ಘೋಷಿಸುವಂತೆ ವಿನಂತಿಸಿದೆ. ಆದರೆ ಮಾನ್ಯ ಮುಖ್ಯಮಂತ್ರಿಯವರು 'ನಿನಗೆ ರೈತರ ಕಷ್ಟ ಗೊತ್ತಿದೆಯೇ? ಆ ಹಣವನ್ನು ರೂ.5 ಲಕ್ಷಕ್ಕೆ ಹೆಚ್ಚುಗೊಳಿಸಿ' ಎಂದು ತಿಳಿಸಿದರು.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು)**

ಆದ್ದರಿಂದ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ದೇಶಕ್ಕೆ ಮಾದರಿಯಾಗುವ ಕೆಲಸ ಮಾಡಿದ್ದಾರೆ. ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ರೂ.95,000/- ಗಳನ್ನು ಕೊಟ್ಟಿದ್ದಾರೆ. ಅವರು ರೂ.5 ಲಕ್ಷ ಕೊಟ್ಟಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯವನ್ನು ನೋಡಿ ಮಹಾರಾಷ್ಟ್ರ ರಾಜ್ಯ ಕಲಿಯಬೇಕು, ಆದರೆ ಮಹಾರಾಷ್ಟ್ರ ರಾಜ್ಯವನ್ನು ನೋಡಿ ಇವರು ಕಲಿಯಬಾರದು.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಪೆಟ್ಟಿಗೆ ಅಂಗಡಿಗಳು ಮತ್ತು ನೇಕಾರರಿಗೆ ಪರಿಹಾರ ಕೊಡುವುದಕ್ಕೆ ಅವಕಾಶವಿಲ್ಲವೆಂದು ಬಿಟ್ಟಿದ್ದರು. ಗುಡಿಸಲುಗಳಿಗೆ ಕೇಂದ್ರ ಸರ್ಕಾರದ ನಿಯಮಾವಳಿಗಳಲ್ಲಿ ಹೆಚ್ಚು ಪರಿಹಾರ ಕೊಡಲಾಗುವುದಿಲ್ಲ. ನಾವು ಗುಡಿಸಲುಗಳು ಬಿದ್ದು ಹೋಗಿದ್ದರೆ ಅದಕ್ಕೂ ರೂ.10 ಸಾವಿರ ಕೊಡುವ ಕೆಲಸ ಮಾಡಿದ್ದೇವೆ. ನನ್ನ ಉತ್ತರವನ್ನು ಸದನಕ್ಕೆ ತಿಳಿಸಿದ್ದೇನೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ರೂ.5 ಲಕ್ಷಗಳಿಂದ ರೂ.10 ಲಕ್ಷಗಳಿಗೆ ಹೆಚ್ಚು ಮಾಡಬೇಕು. ಕೊಡಗು ಜಿಲ್ಲೆಯಲ್ಲಿ ರೂ.9.85 ಲಕ್ಷ ನೀಡಿದಂತೆ ರೂ.10 ಲಕ್ಷ ಕೊಡಲು ಒಪ್ಪಲಿಲ್ಲ. ಒಟ್ಟಾರೆ ಎಲ್ಲಾ ಗ್ರಾಮಗಳನ್ನು ಸ್ಥಳಾಂತರ ಮಾಡಲು ಒಪ್ಪಲಿಲ್ಲ. ಬೆಳೆ ನಾಶದ ಪರಿಹಾರವಾಗಿ NDRF (National Disaster Response Fund) and SDRF (State Disaster

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Response Fund) norms ಹಾಗೂ Government guidelines ಬದಿಗಿಟ್ಟು ಕಬ್ಬು ಬೆಳೆ ನಾಶಕ್ಕೆ ಎಕರೆಗೆ ರೂ.50 ಸಾವಿರ ಹಾಗೂ ಉಳಿದಂತೆ ನೀರಾವರಿ ಜಮೀನು ಇರಬಹುದು, plantation ಜಮೀನು ಇರಬಹುದು, ಇತರ ಜಮೀನುಗಳಲ್ಲಿ ಎಷ್ಟು ನಷ್ಟ ಆಗಿದೆಯೋ, ಅಷ್ಟು ಭರಿಸಬೇಕೆಂದು ಹೇಳಿದ್ದರೂ ಆ ಹಣವನ್ನು ಭರಿಸಿಲ್ಲ. ಆದ್ದರಿಂದ ಸರ್ಕಾರದ ಉತ್ತರವನ್ನು ನಾವು ವಿರೋಧಿಸಿ ಬಾವಿಗೆ ಇಳಿಯುತ್ತಿದ್ದೇವೆ.

**(ಈ ಹಂತದಲ್ಲಿ ಸರ್ಕಾರದ ಉತ್ತರವನ್ನು ವಿರೋಧಿಸಿ, ವಿರೋಧ ಪಕ್ಷದ ನಾಯಕರು ಸೇರಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಭಾವಿಯಲ್ಲಿ ಧರಣಿ ನಿರತರಾದರು)**

**10. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಕಾರ್ಯದರ್ಶಿ, ಕ.ವಿ.ಪ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ:

01. ಕರ್ನಾಟಕ ಧನವಿನಿಯೋಗ (ಸಂಖ್ಯೆ-3) ವಿಧೇಯಕ, 2019
02. ಕರ್ನಾಟಕ ಧನವಿನಿಯೋಗ (ಸಂಖ್ಯೆ-4) ವಿಧೇಯಕ, 2019
03. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2019.

**ಸಭಾಪತಿಯವರು:** ಮಂಡಿಸಲಾಯಿತು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಮನವಿ ಏನೆಂದರೆ, ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಯಲ್ಲಿ ಇದ್ದಾರೆ. ನಾವು ಬಾವಿಗೆ ಹೋಗುತ್ತೇವೆ ಎಂದು ಹೇಳಿದ್ದೆವು. ಸರ್ಕಾರವು ಎಲ್ಲವನ್ನು ಒಪ್ಪಿಕೊಂಡಿದೆ. ಆದರೆ National Calamity ಎಂದು ಘೋಷಣೆ ಮಾಡುವ ಬಗ್ಗೆ ಸ್ವಲ್ಪ ಚಿಂತನೆ ಮಾಡಿ, ಕೇಂದ್ರ ಸರ್ಕಾರದಿಂದ ಮಾಡುವ ಪ್ರಯತ್ನ ಮಾಡಿದರೆ ತಪ್ಪೇನಿದೆ? ಆ ಪ್ರಯತ್ನವನ್ನು ಮಾಡಬೇಕು. ಸುಮ್ಮನೆ ಬಾವಿಗೆ ಹೋಗುವ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** (ಸ್ವಸ್ಥಾನಕ್ಕೆ ಮರಳಿ) ಮಾನ್ಯ ಸಭಾಪತಿಯವರೇ, ಮುಖ್ಯ ಬೇಡಿಕೆಗಳಲ್ಲಿ partially fulfil ಮಾಡಿದ್ದಾರೆ. ನಮ್ಮ ಮುಖ್ಯ ಬೇಡಿಕೆಗಳಲ್ಲಿ ರೂ. 5 ಲಕ್ಷದಿಂದ ರೂ.10 ಲಕ್ಷ ಪರಿಹಾರವನ್ನು ಏರಿಸುವ ಕೆಲಸ ಮಾಡಿಲ್ಲ. ಸ್ಥಳಾಂತರ ಮಾಡಿಸುವ ಕೆಲಸ ಇಲ್ಲ. ಬೆಳೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಶದ ಪರಿಹಾರದ ಬಗ್ಗೆ ಇಲ್ಲ. National Calamity ಎಂದು ಘೋಷಣೆ ಮಾಡಿಲ್ಲ. ನಮ್ಮ ಪ್ರಮುಖ ಬೇಡಿಕೆಗಳನ್ನು ಈಡೇರಿಸಿಲ್ಲ. ಇವುಗಳಿಗೆ ಸರ್ಕಾರವು ಸ್ಪಂದಿಸಿಲ್ಲ. ನೆರೆ ಪೀಡಿತ ಜನರ ಬಗ್ಗೆ ತಾಯಿ ಹೃದಯ, ತಾಯಿ ಕರುಳಿನ ಮಮತೆ ಹೊಂದಿರಬೇಕು. ಅವರೆಲ್ಲರೂ ನೀರಿನಲ್ಲಿ ಬಿದ್ದು ಇವತ್ತಿಗೂ ರಸ್ತೆ ಪಕ್ಕದಲ್ಲಿ ಇದ್ದಾರೆ. ಅವರೆಲ್ಲರೂ ಬೀದಿ ಬಿಕಾರಿಗಳಾಗುವ ಪರಿಸ್ಥಿತಿ ಬಂದಿದೆ. ದಯಮಾಡಿ ಇದರ ಬಗ್ಗೆ ಸರ್ಕಾರ ಗಮನಹರಿಸಬೇಕಲ್ಲವೇ? ಸರ್ಕಾರಕ್ಕೆ ತಾಯಿ ಹೃದಯ ಇರಬೇಕು. ತಾಯಿ ಕರುಳು ಇರಬೇಕು.

(ಮುಂದು)

(209) 12.10.2019 3.00 ಪಿಕೆ:ಎಕೆ

(ಸಭಾಪತಿಗಳ ಉಪಸ್ಥಿತಿ)

**11. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**(ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2019**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, 2019-20ನೇ ಸಾಲಿನ ಫೆಬ್ರವರಿ ತಿಂಗಳಿನಲ್ಲಿ ಹಿಂದಿನ ಸರ್ಕಾರ ಆಯವ್ಯಯವನ್ನು ವಿಧಾನ ಮಂಡಲದ ಮುಂದೆ ಮಂಡಿಸಿ 4 ತಿಂಗಳಿಗೂ, ಮತ್ತೆ ಹೊಸ ಸರ್ಕಾರ ಬಂದ ನಂತರ 3 ತಿಂಗಳ ಅವಧಿಗೆ, ಹಾಗೂ ಈಗ 2019-20 ಸಾಲಿನ 7 ತಿಂಗಳಿಗೆ ಅಂದರೆ, ಅಕ್ಟೋಬರ್ 2019ರವರೆಗೆ ರೂ.1,42,91,938.51 ಲಕ್ಷಗಳ ಲೇಖಾನುದಾನವನ್ನು ಕೆಳಮನೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಈಗ ಮೇಲ್ಮನೆಗೆ ಬಂದಿದೆ. 2019-20ನೇ ಸಾಲಿನ ಪೂರ್ಣ ವರ್ಷಕ್ಕೆ ವೆಚ್ಚ ಮಾಡಲು 2,40,74,585.77 ಲಕ್ಷಗಳಿಗೆ ಸದನದ ಅನುಮೋದನೆ ಕೋರಲಾಗಿದೆ. ಇದರಲ್ಲಿ ರೂ. 1,84,64,949.77 ಲಕ್ಷಗಳು ರಾಜಸ್ವಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಬಂಧಿಸಿದ್ದಾಗಿದೆ. ಬಂಡವಾಳ ವೆಚ್ಚಗಳಿಗೆ ರೂ. 56,09,636.00 ಲಕ್ಷ ಸಂಬಂಧಿಸಿದೆ. ಈ ಮೊತ್ತವನ್ನು ಸಾರ್ವಜನಿಕ ಋಣ ರೂ. 9,96,436.00 ಲಕ್ಷಗಳಾಗಿವೆ. ತಮಗೆ ಗೊತ್ತಿರುವ ಹಾಗೆ ಆಯವ್ಯಯದ ಗಾತ್ರ ರೂ. 2,34,153 ಕೋಟಿಯಾಗಿದ್ದು ಈ ಮೊತ್ತವನ್ನು 2018-19ನೇ ಸಾಲಿನ ಆಯವ್ಯಯ ಅಂದಾಜು ರೂ. 2,18,488 ಕೋಟಿಗೆ ಹೋಲಿಸಿದರೆ ಶೇಕಡ 7.17ರಷ್ಟು ಹೆಚ್ಚಾಗಿದೆ. ರಾಜಸ್ವ ಸ್ವಂತ ತೆರಿಗೆಯಲ್ಲಿ ವಾಣಿಜ್ಯ ತೆರಿಗೆ ರೂ. 76,046 ಕೋಟಿಗಳು, ಅಬಕಾರಿ ತೆರಿಗೆಯಲ್ಲಿ ರೂ. 20,950 ಕೋಟಿಗಳು, ಮೋಟಾರು ವಾಹನ ತೆರಿಗೆಯಲ್ಲಿ ರೂ. 7100.00 ಕೋಟಿಗಳು, ನೋಂದಣಿ ಮತ್ತು ಮುದ್ರಾಂಕ ತೆರಿಗೆಯಲ್ಲಿ ರೂ. 11,828 ಕೋಟಿಗಳು ಹಾಗೂ ಇತರೆ ತೆರಿಗೆಗಳು ರೂ. 3,009.00 ಕೋಟಿಗಳಾಗಿವೆ. ವಾಣಿಜ್ಯ ತೆರಿಗೆ ರೂ. 76,046 ಕೋಟಿಗಳಲ್ಲಿ ಜಿಎಸ್‌ಟಿ ನಷ್ಟ ಪರಿಹಾರ ರೂ. 17,240 ಕೋಟಿ ಒಳಗೊಂಡಿರುತ್ತದೆ. ಹಿಂದಿನ ವರ್ಷದ ರಾಜ್ಯದ ಸ್ವಂತ ತೆರಿಗೆಗಳನ್ನು ಹೋಲಿಸಿದಲ್ಲಿ ರೂ. 1,06,021 ಕೋಟಿಗಳಿಗೆ ಹೋಲಿಸಿದಲ್ಲಿ ಶೇಕಡ 11.6ರಷ್ಟು ಬೆಳವಣಿಗೆ ಅಂದಾಜಿಸಲಾಗಿದೆ.

ಮಾನ್ಯ ಸಭಾಪತಿಯವರೇ, ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಪ್ರಕಾರ ರಾಜ್ಯ ಸರ್ಕಾರ ರಾಜಸ್ವ ಮಿತಿಯನ್ನು ಕಾಪಾಡಬೇಕು, ವಿತ್ತೀಯ ಕೊರತೆ ರಾಜ್ಯದ ಆಂತರಿಕ ಉತ್ಪನ್ನದ ಶೇಕಡ 3ರ ಮಿತಿಯೊಳಗೆ ಇರಬೇಕು ಹಾಗೂ ರಾಜ್ಯದ ಒಟ್ಟು ಬಾಕಿ, ಹೊಣೆಗಾರಿಕೆಗಳು ರಾಜ್ಯದ ಆಂತರಿಕ ಉತ್ಪನ್ನದ ಶೇಕಡ 25ರ ಮಿತಿಯೊಳಗೆ ಇರಬೇಕು. ಆ ಮಿತಿಯ ಒಳಗೆಯೇ ನಾವು ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇವೆ. ತೆರಿಗೆ ಸಂಗ್ರಹದಲ್ಲಿ ಯಾವುದೇ ಕಾರಣಕ್ಕೂ ಹಿಂದೆ ಬೀಳುವುದಿಲ್ಲ ಎಂದು ಸದನಕ್ಕೆ ಆಶ್ವಾಸನೆ ಕೊಡುತ್ತೇನೆ. ನಾವೇನು ನಿರೀಕ್ಷೆ ಮಾಡಿದ್ದೆವೋ ಅಷ್ಟೇ ತೆರಿಗೆಯನ್ನು ಸಂಗ್ರಹ ಮಾಡುತ್ತೇವೆ; ಇದರಲ್ಲಿ ಯಶಸ್ವಿ ಆಗುತ್ತೇವೆ. ಮೋಟಾರು ವಾಹನ ತೆರಿಗೆಯ ಸಂಬಂಧ ಸ್ವಲ್ಪ ಹಿನ್ನಡೆಯಾಗಿತ್ತು, ಅದನ್ನು ಸುಧಾರಣೆ ಮಾಡುವ ಕೆಲಸವನ್ನೂ ಸಹ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಮಾನ್ಯ ಸಭಾಪತಿಯವರೇ, ಸೆಪ್ಟೆಂಬರ್ ತಿಂಗಳವರೆಗೆ ರಾಜ್ಯದ ಸ್ವಂತ ತೆರಿಗೆ ರೂ. 1,18,993 ಕೋಟಿಗಳು ಆಯವ್ಯಯ ಅಂದಾಜಿಗೆ ಭರ್ತಿಯಾಗಿ ರೂ. 59,062 ಕೋಟಿ ಸಂಗ್ರಹಣೆಯಾಗಿದೆ. ಇದು ಆಯವ್ಯದ ಶೇಕಡ 49.60 ರಷ್ಟಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 15.30ರಷ್ಟು ಹೆಚ್ಚಾಗಿರುತ್ತದೆ ಎನ್ನುವುದನ್ನು ಈ ಮನೆಯ ಗಮನಕ್ಕೆ ತರಬಯಸುತ್ತೇನೆ.

ಸಾರ್ವಜನಿಕ ಋಣಗಳನ್ನೊಳಗೊಂಡಂತೆ ರಾಜ್ಯದ ಒಟ್ಟು ವೆಚ್ಚ ಆಯವ್ಯಯದ ರೂ. 2,34,053 ಕೋಟಿಗಳಿಗೆ ಎದುರಾಗಿ ರೂ. 92,270 ಕೋಟಿ ಆಗುತ್ತದೆ. ಇದು ಆಯವ್ಯಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದಾಜಿಗಿಂತ ಶೇಕಡ 39.40 ರಷ್ಟಿದೆ. ರಾಜಸ್ವದ ವೆಚ್ಚವೂ ಸಹ ಆಯವ್ಯಯದ ಅಂದಾಜು ರೂ. 1,80,605 ಕೋಟಿಗೆ ಎದುರಾಗಿ ರೂ. 74,975 ಕೋಟಿಯಾಗಿದೆ. ಇದು ಆಯವ್ಯಯ ಅಂದಾಜಿಗೆ ಶೇಕಡ 41.30 ರಷ್ಟಾಗಿರುತ್ತದೆ. ಬಂಡವಾಳ ವೆಚ್ಚ ಆಯವ್ಯಯದ ಅಂದಾಜಿಗೆ ರೂ.42.580 ಕೋಟಿ ಎದುರಿಗೆ ರೂ. 12,910 ಕೋಟಿ ಆಗಿರುತ್ತದೆ. ಇದು ಆಯವ್ಯಯದ ಅಂದಾಜಿಗೆ ಶೇಕಡ 30.30ರಷ್ಟಿದೆ. ರಾಜ್ಯದ ಸಾರ್ವಜನಿಕ ಋಣ ಆಯವ್ಯಯದ ಅಂದಾಜು ರೂ. 9,964 ಕೋಟಿ ಎದುರಿಗೆ ರೂ. 4,375 ಕೋಟಿ ಆಗುತ್ತದೆ. ಇದು ಆಯವ್ಯಯದ ಅಂದಾಜು 43.90ರಷ್ಟಿದೆ.

ಮಾನ್ಯ ಸಭಾಪತಿಯವರೇ, ಬರುವಂತಹ ದಿವಸಗಳಲ್ಲಿ, ನನಗೆ ವಿಶ್ವಾಸ ಇರುವಂತೆ, ಹಿಂದಿನ ಸರ್ಕಾರ ಏನು ಬಜೆಟ್ ಮಂಡನೆ ಮಾಡಿತ್ತೋ ಅದರಲ್ಲಿ ಒಂದು ಶಬ್ದವನ್ನೂ ವ್ಯತ್ಯಾಸ ಮಾಡದೇ ಮತ್ತೊಮ್ಮೆ ಅದೇ ಬಜೆಟ್ಟನ್ನು ಮಂಡನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಫೆಬ್ರವರಿಯಲ್ಲಿ ಬಜೆಟ್ ಮಂಡನೆ ಮಾಡುವ ಸಂದರ್ಭದಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿದೆ. ಆ ಭಾಗದ ನಾಯಕರಲ್ಲಿ ಕೇಳಲು ಇಚ್ಛೆಪಡುವುದೇನೆಂದರೆ, 7 ಲಕ್ಷ ಹೆಕ್ಟೇರ್ ಭೂಮಿ ಹಾನಿಯಾಗಿದೆ. ತಾವೇ ಇದ್ದಾಗ ಜಿಲ್ಲಾಧಿಕಾರಿಗಳ ಸಮಕ್ಷಮ ನಾವು ಚರ್ಚೆ ಮಾಡಿದ್ದೇವೆ. ಇವತ್ತು ದಾನಿಗಳಿಂದ ರೂ. 300 ಕೋಟಿ ಸಂಗ್ರಹವಾಗಿದೆ. ಈ ದೇಶದ ಇತಿಹಾಸದಲ್ಲಿ ಭೂಮಿ ಹಾನಿಗೆ ಸಂಬಂಧಪಟ್ಟಂತೆ ಎನ್.ಡಿ.ಆರ್.ಎಫ್ ನಾರ್ಮ್ಸ್ ಮೀರಿ ಹೆಚ್ಚು ಹಣ ಕೊಟ್ಟಂಥ ಉದಾಹರಣೆ ಇದೆಯೇ ಹೇಳಿ. ಆದರೆ ನಾವು, ಒಂದು ಹೆಕ್ಟೇರ್ ಖುಷ್ಕಿ ಬೆಳೆಗೆ ಇದ್ದ ರೂ. 6,800 ಮೊತ್ತಕ್ಕೆ ರೂ. 10,000 ಸೇರಿಸಿ ರೂ. 16,800 ಕೊಟ್ಟಿದ್ದೇವೆ. ತೋಟಗಾರಿಗೆ ಮತ್ತು ನೀರಾವರಿ ಬೆಳೆಗೆ ರೂ. 13,500 ಇದ್ದದ್ದು 23,500ಕ್ಕೇರಿಸಿ ಕೊಟ್ಟಿದ್ದೇವೆ. ಶಾಶ್ವತ ನೀರಾವರಿ ಬೆಳೆಗಳಿಗೆ ರೂ. 18,000 ಇದ್ದುದನ್ನು ರೂ. 28,000ಕ್ಕೇರಿಸಿ ಕೊಟ್ಟಿದ್ದೇವೆ. ತಾವು, ಕಬ್ಬಿಗೆ ಹೆಚ್ಚು ಹಣವನ್ನು ಕೊಡಬೇಕು ಎಂದು ಹೇಳುತ್ತೀರಿ. ಇವತ್ತಿನ ಹಣಕಾಸಿನ ಪರಿಸ್ಥಿತಿಯಲ್ಲಿ ಇದಕ್ಕಿಂತಲೂ ಹೆಚ್ಚು ಹಣ ಕೊಡುವಂತಹ ಸ್ಥಿತಿಯಲ್ಲಿ ಇಲ್ಲ. ಅತಿವೃಷ್ಟಿಯಿಂದ ಜನ ಕಂಗಾಲಾಗಿರುವುದರಿಂದ ಬೇರೆ ಹಣವನ್ನು ಡೈವರ್ಟ್ ಮಾಡಿ ಇದಕ್ಕೆ ಕೊಡುವ ಪ್ರಯತ್ನ ಮಾಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರೇ ತಾವೂ ಸಂಬಂಧಪಟ್ಟ ಮೀಟಿಂಗ್‌ನಲ್ಲಿದ್ದಿರಿ. 11,687 'ಎ' ಕ್ಯಾಟಗರಿ ಮನೆಗಳು ಹಾನಿಯಾಗಿವೆ. 31,206 'ಬಿ' ಕ್ಯಾಟಗರಿ ಮನೆಗಳು ಹಾನಿಯಾಗಿವೆ. ಮನೆಯ ಒಂದು ಕಡೆಯ ಗೋಡೆ ಬಿದ್ದಿದೆ, ಮತ್ತೆ ಮಳೆಯಾಗಿ ಮನೆ ಬಿದ್ದು ಜೀವಹಾನಿ ಆಗಬಹುದು ಎಂದು, ಮೊದಲು ನಾವು 'ಎ' ಕ್ಯಾಟಗರಿಯ 11,687 ಮನೆಗಳಿಗೆ ರೂ. 5 ಲಕ್ಷ ಕೊಡುತ್ತೇವೆ ಎಂದು ಹೇಳಿದ್ದಂಥಾದ್ದಕ್ಕೆ 31206 ಮನೆಗಳನ್ನು ಸೇರಿಸಿ ಒಟ್ಟು 42893 ಮನೆಗಳಿಗೂ ಸಹ, ಅಂದರೆ 'ಎ' ಮತ್ತು 'ಬಿ' ಕ್ಯಾಟಗರಿಯ ಮನೆಗಳಿಗೆ ರೂ. 5 ಲಕ್ಷ ಕೊಡುವ ತೀರ್ಮಾನ

ಮಾಡಿದ್ದೇವೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಶೆಡ್‌ಗಳನ್ನು ಹಾಕಿಕೊಳ್ಳಲು ರೂ. 50 ಸಾವಿರ ಕೊಟ್ಟಿದ್ದೇವೆ; ಅವರು ಬಾಡಿಗೆ ಮನೆಯಲ್ಲಿ ಇರುತ್ತೇವೆ ಎಂದು ನಿರ್ಧರಿಸಿದರೆ ರೂ. 5 ಸಾವಿರ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮಾನ್ಯ ಸಭಾಪತಿಯವರೇ, ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ, ನಿರಾಶ್ರಿತ ಶಿಬಿರಗಳಲ್ಲಿ ಏನು 2,03,633 ಜನರಿದ್ದರೋ ಅವರಿಗೆ ರೂ. 10 ಸಾವಿರ ಮೊತ್ತವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರುಗಳು ಮಾತನಾಡುತ್ತಾ, ಇನ್ನೂ ಹೆಚ್ಚಾಗಿ ಕೊಡಬೇಕು ಎಂದು ಹೇಳಿದರು. ಮಾನ್ಯ ಸಭಾಪತಿಯವರೇ, ನಾನು ರೈತರ ಪರ ಇರುವಂಥವನು. ಹಣಕಾಸಿನ ಸ್ಥಿತಿ ಸರಿಯಾಗಿದ್ದಿದ್ದರೆ ಈ ರೂ. 10 ಸಾವಿರದ ಜಾಗದಲ್ಲಿ ಇನ್ನೂ ಹೆಚ್ಚಿನ ಮೊತ್ತವನ್ನು ಕೊಡುತ್ತಿದ್ದೆ. ಆದರೆ, ಇವತ್ತಿನ ಹಣಕಾಸಿನ ಸ್ಥಿತಿಯಲ್ಲಿ ಅಷ್ಟು ಕೊಡಲು ಸಾಧ್ಯವಾಗುತ್ತಿಲ್ಲ. ತಾವುಗಳು ಅರ್ಥ ಮಾಡಿಕೊಳ್ಳುತ್ತೀರಿ ಎಂದು ನಾನು ಭಾವಿಸಿದ್ದೇನೆ. ದಯವಿಟ್ಟು ಈ ಬಾರಿ ಸಹಕಾರ ಕೊಡಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಡಿಸೆಂಬರ್ ತಿಂಗಳ ನಂತರ ಹಣಕಾಸಿನ ಸ್ಥಿತಿ ಸುಧಾರಣೆಯಾದರೆ ಈ ರಾಜ್ಯದ ರೈತರಿಗೆ ಎಲ್ಲಾ ರೀತಿಯಲ್ಲೂ ಇನ್ನೂ ಹೆಚ್ಚಿಗೆ ಸಹಾಯ ಮಾಡಬಹುದು. ಮಾನ್ಯ ಸಭಾಪತಿಯವರೇ, ಮಾನ್ಯ ನರೇಂದ್ರ ಮೋದಿಯವರು ರೈತರಿಗೆ ಎರಡೆರಡು ಸಾವಿರದಂತೆ 3 ಕಂತುಗಳಲ್ಲಿ ಹಣವನ್ನು ಕೊಡುತ್ತೇವೆ ಎಂದು ಹೇಳಿದರು. ಆದರೆ ನಾನು ನಿಮ್ಮನ್ನು ಯಾರನ್ನೂ ಕೇಳದೆ ಎರಡು ಕಂತುಗಳಲ್ಲಿ ಎರಡೆರಡು ಸಾವಿರ ರೂಪಾಯಿಗಳನ್ನು ಕೊಡುತ್ತೇನೆ ಎಂದು ಒಪ್ಪಿಕೊಂಡು, ಈಗಾಗಲೇ ರೂ. 2 ಸಾವಿರಗಳನ್ನು ರಿಲೀಸ್ ಮಾಡಿದ್ದೇನೆ; ಬಾಕಿ ರೂ. 2 ಸಾವಿರಗಳನ್ನು ಡಿಸೆಂಬರ್ ತಿಂಗಳಿನಲ್ಲಿ ಬಿಡುಗಡೆ ಮಾಡುತ್ತೇನೆ. ಹಣಕಾಸಿನ ಪರಿಸ್ಥಿತಿ ಚೆನ್ನಾಗಿದ್ದಿದ್ದರೆ ನಿಮ್ಮಂಥ ಹಿರಿಯ ನಾಯಕರು ಚರ್ಚೆ ಮಾಡುವುದಕ್ಕೆ ಮುಂಚೆಯೇ ನಾನು ಸ್ಪಂದಿಸುತ್ತಿದ್ದೆ. ಅಷ್ಟು ಹಣವನ್ನು ಭರ್ತಿ ಮಾಡುವ ಸ್ಥಿತಿಯಲ್ಲಿ ನಾವಿಲ್ಲ. ದಯಮಾಡಿ ಕ್ಷಮಿಸಿ, ಸಹಕರಿಸಿ. ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳ ಬಗ್ಗೆ ನಮಗೆ ಗೌರವ ಇದೆ. ಇದನ್ನು "ರಾಷ್ಟ್ರೀಯ ವಿಪತ್ತು" ಎಂದು ಘೋಷಣೆ ಮಾಡಿದರೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣ ತರುವುದಕ್ಕೆ ಸಾಧ್ಯವಾಗುತ್ತದೆ. ತಾವು ಇವತ್ತು ಸಪ್ಲಿಮೆಂಟರಿ ಬಜೆಟ್ ಮಂಡಿಸಿದಿರಿ. ರೂ. 10 ಸಾವಿರ ಕೋಟಿಯನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕೇಳಿದ್ದರೆ ನಾವೆಲ್ಲಾ 'ತಥಾಸ್ತು' ಎಂದು ಹೇಳುತ್ತಿದ್ದೆವು. ಈ ರಾಜ್ಯ ಸರ್ಕಾರದವರು ರೂ. 10 ಸಾವಿರ ಕೋಟಿ ಮತ್ತು ಕೇಂದ್ರ ಸರ್ಕಾರ ರೂ. 10 ಸಾವಿರ ಕೋಟಿಯನ್ನು ಕೊಟ್ಟಿದ್ದರೆ ಬೇಡಿಕೆಗಳೆಲ್ಲವೂ ಈಡೇರುತ್ತಿತ್ತು. ಮಾನ್ಯ ಯಡಿಯೂರಪ್ಪನವರು ವ್ಯಕ್ತಪಡಿಸುತ್ತಿರುವ ಅಸಹಾಯಕತೆಯನ್ನು ನೋಡಿದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನನಗೆ ಆಶ್ಚರ್ಯವಾಗುತ್ತಿದೆ. ಒಂದು ಕಾಲದಲ್ಲಿ 'ಮಾನ್ಯ ಯಡಿಯೂರಪ್ಪನವರು ಗುಡುಗಿದರೆ ವಿಧಾನಸೌಧ ನಡುಗುತ್ತಿತ್ತು' ಎಂದು ಹೇಳುವ ಪ್ರತೀತಿ ಇತ್ತು.

(ಮುಂದು . . .)

(210)12-10-2019 3.10 ಡಿಎಸ್-ಎಕೆ

**ಶ್ರೀ ಎಸ್.ಆರ್.ಪಾಟೀಲ್**(ಮುಂದು):-

ದೇಶದಲ್ಲಿ N.D.R.F., S.D.R.F. norms ಮೀರಿ ಎಲ್ಲೂ ಪರಿಹಾರ ಕೊಟ್ಟಿಲ್ಲ ಎಂದು ಹೇಳಿದರು. ಆಲಿಕಲ್ಲು ಮಳೆಯಾಯಿತು. ಆಲಿಕಲ್ಲು ಮಳೆಗೆ N.D.R.F. norms ಮೀರಿ ಈ ಹಿಂದೆ ನಮ್ಮ ಸರ್ಕಾರ ಎಕರೆಗೆ 25,000 ರೂಪಾಯಿ ಘೋಷಣೆ ಮಾಡಲಾಗಿತ್ತು.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಆವೊತ್ತು ಎಷ್ಟು ಎಕರೆ ಭೂಮಿ ಇತ್ತು? ಇವತ್ತು ಏಳು ಲಕ್ಷ ಹೆಕ್ಟೇರ್ ಭೂಮಿ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಏರಿಯಾ ಜಾಸ್ತಿ ಇದೆ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ, ಅದನ್ನು ನಾವು ಅಲ್ಲಗಳೆಯುವುದಿಲ್ಲ. We will not dispute it. ಏರಿಯಾ ಜಾಸ್ತಿ ಇದೆ. ಅದು ಇಷ್ಟು magnitude ಇದೆಯಲ್ಲಾ ಅವರ ಕೈ ಬಲಪಡಿಸುವುದಕ್ಕಾಗಿ ಹೇಳುತ್ತಿದ್ದೇನೆ. 'National calamity' ಎಂದು ಘೋಷಣೆ ಮಾಡಿದರೆ 10,000 ಕೋಟಿಯಲ್ಲಾ ಪೂರ್ತಿ ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಈಗ ಅವರದ್ದೇ ಸರ್ಕಾರವಿರುವುದರಿಂದ ಮಾನ್ಯ ನರೇಂದ್ರ ಮೋದಿಯವ್ವರು ಕೊಡುತ್ತಾರೆ. ರಾಜ್ಯದಲ್ಲೂ ಬಿಜೆಪಿ ಸರ್ಕಾರವಿದೆ, ಕೇಂದ್ರದಲ್ಲೂ ಬಿಜೆಪಿ ಸರ್ಕಾರವಿದೆ. ಅವರು mind ಮಾಡಿದರೆ definitely you will get money from the Centre. ಕೇಂದ್ರದಿಂದ ಹಣ ಬರದಿದ್ದರೂ ಕೂಡ State Exchequer ನಿಂದ ಹಣ ಕೊಡಿ. ಈ ರೀತಿ ಮಾಡಿದರೆ ಒಂದು ಹೊಸ ಇತಿಹಾಸ ನಿರ್ಮಾಣವಾಗುತ್ತದೆ. ಈ ರಾಜ್ಯದ ರೈತರು ಈ ದೇಶಕ್ಕೆ ಅನ್ನ ಕೊಡುವ ಧಣಿಗಳು. ಹಗಲು, ರಾತ್ರಿ ನಿದ್ರೆ, ನೀರು ಇಲ್ಲದೆ ಗಂಡ, ಹೆಂಡತಿ, ಮಕ್ಕಳು ಎಲ್ಲರೂ ಮಣ್ಣಿನಲ್ಲಿ ಮಣ್ಣಾಗಿ ದುಡಿಯುತ್ತಾರೆ. ಆದರೂ ಅವರ ಹೊಟ್ಟೆ ತುಂಬುವುದಿಲ್ಲ. ಇಂತಹ ಸಂದರ್ಭದಲ್ಲಿ ನೆರೆ ಹಾವಳಿಯಿಂದ ಸರ್ವಸ್ವವೂ ಕಳೆದುಕೊಂಡಿದ್ದಾರೆ. ಜಮೀನಿನಲ್ಲಿ ಬೆಳೆಗಳನ್ನು ಕಳೆದುಕೊಂಡಿದ್ದಾರೆ. ಮನೆಯಲ್ಲಿ ಪಾತ್ರೆ, ಪಗಡೆ, ಬಟ್ಟೆ, ಪುಸ್ತಕ, ಏನಿತ್ತು ಅವೆಲ್ಲಾ ಕಳೆದುಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಎಸ್.ಯಡಿಯೂರಪ್ಪ:–** ಮಾನ್ಯ ಸಭಾಪತಿಯವರೇ, ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಕೆಳಮನೆಗೆ ಹೋಗಬೇಕಾಗಿದೆ. ದಯಮಾಡಿ ಈ ಬಜೆಟ್‌ನ್ನು ಪಾಸ್ ಮಾಡಿಕೊಡಿ. ಮುಂದೆ ಬರುವ ದಿವಸಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ. ಹಳೆಯದಕ್ಕೆ ಸುಧಾರಣೆ ತಂದು ಏನು ಬೇಕಾದರೂ ಮಾಡೋಣ.

(ಗೊಂದಲ)

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**

**<u>ಖಂಡ 2 ಮತ್ತು 3</u>**

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**<u>ಖಂಡ 1 ಇತ್ಯಾದಿ</u>**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## (ಆ) ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕ, 2019

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಪರ್ಯಾಲೋಚಿಸಿಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಇ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2019

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಿಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 22 ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 22 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**(ಖಂಡ 2 ರಿಂದ 22 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(211+212)12–10–2019 ಬಿಕೆಪಿ–ಆರ್‌ಎನ್

**12**. ವಿಶೇಷ ಪ್ರಸ್ತಾವನೆ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ

ಅ) ವಿಷಯ:– ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಾಗಿ ನಡೆದ ನೇಮಕಾತಿ ಪರೀಕ್ಷೆಗಾಗಿ ಸಿದ್ಧಪಡಿಸಿದ ಕೀ ಉತ್ತರಗಳಲ್ಲಿ ತಪ್ಪುಗಳು ಬಂದಿರುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 11–10–2019 ರಂದು ವಿಶೇಷ ಪ್ರಸ್ತಾವನೆ ಅಡಿಯಲ್ಲಿ ಮಾನ್ಯ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ ರವರು ಮಂಡಿಸಿರುವ ವಿಷಯಕ್ಕೆ ಮಾನ್ಯ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ, ಕಾರ್ಮಿಕ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಆ)ವಿಷಯ:–** ಉತ್ತರ ಕನ್ನಡ ಜಿಲ್ಲೆಯಲ್ಲಿ 2006 ನಂತರ ನೇಮಕಗೊಂಡ ಶಾಲಾ ಶಿಕ್ಷಕರಿಗೆ ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಗೆ ಎನ್.ಪಿ.ಎಸ್. ಪಿಂಚಣಿ ಯೋಜನೆ ಜಾರಿಗೊಳಿಸುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ವಿ. ಸಂಕನೂರ ರವರು ನಿಯಮ 330–ಎ ಅಡಿಯಲ್ಲಿ ದಿನಾಂಕ 11–10–2019 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ, ಕಾರ್ಮಿಕ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ)ವಿಷಯ:–** ಪಹಣಿಯಲ್ಲಿ ನಮೂದಿಸಿದ ಬೆಳೆಯನ್ನು ಖರೀದಿಸುವ ಸರ್ಕಾರದ ನಿಯಮಗಳ ಕುರಿತು.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವಿಜಯ್ ಸಿಂಗ್ ರವರು ನಿಯಮ 330–ಎ ವಿಶೇಷ ಪ್ರಸ್ತಾವನೆಯಡಿಯಲ್ಲಿ ದಿನಾಂಕ 11–10–2019 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಗೃಹ ಹಾಗೂ ಸಹಕಾರ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಈ) ವಿಷಯ:–** ಬೀದಿಯಲ್ಲಿ ವಾಸಿಸುತ್ತಿರುವ ಜನರಿಗೆ ತಂಗುದಾಣ ನಿರ್ಮಿಸಿಕೊಡುವುದರ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆರ್. ಚೌಡರೆಡ್ಡಿ ತೂಪಲ್ಲಿ ರವರು ನಿಯಮ 330–ಎ ವಿಶೇಷ ಪ್ರಸ್ತಾವನೆಯಡಿಯಲ್ಲಿ ದಿನಾಂಕ 10–10–2019 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**13. ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಲಾದ ವಿಷಯಗಳಿಗೆ ಲಿಖಿತ ಉತ್ತರಗಳ ಮಂಡನೆ**

**ಅ) ವಿಷಯ:** ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಜಾತಿಗಣತಿಯ ಸಮೀಕ್ಷೆಯನ್ನು ನಡೆಸಲಾಗಿದ್ದು, ವರದಿಯನ್ನು ಮಂಡಿಸದಿರುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 10–10–2019 ರಂದು ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಆ) ವಿಷಯ:** ಅನುದಾನ ರಹಿತ ಆಂಗ್ಲ ಮಾಧ್ಯಮ ಶಾಲೆಗಳ ಸಿಬ್ಬಂದಿಯವರಿಗೆ ಸಿಗಬೇಕಾದ ಕನಿಷ್ಠ ಸೌಲಭ್ಯಗಳನ್ನು ಒದಗಿಸದಿರುವ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 10–10–2019 ರಂದು ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ, ಕಾರ್ಮಿಕ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಇ) ವಿಷಯ:** ರಾಜ್ಯದಲ್ಲಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಕೊರೆಯಿಸಲಾದ ಅನೇಕ ಕೊಳವೆ ಬಾವಿಗಳಿಗೆ ಇದುವರೆವಿಗೂ ವಿದ್ಯುತ್ ಸಂಪರ್ಕವನ್ನು ಒದಗಿಸದೇ ಇರುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 10–10–2019 ರಂದು ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠಯ್ಯನವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಈ) ವಿಷಯ:** ರಾಜ್ಯ ಒಕ್ಕಲಿಗರ ಸಂಘದಲ್ಲಿ ನಡೆದಿರುವ ಅಧಿಕಾರ ದುರುಪಯೋಗ, ಕಾನೂನು ಬಾಹಿರ ಕೆಲಸ ಮತ್ತು ಅವ್ಯವಹಾರಗಳ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 10–10–2019 ರಂದು ಮಾನ್ಯ ಸದಸ್ಯರಾದ ಶ್ರೀ ಅ. ದೇವೇಗೌಡ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಗೃಹ ಹಾಗೂ ಸಹಕಾರ ಸಚಿವರ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ)ವಿಷಯ:** ಇತ್ತೀಚೆಗೆ ಅಸಂಖ್ಯಾತ ಜನರು ಸೈಬರ್ ಮೂಲದ ಹಣ ಕಳವು ಮತ್ತು ವಂಚನೆಗೆ ಒಳಗಾಗುತ್ತಿರುವ ಬಗ್ಗೆ.

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 11–10–2019 ರಂದು ಮಾನ್ಯ ಸದಸ್ಯರಾದ ಶ್ರೀ ಅಪ್ಪಾಜಿಗೌಡ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಗೃಹ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಊ) ವಿಷಯ:** "2019–20ನೇ ಸಾಲಿನ ಬಜೆಟ್‌ನಲ್ಲಿ ಕ್ರೈಸ್ತ ಅಭಿವೃದ್ಧಿ ನಿಗಮದ ಸ್ಥಾಪನೆಯ ಬಗ್ಗೆ ಈವರೆವಿಗೂ ಅನುಷ್ಠಾನವಾಗದಿರುವುದರ ಬಗ್ಗೆ.

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಪಶುಸಂಗೋಪನೆ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಋ) ವಿಷಯ:** "1995ರ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮದ ಖಾಸಗಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಕುರಿತು.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ, ಕಾರ್ಮಿಕ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಎ) ವಿಷಯ:** "1995ರ ನಂತರದಿಂದ ಆರಂಭವಾದ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ.

- - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪೂರ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ, ಕಾರ್ಮಿಕ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಎ) ವಿಷಯ:-** ಸರ್ಕಾರ ಅಡಕೆ ಮಂಡಳಿ ರಚನೆ ಮಾಡುವುದಾಗಿ ಸದನದಲ್ಲಿ ಆಶ್ವಾಸನೆ ನೀಡಿದ್ದರೂ ಸಹ ಸದರಿ ಮಂಡಳಿಯನ್ನು ಇದುವರೆವಿಗೂ ರಚನೆ ಮಾಡದಿರುವ ಬಗ್ಗೆ.

- -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಐ) ವಿಷಯ:-** ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಆಡಳಿತಾಧಿಕಾರಿ ನೇಮಕಗೊಂಡು 7 ತಿಂಗಳು ಕಳೆದರೂ ನ್ಯಾಯಾಲಯದ ನಿರ್ದೇಶನದಂತೆ ಅಕ್ಟೋಬರ್ 31 ಒಳಗೆ ಚುನಾವಣೆ ನಡೆಸದಿರುವ ಬಗ್ಗೆ.

- -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಕಂದಾಯ ಮತ್ತು ಪೌರಾಡಳಿತ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಒ) ವಿಷಯ:-** ಅನ್ನಭಾಗ್ಯ ಯೋಜನೆಯಡಿಯಲ್ಲಿ ಎಪಿಎಲ್, ಬಿಪಿಎಲ್ ಹಾಗೂ ಅಂತ್ಯೋದಯ ಫಲಾನುಭವಿಗಳ ಸಂಖ್ಯೆಯಲ್ಲಿ ಕಡಿತಗೊಳಿಸಿ ಹಾಗೂ ವಿತರಿಸುತ್ತಿರುವ ಧಾನ್ಯಗಳ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿತಗೊಳಿಸುವ ಬಗ್ಗೆ.

- -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖಾ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಓ) ವಿಷಯ:-** ಲೋಕೋಪಯೋಗಿ ಇಲಾಖೆಯ 2018-19ನೇ ಸಾಲಿನ ಅಪೆಂಡಿಕ್ಸ್-ಇ ಯಲ್ಲಿ ಜಿಲ್ಲಾ ಜಿಲ್ಲಾ ಮುಖ್ಯ ರಸ್ತೆ, ರಾಜ್ಯ ಹೆದ್ದಾರಿ ಮತ್ತು ಸೇತುವೆ ನಿರ್ಮಾಣ ಮತ್ತು ಕಾಮಗಾರಿಗಳನ್ನು ತಡೆ ಹಿಡಿಯಲಾಗಿರುವ ಬಗ್ಗೆ. .

- -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಚೌಡರೆಡ್ಡಿ ಆರ್ ತೂಪಲ್ಲಿ ಹಾಗೂ ಶ್ರೀ ಎಸ್.ಅಪ್ಪಾಜಿಗೌಡರವರಗಳು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಔ) ವಿಷಯ:-** ಬೆಂಗಳೂರು ನಗರದ ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ 2015ನೇ ಸಾಲಿನಿಂದ ಭಾರತ್-03 ವಾಯುಮಾಲಿನ್ಯ ನಾಲ್ಕು ಚಕ್ರದ ಸಾವಿರಾರು ವಾಹನಗಳನ್ನು ಕಾನೂನು ಬಾಹಿರವಾಗಿ ಅಧಿಕಾರಿಗಳು ಶಾಮೀಲಾಗಿ ನೋಂದಣಿ ಮಾಡಿರುವುದಲ್ಲದೇ, ಇಲಾಖೆಯ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವುಂಟು ಮಾಡಿರುವ ಬಗ್ಗೆ.

- - -

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 72 ಮತ್ತು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಅಂ)** ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೂ ಪರಿವರ್ತನೆಯಾಗದೆ ಅನಧಿಕೃತವಾಗಿ ನಿರ್ಮಿಸಿರುವ ರೆವಿನ್ಯೂ ನಿವೇಶನಗಳಿಗೆ ಸುಧಾರಣಾ ವೆಚ್ಚ/ಮೇಲ್ವಾಟು ವೆಚ್ಚ ಪಾವತಿಸಿಕೊಂಡು ಸದರಿ ನಿವೇಶನಗಳನ್ನು ಸಕ್ರಮಗೊಳಿಸುವ ಯೋಜನೆ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ರವರು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಅಃ) ವಿಷಯ:-** ರಾಯಚೂರು ಜಿಲ್ಲೆಯಲ್ಲಿ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ವಿಳಂಬವಾಗಿರುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀ ಎನ್.ಎಸ್.ಬೋಸ್‌ರಾಜು, ಶ್ರೀ ಶರಣಪ್ಪ ಮಟ್ಟೂರು ಮತ್ತು ಶ್ರೀ ಬಸವರಾಜ ಪಾಟೀಲ್ ಇಟಗಿ ಇವರುಗಳು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 14. ಸಾರಾಂಶ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಸದನವನ್ನು ಬಹಳ ಅಚ್ಚುಕಟ್ಟಾಗಿ ನಡೆಸಿಕೊಟ್ಟಿದ್ದೀರಿ. ಅನೇಕ ಸಮಸ್ಯೆಗಳು ಸದನದಲ್ಲಿ ಚರ್ಚೆಯಾಗಿವೆ. ಅದರಲ್ಲೂ ಕರ್ನಾಟಕದಲ್ಲಿ ಈ ಶತಮಾನವನ್ನು ಕಾಡಿರುವಂತಹ ನೆರೆ ಹಾವಳಿ (ವಿಪತ್ತುಗಳ) ಬಗ್ಗೆ ಚರ್ಚೆ ಮಾಡುತ್ತಿರುವಾಗ ತಾವು ಬಹಳ ತಾಳ್ಮೆಯಿಂದ ಎಲ್ಲರ ವಿಚಾರಗಳನ್ನು ಅರ್ಥ ಮಾಡಿಕೊಂಡು ಸದನವನ್ನು ನಡೆಸಿಕೊಟ್ಟಿದ್ದೀರಿ. ರಾತ್ರಿ ಸಭೆ ಮುಗಿಯುವಾಗ 9 ಗಂಟೆ 15 ನಿಮಿಷಗಳು ಆಗಿತ್ತು. ಇಷ್ಟೊಂದು ಸುಧೀರ್ಘ ಸಮಯ ತಮ್ಮ ಪೀಠದಲ್ಲಿ ಕುಳಿತುಕೊಂಡು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅತ್ಯಂತ ಅರ್ಥಪೂರ್ಣವಾಗಿ ಸದನವನ್ನು ನಡೆಸಿಕೊಟ್ಟಿದ್ದೀರಿ ಎನ್ನುವ ಕಾರಣಕ್ಕೆ ಸದನದ ಪರವಾಗಿ ಮತ್ತು ಸರ್ಕಾರದ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಅದೇ ರೀತಿಯಲ್ಲಿ ವಿರೋಧ ಪಕ್ಷಗಳು ಅನೇಕ ಟೀಕೆ-ಟಿಪ್ಪಣಿಗಳನ್ನು, ಅಭಿಪ್ರಾಯಗಳನ್ನು ಕೊಟ್ಟಿರಬಹುದು. ಆದಾಗ್ಯೂ ಕೂಡ ಅವರುಗಳಿಗೆ ಸಮಾಜದ ಬಗ್ಗೆ ತುಂಬಾ ಕಾಳಜಿ ಇದೆ ಎನ್ನುವುದು ಈ ರಾಜ್ಯದ ಜನರಿಗೆ ಅರ್ಥವಾಗಿದೆ. ಆ ಹಿನ್ನೆಲೆಯಲ್ಲಿ ನಾನು ವಿರೋಧ ಪಕ್ಷದವರಿಗೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸಹ ಈ ಸಮಯದಲ್ಲಿ ಮಾರ್ಗದರ್ಶನವನ್ನು ಕೊಟ್ಟಿದ್ದು, ಅವರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಜೊತೆಗೆ ಮಾಧ್ಯಮದ ಮಿತ್ರರೂ ಸಹ ನಮ್ಮ ಜೊತೆ ಸುಧೀರ್ಘ ಸಮಯ ಸದನದಲ್ಲಿ ಕುಳಿತು ಅರ್ಥಪೂರ್ಣವಾದಂತಹ ವರದಿಗಳನ್ನು ಮಾಡುವುದರ ಮೂಲಕ ಸರ್ಕಾರದ ಎಲ್ಲಾ ವಿಚಾರಗಳಿಗೆ ಸ್ಪಂದಿಸಿದ್ದಾರೆ. ಈ ಸಂದರ್ಭದಲ್ಲಿ ಮಾಧ್ಯಮದವರಿಗೆ ಹಾಗೂ ನಮ್ಮೆಲ್ಲಾ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದಂತಹ ಎಲ್ಲರಿಗೂ ಕೂಡ ತಮ್ಮ ಮೂಲಕ ಧನ್ಯವಾದಗಳನ್ನು ಸಮರ್ಪಣೆ ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೂರು ದಿನಗಳ ಕಾಲ ಅತ್ಯುತ್ತಮ ರೀತಿಯಿಂದ ಮೇಲ್ಮನೆಯ ಕಾರ್ಯಕಲಾಪಗಳನ್ನು ನಡೆಸಿ ಅತ್ಯಂತ ಗೌರವಕ್ಕೆ ತಾವು ಭಾಜನರಾಗಿದ್ದೀರಿ. ಬಹುತರವಾಗಿ ಈ ಬಾರಿ ಮೇಲ್ಮನೆಯಲ್ಲಿ ನೆರೆ ಭಾದಿತ ಕುಟುಂಬಗಳ ಪರವಾಗಿ ಹಾಗೂ ಜನರ ಪರವಾಗಿ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಸದಸ್ಯರುಗಳು ಸುಮಾರು 30 ಸದಸ್ಯರಿಗಿಂತ ಹೆಚ್ಚು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಉತ್ತಮ ರೀತಿಯಲ್ಲಿ ಕಾರ್ಯಕಲಾಪವನ್ನು ನಡೆಸಿದಂತಹ ಗೌರವಾನ್ವಿತ ಸಭಾಪತಿಯವರಿಗೆ ಪ್ರತಿ ಪಕ್ಷದ ಪರವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪ್ರಸ್ತುತ ಸದನದಲ್ಲಿ ಉಪ ಸಭಾಪತಿಯವರು ಹಾಜರಿರುವುದಿಲ್ಲ. ಅವರಿಗೂ ಕೂಡ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಗೌರವಾನ್ವಿತ ಮುಖ್ಯಮಂತ್ರಿಗಳು ಈ ಮೂರು ದಿನಗಳ ಕಾರ್ಯಕಲಾಪಗಳಲ್ಲಿ ಧನವಿನಿಯೋಗ ವಿಧೇಯಕಗಳನ್ನು ತಂದು, ಅದರ ಬಗ್ಗೆ ಕೆಲವೊಂದು ವಿಚಾರಗಳಿಗೆ ಸಕಾರಾತ್ಮಕವಾದ ಪ್ರತಿಕ್ರಿಯೆ ವ್ಯಕ್ತ ಮಾಡಿದಂತಹ ಗೌರವಾನ್ವಿತ ಮುಖ್ಯಮಂತ್ರಿಗಳಿಗೂ ಕೂಡ ನಮ್ಮ ಎಲ್ಲಾ ಪ್ರತಿಪಕ್ಷದ ಶಾಸಕ ಮಿತ್ರರ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅದೇ ರೀತಿಯಲ್ಲಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಿಗೂ ಕೂಡ ನಾನು ಹೃದಯಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ಸಭಾನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರಿಗೂ ಮತ್ತು ನಮ್ಮ ನಡುವೆ ವಗ್ವಾದಗಳು ಆಗಿರಬಹುದು. ಆದರೂ ಕೂಡ ಅವರು ಉತ್ತಮ ರೀತಿಯಿಂದ ಸಭಾನಾಯಕರಾಗಿ ಕಾರ್ಯನಿರ್ವಹಿಸಿರುವುದಕ್ಕೆ ಅವರಿಗೂ ಕೂಡ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಸಂಪುಟದ ಉಪ ಮುಖ್ಯಮಂತ್ರಿಗಳಿಗೆ, ಸಚಿವರುಗಳಿಗೆ ಪ್ರತಿ ಪಕ್ಷದ ನಮ್ಮ ಎಲ್ಲಾ ಶಾಸಕರ ಮಿತ್ರರ ಪರವಾಗಿ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅದೇ ರೀತಿಯಲ್ಲಿ ಆಡಳಿತ ಪಕ್ಷದ ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಅವರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ನಮ್ಮ ಪಕ್ಷದ ಎಲ್ಲಾ ಸಹದ್ಯೋಗಿ ಶಾಸಕ ಮಿತ್ರರುಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಜಾತ್ಯಾತೀತ ಜನತಾದಳದ ಶಾಸಕ ಮಿತ್ರರುಗಳಿಗೂ ಕೂಡ ನಮ್ಮ ಪಕ್ಷದ ಎಲ್ಲಾ ಶಾಸಕರುಗಳ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಜೊತೆಗೆ ಈ ಮೂರು ದಿವಸಗಳ ಕಾಲ ನಮ್ಮ ಅಧಿಕಾರಿ ಮಿತ್ರರು ಉಪಸ್ಥಿತಿ ತಮಗೆ ವಹಿಸಿದ ಕೆಲಸಗಳನ್ನು ಚಾಚುತಪ್ಪದೇ ಕೆಲಸಗಳನ್ನು ಮಾಡಿದ್ದಾರೆ. ಅವರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನು ಮಾಧ್ಯಮದವರು ಅಂದರೆ, ಅವರು ಪ್ರಿಂಟ್ ಮೀಡಿಯಾದವರು ಇರಬಹುದು, ದೃಶ್ಯ ಮಾಧ್ಯಮದವರು ಇರಬಹುದು. ಇವರುಗಳ ಸಲುವಾಗಿ ತಾವು ಅನುಕೂಲವನ್ನು ಮಾಡಿಕೊಟ್ಟಿದ್ದೀರಿ. ಕೆಳ ಮನೆಯ ರೀತಿಯಲ್ಲಿ ಇವರುಗಳಿಗೆ ಇಲ್ಲಿ ತೊಂದರೆಯಾಗಿರುವುದಿಲ್ಲ. ಅವರುಗಳಿಗೆ ಒಳ್ಳೆಯ ಅವಕಾಶವನ್ನು ಕೊಟ್ಟಿದ್ದೀರಿ. ಏಕೆಂದರೆ, ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಎನ್ನುವ ಮೂರು ಅಂಗಗಳು ಈ ಪ್ರಜಾಪ್ರಭುತ್ವದಲ್ಲಿವೆ. ಅದೇ ರೀತಿಯಲ್ಲಿ 4ನೇ ಪ್ರಮುಖ ಅಂಗ ಎಂದರೆ ನನ್ನ ದೃಷ್ಟಿಯಲ್ಲಿ ಪತ್ರಿಕಾರಂಗ(ಮಾಧ್ಯಮದವರು).

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'Freedom of Press' ಇದನ್ನು upheld ಮಾಡಿದ್ದೀರಿ. ಸಂವಿಧಾನದ ಮೂಲಭೂತ ಹಕ್ಕಾದ Freedom of Press ಅನ್ನು upheld ಮಾಡಿ ಅವರೆಲ್ಲರಿಗೂ ಇಲ್ಲಿ ಅವಕಾಶ ಕಲ್ಪಿಸಿದ್ದೀರಿ. ಅವರೆಲ್ಲರೂ ಸಹ 3 ದಿನಗಳ ಕಲಾಪವನ್ನು ಬಹಳ ವಿಧಿವತ್ತಾಗಿ, ಅತ್ಯಂತ ಸಮರ್ಥವಾಗಿ, ನಾಡಿನ ಜನತೆಗೆ ನಾವು ಏನೇನು ಕೆಲಸ-ಕಾರ್ಯಗಳನ್ನು ಮಾಡಿದ್ದೇವೆ ಎನ್ನುವುದನ್ನು ಒಳ್ಳೆಯ ರೀತಿಯಿಂದ ಬಿತ್ತರಿಸಿದಂತಹ ಮಾಧ್ಯಮದ ಎಲ್ಲಾ ಮಿತ್ರರಿಗೂ ಕೂಡ ಈ ಸಂದರ್ಭದಲ್ಲಿ ನಮ್ಮ ಪಕ್ಷದ ಎಲ್ಲಾ ಶಾಸಕ ಮಿತ್ರರ ಪರವಾಗಿ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು, ಎಲ್ಲಾ ಹಿರಿಯ, ಕಿರಿಯ ಅಧಿಕಾರಿಗಳಿಗೆ, ಸಿಬ್ಬಂದಿ ವರ್ಗದವರಿಗೆ ಮೂರು ದಿನ ಕಲಾಪದಲ್ಲಿ ಸಹಕರಿಸಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಕ್ಕಾಗಿ ನಮ್ಮ ಪಕ್ಷದ ಎಲ್ಲಾ ಶಾಸಕ ಸ್ನೇಹಿತರ ಪರವಾಗಿ ಕೃತಜ್ಞತೆಯನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:** ವಿಧಾನ ಪರಿಷತ್ತಿನ 139ನೇ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ: 10.10.2019ರಿಂದ 12.10.2019ರವರೆಗೆ ಒಟ್ಟು 03 ದಿನಗಳು ಎಂದರೆ 16 ಗಂಟೆ 45 ನಿಮಿಷಗಳು ನಡೆಸಲಾಗಿರುತ್ತದೆ.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ 08 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕರ್ನಾಟಕ ವಿಧಾನ ಮಂಡಲದ ಅನುಸುಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 2ನೇ ವರದಿಯನ್ನು, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 28ನೇ ವರದಿಯನ್ನು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 35ನೇ ವರದಿಯನ್ನು ಹಾಗೂ ಅಧೀನ ಶಾಸನ ರಚನಾ ಸಮಿತಿಯ 47ನೇ ವರದಿಯನ್ನು ಸದನದ ಮುಂದೆ ಮಂಡಿಸಲಾಯಿತು.

**ಹಾಗೂ**

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋದಕರು ನೀಡಿರುವ ಈ ಕೆಳಕಂಡ ವರದಿಗಳನ್ನು ಸದನದ ಮುಂದೆ ಮಂಡಿಸಲಾಯಿತು.

01. ರಾಜಸ್ವ ವಲಯದ ಮೇಲಿನ ವರದಿ (ಸಂಖ್ಯೆ-1)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

02. ಆರ್ಥಿಕ ವಲಯದ ಮೇಲಿನ ವರದಿ (ಸಂಖ್ಯೆ-3)

03. ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ (ಸಂ-2)

04. ಸಾಮಾನ್ಯ ಮತ್ತು ಸಾಮಾಜಿಕ ವಲಯದ ವರದಿ ( ಸಂಖ್ಯೆ-4)

05. ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 4 ಪಟ್ಟಿಗಳನ್ನು ಸದನದಲ್ಲಿ ಮಂಡಿಸಲಾಯಿತು.

ನಿಯಮ 72ರಡಿಯಲ್ಲಿ 34 ಸೂಚನೆಗಳನ್ನು ಸ್ವೀಕರಿಸಿದ್ದು, 12 ಸೂಚನೆಗಳಿಗೆ ಹಾಗೂ ನಿಯಮ 330ರಡಿಯಲ್ಲಿ 10 ಸೂಚನೆಗಳನ್ನು ಸ್ವೀಕರಿಸಿದ್ದು, 04 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು. ನಿಯಮ 330ಎ ಅಡಿಯಲ್ಲಿ 10 ಸೂಚನೆಗಳನ್ನು ಪ್ರಸ್ತಾಪಿಸಿದ್ದು, ಒಂದು ಸೂಚನೆಗೆ ಮಾನ್ಯ ಸಚಿವರು ಉತ್ತರಿಸಲಾಗಿದ್ದು, 05 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ಪ್ರಸಕ್ತ ಅಧಿವೇಶನದಲ್ಲಿ ನಿಯಮ 59ರ ಅಡಿಯಲ್ಲಿ ಒಂದು ಸೂಚನೆಯನ್ನು ಸ್ವೀಕರಿಸಲಾಗಿದ್ದು, ಸದರಿ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ **11 ಗಂಟೆ 42 ನಿಮಿಷಗಳ ಕಾಲ** ಚರ್ಚೆಯಾಗಿ ಸರ್ಕಾರದಿಂದ ಉತ್ತರಿಸಲಾಗಿರುತ್ತದೆ.

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಗೋವಿಂದರಾಜು ಅವರು ಭಾರತೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟದ ಅಧ್ಯಕ್ಷರಾಗಿ ಪುನರಾಯ್ಕೆಯಾಗಿರುವುದರಿಂದ ಹಾಗೂ ಇವರನ್ನು ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಒಕ್ಕೂಟವು ಫಿಬಾ ಸ್ಪರ್ಧಾ ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಿರುವ ಹಿನ್ನಲೆಯಲ್ಲಿ ಮಾನ್ಯ ಸದಸ್ಯರಾದ ಡಾ:ವೈ.ಎ.ನಾರಾಯಣಸ್ವಾಮಿಯವರು ಮಂಡಿಸಿದ ಅಭಿನಂದನಾ ನಿರ್ಣಯವನ್ನು ಸದನವು ಅಂಗೀಕರಿಸಿತು.

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಜಲಪ್ರಳಯದಲ್ಲಿ ಸಿಲುಕಿದ್ದ ಜನರನ್ನು ಹಾಗೂ ಜಾನುವಾರುಗಳನ್ನು ರಕ್ಷಿಸಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಮಾನ್ಯ ಸಭಾಪತಿಯವರು ಮಂಡಿಸಿದ ಅಭಿನಂದನಾ ನಿರ್ಣಯವನ್ನು ಸದನವು ಅಂಗೀಕರಿಸಿತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.**

01. ಕರ್ನಾಟಕ ಧನವಿನಿಯೋಗ (ಸಂಖ್ಯೆ.3) ವಿಧೇಯಕ, 2019
02. ಕರ್ನಾಟಕ ಧನವಿನಿಯೋಗ (ಸಂಖ್ಯೆ.4) ವಿಧೇಯಕ, 2019
03. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2019

ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರರು ಹಾಗೂ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ರಾಷ್ಟ್ರಗೀತೆಯೊಂದಿಗೆ ಮಧ್ಯಾಹ್ನ 03 ಗಂಟೆ 32 ನಿಮಿಷಕ್ಕೆ ಅನಿರ್ದಿಷ್ಟ ಅವಧಿಗೆ ಮುಂದೂಡಲ್ಪಟ್ಟಿತು)**

~~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~